ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

Blog: janashakthi.wordpress.com e-mail: js_weekly@yahoo.com

ಸಂಪುಟ 6 ಸಂಚಿಕೆ 08
ಫೆಬ್ರವರಿ 19, 2012

ಪುಟ 16 ರೂ. 5/-





ದುಡಿವ ವರ್ಗದ ವಿಶಾಲ ಐಕ್ಯತೆ: ಮಹಾನ್ ಚಾರಿತ್ರಿಕ ಮುಷ್ಕರದ ಸನ್ನದ್ಧತೆ



ರೇವ್ ಪಾರ್ಟಿ: ಬಯಲಾಯಿತು ಸಂಸ್ಕೃತಿ 'ವಾರಸುದಾರರ' ನಿಜ ಬಣ್ಣ





ಬರದ ಬೇಗೆಯಲ್ಲಿ ಜನ ಲೈಂಗಿಕ ದೃಶ್ಯದಲ್ಲಿ ಮೈಮರೆತ ಮಂತ್ರಿಗಳು!

ಕೇಂದ್ರ ಸರಕಾರ: ದಿವಾಳಿತನಕ್ಕೆ ಸಮರ್ಪಿಸಿಕೊಂಡ ದಿಕ್ಕೇಡಿ ಸರ್ಕಾರ

ಸದನದಲ್ಲಿ ಅಶ್ಲೀಲ ವಿಡಿಯೋ ವೀಕ್ಷಣೆ ಲಂಪಟ ಸಚಿವರ ಮೇಲೆ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ

ಕರ್ನಾಟಕ ರಾಜ್ಯ ಇಂದು ಪದೇ ಪದೇ ದೇಶದ ಗಮನ ಸೆಳೆಯುತ್ತಾ ದೇಶವ್ಯಾಪಿ ಚರ್ಚೆಯ ಕೇಂದ್ರವಾಗುತ್ತಿದೆ. ಅದರಲ್ಲೂ ಬಿಜೆಪಿ ಪಕ್ಷದ ಸರ್ಕಾರವು ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮೇಲಂತೂ ಇದು ಪದೇ ಪದೇ ನಡೆಯುತ್ತಿದೆ. ದುರಂತ ಎಂದರೆ ಈ ರೀತಿ ಪ್ರತಿ ಬಾರಿ ಸುದ್ದಿಯಾದಾಗಲೂ ನಾಡಿನ ಜನರು ತಲೆ ತಗ್ಗಿಸಬೇಕಾದಂತಹ ಪರಿಸ್ಥಿತಿಯೇ ಬರುತ್ತಿದೆ.

ದೇಶ ಕಂಡು ಕೇಳರಿಯದಿದ್ದ ಆಪರೇಷನ್ ಕಮಲದ ಅಸಹ್ಯ ಕಾರ್ಯಾಚರಣೆ, ದೇಶ ಹಿಂದೆಂದು ಕಾಣದಂತಹ ಅಗಾಧ ಗಣಿ ಸಂಪತ್ತಿನ ನಿರ್ಲಜ್ಜ ಲೂಟಿ, ಬಿಜೆಪಿ ಮುಖ್ಯಮಂತ್ರಿಯಿಂದ ಆರಂಭಿಸಿ ಸಚಿವರು, ಶಾಸಕರು, ಬಿಜೆಪಿ ಮುಖಂಡರು, ಅವರ ಬಂಧುಗಳ ಸಾಲು ಸಾಲು ಜೈಲು ಯಾತ್ರೆ...ಜೊತೆಗೆ ಕ್ರಿಮಿನಲ್ ಲೈಂಗಿಕ ಅಪರಾಧಗಳೂ, ಲಂಪಟತನ, ಲೈಂಗಿಕ ಹಗರಣಗಳ ನಿರಂತರ ಸ್ಫೋಟಗಳು. ಈಗ ರಾಜ್ಯ ಬಿಜೆಪಿ ಸರ್ಕಾರದ ಮೂವರು ಸಚಿವರು ದೇಶದಾದ್ಯಂತ ಪರಿಚಿತರು. ಸದನದಲ್ಲಿ ಬರ ಪರಿಹಾರ ನಿರ್ವಹಣೆಯ ವೈಫಲ್ಯ, ರೇವು ಪಾರ್ಟಿಗಳ ಹಾವಳಿಗಳ ಕುರಿತು ಚರ್ಚೆ ನಡೆಸುತ್ತಿರುವಾಗ ಮಹಿಳೆಯೊಬ್ಬಳು ವಿವಸ್ತ್ರಳಾಗುವ ವಿಡಿಯೋ ದೃಶ್ಯವನ್ನು ನೋಡುತ್ತಾ ಆನಂದ ಪಡುವ ಸಚಿವರು....ಎಂತಹ ನಾಚಿಕೆಗೇಡಿನ ಪ್ರಸಂಗ !!!

ಬಿಜೆಪಿ ಸರ್ಕಾರದ ಸಚಿವರ ಈ ಹೀನಾಯ ಲಜ್ಜೆಗೇಡಿ ವರ್ತನೆಯನ್ನು ಖಂಡಿಸಿ, ಸಚಿವ ಸ್ಥಾನಗಳಿಗೆ ಅವರು ರಾಜಿನಾಮೆ ಕೊಡುವುದಷ್ಟೆ ಸಾಲದು, ಅವರ ಶಾಸಕತ್ವವನ್ನೂ ರದ್ದು ಮಾಡಬೇಕೆಂದು ಒತ್ತಾಯಿಸಿ, ನೀತಿಗೆಟ್ಟ ರಾಜ್ಯ ಬಿಜೆಪಿ ಸರ್ಕಾರವೇ ತೊಲಗಬೇಕೆಂದು ಆಗ್ರಹಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ರಾಜ್ಯವ್ಯಾಪಿಯಾಗಿ ಪ್ರತಿಭಟನೆ ನಡೆಸಿತು. ವಿವಿಧ ಸಾಮೂಹಿಕ ಸಂಘಟನೆಗಳು ಸಹ ರಾಜ್ಯವ್ಯಾಪಿಯಾಗಿ ಹೋರಾಟಗಳನ್ನು ನಡೆಸಿವೆ.

ಬೆಂಗಳೂರಿನ ಮೈಸೂರು ಬ್ಯಾಂಕ್ ಸರ್ಕಲ್ ಬಳಿಯಲ್ಲಿ ಸೇರಿದ್ದ ಸಿಪಿಐ(ಎಂ) ಮುಖಂಡರು, ನೂರಕ್ಕೂ ಹೆಚ್ಚು ಕಾರ್ಯಕರ್ತರು ಸಚಿವರಾದ ಲಕ್ಷಣ ಸವದಿ, ಸಿ.ಸಿ.ಪಾಟೀಲ್, ಕೃಷ್ಣ ಪಾಲೇಮಾರ್ ಅವರ ಸಾಂಕೇತಿಕ ಪ್ರತಿಕೃತಿಯನ್ನು ಸುಟ್ಟು ತೀವ್ರವಾಗಿ ಪ್ರತಿಭಟಿಸಿದರು. ಇದಕ್ಕೂ ಮೊದಲು ಖ್ಯಾತ ಚಿಂತಕ ಪ್ರೊ. ಜಿ.ಕೆ. ಗೋವಿಂದರಾವ್‌ರವರು ಮಾತನಾಡಿ ರಾಜ್ಯದಲ್ಲಿ ಮೂರು ಬಿಜೆಪಿ ಸರ್ಕಾರಗಳಿವೆ, ಒಂದು ಬೆಂಗಳೂರಿನ ಕೇಶವ ಕೃಪದಲ್ಲಿದೆ. ಮತ್ತೊಂದು ವಿಧಾನ ಸೌಧದಲ್ಲಿದೆ. ಅದು(ಅಶ್ಲೀಲ ದೃಶ್ಯಗಳಿರುವ) ಮೊಬೈಲ್ ಸರ್ಕಾರ, ಮತ್ತೊಂದು ಪರಪ್ಪನ ಅಗ್ರಹಾರದಲ್ಲಿದೆ ಎಂದು ಚುಚ್ಚಿದರು. ಸಿಪಿಐ(ಎಂ) ಬೆಂಗಳೂರು ಕಾರ್ಯದರ್ಶಿ ಕೆ. ಪ್ರಕಾಶ್ ಅವರು ಮಾತನಾಡಿ ಬಿಜೆಪಿ ಸರ್ಕಾರದ ಮಾನಗೇಡಿ, ಲಜ್ಜೆಗೇಡಿತನವನ್ನು ಖಂಡಿಸಿದರು. ಭೂತದಹನ ನಂತರ ಪೋಲಿಸರು ಪ್ರತಿಭಟನಾಕಾರರನ್ನು ಬಂಧಿಸಿ ಕರೆದೊಯ್ದರು. ಸಾಕಷ್ಟು ಸಂಖ್ಯೆಯ ಮಹಿಳೆಯರು ಹಾಗೂ ಗೋವಿಂದರಾವ್ ಸೇರಿದಂತೆ ಜನರನ್ನು ಬಂಧಿಸಲಾಯಿತು.


ಬೆಂಗಳೂರಿನಲ್ಲಿ ಜೆಎಂಎಸ್–ಸಿಪಿಐ(ಎಂ) ಪ್ರತಿಭಟನೆ–ಬಂಧನ


ಮಂಗಳೂರಿನಲ್ಲಿ ಡಿವೈಎಫ್ಐ ಪ್ರತಿಭಟನೆ


ಕೊಡಗಿನ ಸಿದ್ದಾಪುರದಲ್ಲಿ ಪ್ರತಿಭಟನೆ

ಚಿಕ್ಕಬಳ್ಳಾಪುರ ಜಿಲ್ಲೆಯ ಆರು ತಾಲೂಕು ಕೇಂದ್ರಗಳಲ್ಲಿ ಅಂದರೆ ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಗುಡಿಬಂಡೆ, ಚಿಂತಾಮಣಿ, ಗೌರಿಬಿದನೂರು, ಶಿಡ್ಲಘಟ್ಟಗಳಲ್ಲಿ ಪ್ರತಿಭಟನೆ ನಡೆದಿದೆ. ಈ ಒಟ್ಟು ಪ್ರತಿಭಟನೆಗಳಲ್ಲಿ ಸುಮಾರು 1,000 ಜನ ಸೇರಿದ್ದರು. ಶಿಡ್ಲಘಟ್ಟದಲ್ಲಿ ಎಸ್‌ಎಫ್‌ಐನಿಂದ ಪ್ರತಿಭಟನೆಯನ್ನು ನಡೆಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಘಟನೆ ನಡೆದ ದಿನವೇ ಡಿವೈಎಫ್‌ಐನ ಪಂಜಿಮೊಗರು ಘಟಕದಿಂದ ಕುಳೂರಿನಲ್ಲಿ ಜಿಲ್ಲಾ ಕಾರ್ಯದರ್ಶಿ ದಯಾನಂದಶೆಟ್ಟಿ ನೇತೃತ್ವದಲ್ಲಿ ಪ್ರತಿಭಟನೆ ನಡೆದಿದೆ. ಮಾರನೇ ದಿನ ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಛೇರಿ ಬಳಿ ಪ್ರತಿಭಟನೆ ನಡೆದಿದೆ. ಸುಮಾರು 150 ಜನ ಭಾಗವಹಿಸಿದ್ದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಿ.ಮಾಧವರವರು ಮಾತನಾಡಿದರು. ಪುತ್ತೂರುನಲ್ಲಿ ಜನವಾದಿ ಮಹಿಳಾ ಸಂಘಟನೆ ವತಿಯಿಂದ ಸುಕನ್ಯರವರ ನೇತೃತ್ವದಲ್ಲಿ ಪ್ರತಿಭಟನೆ ನಡೆದಿದೆ.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನಲ್ಲಿ ಪ್ರತಿಭಟನೆ ನಡೆಸಿ ಭೂತ ದಹನ ಮಾಡಲಾಗಿದೆ. ಅಂಗನವಾಡಿ ಮತ್ತು ಪೌರ ಕಾರ್ಮಿಕರು ಸೇರಿದಂತೆ ಹಲವರು ಭಾಗವಹಿಸಿದ್ದರು. ದಾಂಡೇಲಿ ಮತ್ತು ಕಾರವಾರದಲ್ಲಿ ಪ್ರತಿಭಟನೆಗಳು ನಡೆದಿವೆ.

ರಾಯಚೂರು ಜಿಲ್ಲೆಯ ಜಾಲಹಳ್ಳಿಯಲ್ಲಿ 150 ಜನ ಸೇರಿ ಪ್ರತಿಭಟನೆ ಮಾಡಿ ರಸ್ತೆ ತಡೆ ಮಾಡಲಾಗಿದೆ. ಹಟ್ಟಿಯಲ್ಲಿ ಎಸ್.ಎಫ್.ಐ–ಡಿವೈಎಫ್ಐ ನೇತೃತ್ವದಲ್ಲಿ ಮಾನವ ಸರಪಳಿ ನಡೆಸಿ ಪ್ರತಿಭಟಿಸಲಾಗಿದೆ. ರಾಯಚೂರು ಮತ್ತು ಸಿಂಧನೂರಿನಲ್ಲೂ ಪ್ರತಿಭಟನೆ ನಡೆದಿದೆ.

ಬಳ್ಳಾರಿ ಜಿಲ್ಲೆಯ ಸಿರುಗುಪ್ಪದಲ್ಲಿ ರಸ್ತೆ ತಡೆ, ಬಳ್ಳಾರಿಯಲ್ಲಿ ಭೂತ ದಹನ ಮತ್ತು ಪ್ರತಿಭಟನೆ, ಹೊಸಪೇಟೆ ಮತ್ತು ಹಗರಿಬೊಮ್ಮನಹಳ್ಳಿಯಲ್ಲಿ ಪ್ರತಿಭಟನೆ ನಡೆಸಲಾಗಿದೆ.

ಗುಲ್ಬರ್ಗಾದಲ್ಲಿ ಜೆ.ಎಂ.ಎಸ್.ವತಿಯಿಂದ ಪ್ರತಿಭಟನೆ ನಡೆದಿದೆ. ಚಿಂಚೋಳಿಯಲ್ಲಿ ಪ್ರತಿಭಟಿಸಿ ಭೂತ ದಹನ ಮಾಡಲಾಗಿದೆ.

ದಾವಣಗೆರೆಯ ಗಾಂಧಿ ವೃತ್ತದಲ್ಲಿ ಸಿಪಿಐ(ಎಂ) ಪಕ್ಷದಿಂದ ಪ್ರತಿಭಟನೆ ನಡೆದಿದೆ. ಹರಪನಹಳ್ಳಿಯಲ್ಲಿ ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ವತಿಯಿಂದ ಪ್ರತಿಭಟನೆ ನಡೆದಿದೆ.

ಹಾವೇರಿಯಲ್ಲಿ ಸಿಪಿಐ(ಎಂ) ವತಿಯಿಂದ ಪ್ರತಿಭಟನೆ ನಡೆದಿದೆ. ಗಜೇಂದ್ರಗಡದಲ್ಲಿ ಎಸ್‌ಎಫ್‌ಐ ವತಿಯಿಂದ ಪ್ರತಿಭಟನೆ, ಗದಗ್‌ನಿಂದ ಸಿಪಿಐ(ಎಂ)ನಿಂದ ಪ್ರತಿಭಟನೆ ಮತ್ತು ಭೂತ ದಹನ ಮಾಡಲಾಗಿದೆ.

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಮತ್ತು ಕೋಲಾರದಲ್ಲಿ ರಸ್ತೆ ತಡೆ ಮತ್ತು ಮಾಲೂರಿನಲ್ಲಿ ಪ್ರತಿಭಟನೆಗಳು ನಡೆದಿವೆ.

ಉಳಿದಂತೆ ಕೊಪ್ಪಳದಲ್ಲಿ ಮಾನವ ಸರಪಳಿ, ಮಳವಳ್ಳಿ, ಮಂಡ್ಯ, ತುಮಕೂರು ಉಡುಪಿಯಲ್ಲಿ ಪ್ರತಿಭಟನೆಗಳು ನಡೆದಿವೆ. ಮೈಸೂರು ಮತ್ತು ದೊಡ್ಡಬಳ್ಳಾಪುರದಲ್ಲಿ ಹಲವು ಸಂಘಟನೆಗಳ ಜೊತೆಗೂಡಿ ಜಂಟಿಯಾಗಿ ಪ್ರತಿಭಟನೆಯನ್ನು ಮಾಡಲಾಗಿದೆ.


ರಾಯಚೂರಿನಲ್ಲಿ ಪ್ರತಿಭಟನೆ

ರಾಜ್ಯದಲ್ಲಿ ನಡೆದ ಪ್ರತಿಭಟನೆಗಳಲ್ಲಿ ಒಟ್ಟಾರೆಯಾಗಿ ಮೂರು ಸಾವಿರಕ್ಕೂ ಅಧಿಕ ಜನರು ಪ್ರತಿಭಟನೆಯಲ್ಲಿ ಭಾಗವಹಿಸಿ ಜನ ವಿರೋಧಿ ಬಿಜೆಪಿ ಸರ್ಕಾರದ ವಿರುದ್ಧ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಅಶ್ಲೀಲ ವಿಡಿಯೋ ವೀಕ್ಷಿಸಿದ ಸಚಿವರನ್ನು ದಂಡಿಸಿ ಸರ್ವ ಭ್ರಷ್ಟ ಸರ್ಕಾರ ತೊಲಗಿಸಿ

ಕರ್ನಾಟಕ ವಿಧಾನ ಸಭೆಯೊಳಗೆ ಮೂವರು ಸಚಿವರು ಅಶ್ಲೀಲವಾದ ವಿಡಿಯೋ ದೃಶ್ಯಗಳನ್ನು ನೋಡುತ್ತಿದ್ದ ನಾಚಿಕೆಗೇಡಿನ ಪ್ರಕರಣ ಅತ್ಯಂತ ಉಗ್ರ ಖಂಡನಾರ್ಹ. ಕೋಟ್ಯಾಂತರ ಜನತೆಯು ಬರಗಾಲದ ಬೇಗೆಯಲ್ಲಿ ಬೇಯುತ್ತಿದ್ದು, ಜನ-ಜಾನುವಾರುಗಳು ನೀರು-ಮೇವು-ಕೆಲಸ-ಆಹಾರವಿಲ್ಲದೇ ತತ್ತರಿಸುತ್ತಿರುವ ವಿಷಯದ ಮೇಲೆ ಸದನದಲ್ಲಿ ಚರ್ಚೆನಡೆಯುತ್ತಿರುವಾಗ ಮಹಿಳಾ ಕಲ್ಯಾಣ, ಸಹಕಾರ, ಬಂದರು ಸಚಿವರು ವೀಡಿಯೋ ವೀಕ್ಷಣೆಯ ಕೀಳು ಅಭಿರುಚಿಯಲ್ಲಿ ಕಾಲ ಹರಣ ಮಾಡಿದ್ದು ಅಕ್ಷಮ್ಯ ಅಪರಾಧ ಮತ್ತು ನಾಡಿನ ಜನತೆಗೆ ಎಸಗಿದ ಮಹಾದ್ರೋಹ. ರಾಜ್ಯದ ಬಿಜೆಪಿ ಸರ್ಕಾರ ತಲುಪಿರುವ ಅದಃಪತನ, ನಿಷ್ಕಾಳಜಿಗೆ ಇದು ಒಂದು ಜ್ವಲಂತ ಉದಾಹರಣೆ.

ವಿಧಾನ ಸಭೆಯ ಸಮಯ ಅತ್ಯಮೂಲ್ಯ .ಜನತೆಯಿಂದ ಅಲ್ಲಿಗೆ ಆರಿಸಿ ಹೋದವರು ಕಲಾಪದ ಪ್ರತೀ ಸಮಯವನ್ನು ಅತ್ಯಂತ ಜಾಗರೂಕತೆಯಿಂದ ಬಳಸಬೇಕು. ಶಾಸಕಾಂಗವು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಅತ್ಯಂತ ಮಹತ್ವದ ವೇದಿಕೆ. ಇದನ್ನು ಜನತೆಗಾಗಿ ಪರಿಣಾಮಕಾರಿಯಾಗಿ ಬಳಸದೇ ಕೀಳು ಅಭಿರುಚಿಯ ವಾಂಛೆಗಳಿಗೆ ಬಳಸಿದ್ದು ಶಾಸಕಾಂಗಕ್ಕೆ ಆ ಮೂಲಕ ಜನತೆಗೆ ಮಾಡಿದ ಅವಮಾನ ಮತ್ತು ವಿಕೃತ ಮನೋಸ್ಥಿತಿಗೆ ಹಿಡಿದ ಕನ್ನಡಿ. ಇಂತಹ ಕೀಳು ಅಭಿರುಚಿ, ವಿಕೃತಿಗಳನ್ನು ಖಾಸಗಿಯಾಗಿ ಅನುಭವಿಸುವ ಇವರು ಅದನ್ನು ಉನ್ನತ ಪ್ರಜಾಸತ್ತಾತ್ಮಕ ಸಂಸ್ಥೆಯೊಳಗೆ ತಂದಿರುವರೆಂದರೆ ಎಂತಹ ನೈತಿಕ ದಿವಾಳಿತನವನ್ನು ಅಂತಹವರು ತಲುಪಿರಬೇಕು?.

ಇದೇ ಬಿಜೆಪಿಯ ಶಾಸಕರು ಇತ್ತೀಚೇಗೆ ನೈತಿಕತೆ, ಸಂಸ್ಕೃತಿಯ 'ಗುತ್ತಿಗೆ' ಹಿಡಿದ ಆರ್.ಎಸ್.ಎಸ್.ನ ಮಹಾ ನಾಯಕರಿಂದ ಪಾಠ ಹೇಳಿಸಿಕೊಂಡು ಬಂದಿದ್ದರು. ಪ್ರತಿ ಮಾತಿಗೂ ತಾವು ದೇಶಭಕ್ತರೆಂದೂ, ಸಂಸ್ಕೃತಿಯ ರಕ್ಷಕರೆಂದೂ ಬಾಯ್ಬಡಿದುಕೊಳ್ಳುವ ಈ ಸಂಘ ಸಂತತಿಯೇ ಇಷ್ಟೆಲ್ಲಾ ಹಗರಣ, ಅವಾಂತರಗಳನ್ನು ನಡೆಸುತ್ತಿರುವುದು ಎಂಬುದನ್ನು ನೋಡಿದಾಗ ಕು-ಸಂಸ್ಕೃತಿಯ ವಾರಸುದಾರರ ನಿಜ ಬಣ್ಣವನ್ನು ಬಯಲಾಗುತ್ತಿದೆ.

ದುರಂತವೆಂದರೆ ಇಂತಹ ದುಷ್ಕೃತ್ಯಗಳನ್ನು ಶಿಕ್ಷಿಸಬೇಕಾದ, ದಂಡಿಸಬೇಕಾದ ಉನ್ನತ ಸ್ಥಾನದಲ್ಲಿರುವ ನಾಯಕರೇ ಅವರನ್ನು ರಕ್ಷಿಸಲು ಧಾವಿಸುತ್ತಿದ್ದಾರೆ. ಸಭ್ಯತೆಯ ಎಲ್ಲೆ ಮೀರಿ ಸೇಂಟ್ ಮೇರಿಸ್ ಬೀಚ್‌ನಲ್ಲಿ ನಡೆದ ರೇವ್ ಪಾರ್ಟಿಯನ್ನು ಮುಖ್ಯಮಂತ್ರಿ ಸದಾನಂದಗೌಡರು ಸಮರ್ಥಿಸಿದ್ದೇ ಅದಃಪತನದ ಸೂಚನೆ. ವಿದೇಶಿ ಡಾಲರ್‌ಗಳಿಗಾಗಿ ಭಾರತೀಯ ಸಂಸ್ಕೃತಿಯ ಮರು ವ್ಯಾಖ್ಯಾನ ಮಾಡಲು ಈ 'ಸ್ವಯಂ ಸೇವಕರು' ಹಿಂಜರಿಯಲಾರರು ಎಂಬುದನ್ನು ಅವರು ತೋರಿಸಿದರು. ಇದಾದ ಎರಡು ದಿನಗಳಲ್ಲೇ ವಿಧಾನಸಭೆಯೊಳಗೆ ಈ ನೀಚ ಘಟನೆ ನಡೆದಿರುವುದು ದಿಗ್ಭ್ರಮೆ ಹುಟ್ಟಿಸುವ ಸಂಗತಿ. ಅಂದರೆ ಇಡೀ ಬಿಜೆಪಿ ಸರ್ಕಾರವೇ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ನೈತಿಕವಾಗಿ ಭ್ರಷ್ಟಗೊಂಡುಪೂರಾ ದಿವಾಳಿಯೆದ್ದಿದೆ . ಈಗಾಗಲೇ ರಾಜ್ಯದ ಅಮೂಲ್ಯ ಸಂಪತ್ತನ್ನು ಲೂಟಿ ಮಾಡಿ, ದಾಖಲೆಗಳ ಸಮೇತ ಸಿಕ್ಕಿಬಿದ್ದರೂ ತಾವೂ ಪರಮ ಪವಿತ್ರರೆಂದು ಸಮರ್ಥಿಸಿಕೊಳ್ಳುವ ಭಂಡತನ ಕಡಿಮೆಯಾಗಿಲ್ಲ. ರಾಜ್ಯದ ಬೊಕ್ಕಸವನ್ನು ಕೊಳ್ಳೆ ಹೊಡೆದ ಇವರು ನಡೆಸಿದ ಅನಾಚಾರ, ಅನೈತಿಕ ಅತ್ಯಾಚಾರಗಳಿಗೆ ಮಿತಿಯೇ ಇಲ್ಲ..

ಮೂರು ವರುಷಗಳ ಆಡಳಿತವೇ ಸಾಕ್ಷಿಯಾಗಿದೆ. ಬಿಜೆಪಿ ಅಧಿಕಾರಕ್ಕೆ ಬಂದ ಆರಂಭದಲ್ಲೇ ಉಡುಪಿಯ ಶಾಸಕ ರಘುಪತಿ ಭಟ್‌ನ ಪತ್ನಿಯ ಸಂಶಯಾಸ್ಪದ ಕೊಲೆ, ಅಂದಿನ ಗೃಹಸಚಿವರೇ ನಿಂತು ಅದನ್ನು ಮುಚ್ಚಿಹಾಕಲು ಯತ್ನಿಸಿದ ಪರಿ, ನಂತರ ಸಚಿವ ಹಾಲಪ್ಪ ತನ್ನ ಗೆಳೆಯನ ಹೆಂಡತಿ ಮೇಲೆ ಅತ್ಯಾಚಾರ ನಡೆಸಲೆತ್ನಿಸಿದ ಪ್ರಕರಣ, ಇಂದಿನ ಸಚಿವ ರೇಣುಕಾಚಾರ್ಯನ ರಾಸಲೀಲೆಗಳು, ಮಾಜಿ ಸಿ.ಎಂ.ರ ಕುರಿತ ಅಕ್ರಮಸಂಬಂಧಗಳ ಆರೋಪ..... ಈ ಸರ್ಕಾರದ ಹುಣ್ಣಿಗೆ ಕೆಲ ನಿದರ್ಶನಗಳು. ಅಂದರೆ ಇಂತಹ ಸ್ವಯಂ ಸೇವಕರನ್ನು ತಿದ್ದುವ ಅಗತ್ಯ ಆರೆಸ್ಸಸ್‌ಗೆ ಬರಲೇ ಇಲ್ಲವೇ! ಇಂತಹ ಪ್ರವೃತ್ತಿಗಳು ಕೇವಲ ಕರ್ನಾಟಕಕ್ಕೆ ಮಾತ್ರವಲ್ಲ ಹಿಂದೆ 2007ರಲ್ಲಿ ಬಿಜೆಪಿ ಸಂಸದ ಬಾಬುಲಾಲ್ ಕಟಾರ ಅನ್ಯ ಮಹಿಳೆಯನ್ನು ತನ್ನ ಹೆಂಡತಿಯೆಂದು ಘೋಷಿಸಿ ವಿದೇಶಕ್ಕೆ ಸಾಗಿಸುವ ದಂಧೆಯಲ್ಲಿದ್ದಾಗಲೇ ಸಿಕ್ಕಿಬಿದ್ದದ್ದೂ. 2005 ರಲ್ಲಿ ಆರ್‌ಎಸ್‌ಎಸ್‌ನ ಮದ್ಯಪ್ರದೇಶದ ನಾಯಕ ಸಂಜಯ ಜೋಷಿಯ ಲೈಂಗಿಕ ಹಗರಣದ ಸಿ.ಡಿ. ಬಯಲಾದದ್ದು. ಕೇವಲ ಹೊರ ಸೋರಿ ಬಂದ ಪ್ರಕರಣಗಳಷ್ಟೇ.


ರಾಜ್ಯದ ಬಿಜೆಪಿ ಸರ್ಕಾರ, ಆರ್‌ಎಸ್‌ಎಸ್ ನಾಡಿನಲ್ಲಿ ಪಾಲಿಸಿಕೊಂಡು ಬಂದ ಎಲ್ಲಾ ಉತ್ತಮ ಪರಂಪರೆಯನ್ನೇ ಧ್ವಂಸಗೊಳಿಸುತ್ತಿದೆ. ಎಗ್ಗಿಲ್ಲದ ಭ್ರಷ್ಟತೆ, ಭಂಡತನ, ಅನೈತಿಕತೆ, ಅಧಿಕಾರದ ದುರುಪಯೋಗದಂತಹ ಬುಡಮೇಲು ಕೃತ್ಯಗಳಿಂದ ಅಧಿಕಾರದಲ್ಲಿ ಉಳಿದಿದೆ. ಈ ಮೂಲಕ ಪ್ರಜಾಪ್ರಭುತ್ವವನ್ನೇ ನಾಶಗೊಳಿಸುತ್ತಿದೆ. ಈ ಅಕ್ರಮ ಪ್ರವೃತ್ತಿ ಧಾಳಿಗಳು ಅಕಸ್ಮಿಕವಲ್ಲ, ಬದಲಾಗಿ ಅದು ಅನುಸರಿಸುತ್ತಿರುವ ಆರ್ಥಿಕ, ಸಾಮಾಜಿಕ, ರಾಜಕೀಯ ತಾತ್ವಿಕ ನೀತಿಗಳ ಪರಿಣಾಮವಾಗಿದೆ. ಸಂಘ ಪರಿವಾರ ಬಯಸುವ 'ಹಿಂದುತ್ವದ ಫಾಶಿಸ್ಟ್ ಮಾದರಿಯನ್ನು ಜಾರಿಗೆ ತರಬೇಕಿದ್ದಲ್ಲಿ ಈ ಪ್ರಜಾಪ್ರಭುತ್ವ, ಜಾತ್ಯತೀತತೆ, ಜನ ಪಂರಂಪರೆಯನ್ನು ಅದು ನಾಶಗೊಳಿಸಲು ಬಯಸುತ್ತದೆ. ಅದು ಆರಾಧಿಸುವ, ಅನುಸರಿಸುವ ಉದಾರೀಕರಣ, ಜಾಗತೀಕರಣದ ಆರ್ಥಿಕ ನೀತಿಗಳ, ಸಾಮ್ರಾಜ್ಯಶಾಹಿಗಳ, ಬಂಡವಾಳಿಗಾರರ ಹಿತಕಾಯಲು ಹುಟ್ಟು ಹಾಕಿದ ಅದರ ನೀತಿಗಳು,

ಲೋಕಾಯುಕ್ತ ನೇಮಕ : ವಿಳಂಬ ಇನ್ನ್ಯಾಕ?

ಕರ್ನಾಟಕ ಲೋಕಾಯುಕ್ತ ಸ್ಥಾನಕ್ಕೆ ತಮ್ಮ ಹೆಸರು ಶಿಫಾರಸು ಮಾಡಿದ್ದನ್ನು ನಿವೃತ್ತ ಮುಖ್ಯ ನ್ಯಾಯಮೂರ್ತಿ ಬನ್ನೂರ್‌ಮಠ್‌ರವರು ನಿರಾಕರಿಸಿರುವುದರಿಂದ ಅವರ ಸುತ್ತಲಿನ ವಿವಾದಕ್ಕೆ ಹಾಗೂ ರಾಜ್ಯ ಸರ್ಕಾರ ಮತ್ತು ರಾಜ್ಯಪಾಲರ ನಡುವಿನ ಸಂಘರ್ಷಕ್ಕೆ ತೆರೆ ಬಿದ್ದಿದೆ. ಈಗೇನಿದ್ದರೂ ಈ ಅನುಭವದ ಹಿನ್ನೆಲೆಯಲ್ಲಿ ಲೋಕಾಯುಕ್ತಕ್ಕೆ ಬೇಕಿರುವುದು ಹೊಸ ಹೆಸರಿನ ಸೂಚನೆ.

ಈ ಮೊದಲೇ

ಇಂತಹ ನಿರ್ಧಾರವನ್ನು ಕೈಗೊಳ್ಳಲು ಇಷ್ಟು ದೀರ್ಘ ಅವಧಿಯನ್ನು ಮಾನ್ಯ ಹಿರಿಯ ನ್ಯಾಯಮೂರ್ತಿಗಳು ತೆಗೆದುಕೊಳ್ಳಬೇಕಿರಲಿಲ್ಲ. ಕಳಂಕ ಹಾಗೂ ಹಲವು ಆರೋಪಗಳ ಸುತ್ತ , ರಾಜಕೀಯ ನಂಟಿನ ಟೀಕೆ ಇತ್ಯಾದಿಗಳು ಕೇಳಿಬಂದಾಗ ಕೂಡಲೇ ಶಿಫಾರಸ್ಸನ್ನು ನಿರಾಕರಿಸಬೇಕಿತ್ತು. ಇಂತಹ ನಿರ್ಧಾರ ಕೈಗೊಳ್ಳಿ ಎಂದು ನಾಡಿನ ಖ್ಯಾತ ಚಿಂತಕರು, ಭ್ರಷ್ಟಾಚಾರ ವಿರೋಧಿ ಪ್ರಗತಿಪರ ವೇದಿಕೆ ಬಹಿರಂಗವಾಗಿಯೇ ಪತ್ರ ಬರೆದು ಮನವಿ ಮಾಡಿದ್ದರು. ಗಣಿ-ಭೂ ಹಗರಣಗಳಂತಹ ಅಕ್ರಮಗಳಲ್ಲಿ ತೊಡಗಿ ವಿಚಾರಣೆ ಎದುರಿಸುತ್ತಿರುವ ಆರೋಪಿತ ಸರ್ಕಾರ ಹಾಗೂ ಅದರ ಪ್ರಮುಖರು, ಸಚಿವರು, ಆಡಳಿತ ಪಕ್ಷದ ನಾಯಕರು ಇವರನ್ನೇ ನೇಮಿಸಲು ಪ್ರತಿ ಬಾರಿಯೂ ಆಗ್ರಹಿಸುತ್ತಿದ್ದುದು, ಅದಕ್ಕಾಗಿ ಸತತ ಒತ್ತಡ ಹೇರುತ್ತಾ, ಬಹಿರಂಗವಾಗಿ ಸಂವಿಧಾನಾತ್ಮಕ ಸ್ಥಾನ ಹೊಂದಿರುವ ರಾಜ್ಯಪಾಲರ ಮೇಲೆ ನೇರ ಆರೋಪಗಳಿಂದ ಸಂಘರ್ಷಕ್ಕೆ ಇಳಿದದ್ದು, ಅವಹೇಳನ ಮಾಡಿದ್ದು ಸಹಜವಾಗಿ ಸಾರ್ವಜನಿಕರಲ್ಲಿ ಇವರ ಹೆಸರು ಮತ್ತು ಶಿಫಾರಸುವಿನ ಉದ್ದೇಶಗಳ ಬಗ್ಗೆಯೇ ಅನುಮಾನಗಳು ಗಟ್ಟಿಗೊಳ್ಳಲು ಕಾರಣವಾಯಿತು. ಈಗಿನಂತೆ ಅಂದೇ ನ್ಯಾಯಮೂರ್ತಿಗಳು ಅತ್ಯಂತ ಸೂಕ್ಷ್ಮಗ್ರಾಹಿಯಾಗಿ ಸ್ಪಂದಿಸಿದ್ದರೆ ಇಷ್ಟು ಕೆಸರಾಟ ಕೊಸರಾಟ ಆಗುತ್ತಿರಲಿಲ್ಲ.



ಸಲ್ಲದ ಸಮರ್ಥನೆ

ಇಂತಹವುಗಳಿಂದಲೇ ಬೇಸತ್ತು ತಾವು ಹುದ್ದೆ ನಿರಾಕರಿಸಿರುವದಾಗಿ ನ್ಯಾ. ಬನ್ನೂರ್‌ಮಠ್ ರವರು ಹೇಳಿದ್ದಾರೆ. ಅದೇ ಹೊತ್ತಿನಲ್ಲಿ ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಿದ್ದಾರೆ. ಅದು ಅವರ ಸಹಜ ಪ್ರತಿಕ್ರಿಯೆ ನಿಜ. ಆದರೆ ಅದೇ ಹೊತ್ತಿನಲ್ಲಿ ಅವರು ಉಳಿದ ಅಕ್ರಮ ನಿವೇಶನ ಇತ್ಯಾದಿಗಳ ಬಗೆಗೆ ನೀಡಿದ ಸ್ಪಷ್ಟೀಕರಣ ಅಷ್ಟು ಸಮರ್ಥನೆಯಾಗುವುದಿಲ್ಲ. ತಮ್ಮಂತೆ 80 ಜನರು ನ್ಯಾಯಾಂಗ ಬಡಾವಣೆಯಲ್ಲಿ ನಿವೇಶನ ಪಡೆದರು. ತಾವೊಬ್ಬರೇ ಅಲ್ಲ ಎಂಬುದು ಸಂಭವಿಸಿದ ತಪ್ಪಿಗೆ ಸೂಕ್ತ ಸಮರ್ಥನೆಯಾಗುವುದಿಲ್ಲ. ಇಂತಹದೇ ಆರೋಪ ಹೊತ್ತೇ ಮುಖ್ಯ ನ್ಯಾ. ಶಿವರಾಜ ಪಾಟೀಲರು ರಾಜೀನಾಮೆ ಕೊಟ್ಟರು. ಅದು ಇವರಿಗೆ ಅನ್ವಯವಾಗದೇ? ಹಾಗೆಯೇ ಜಾತಿಯ ಕಾರಣದಿಂದ ಹೀಗಾಯಿತು ಎಂಬಂತಹ, ಮಾತುಗಳು ಅನುಮಾನವನ್ನಷ್ಟೇ ಹೆಚ್ಚಿಸುತ್ತವೆ. ಯಾಕೆಂದರೆ ನ್ಯಾ. ಬನ್ನೂರಮಠ್ರರವರ ಈಗಿನ ನಿರ್ಧಾರಕ್ಕೆ ಅತೀ ತೀಕ್ಷ್ಣ ಪ್ರತಿಕ್ರಿಯೆ ಬಂದದ್ದು ಹಲವು ಹಗರಣಗಳ ಅಕ್ರಮಗಳ ಆರೋಪಿ ಯಡಿಯೂರಪ್ಪನವರಿಂದ! ಅವರೂ ಸಹ ಅವರ ಲಿಂಗಾಯತ ಕಾರಣಕ್ಕೆ ಷಡ್ಯಂತ್ರ ಮಾಡಲಾಯಿತು ಎಂದಿರುವುದು ಕಳಂಕದ ಆರೋಪಕ್ಕೆ ಒತ್ತು ಹೆಚ್ಚಿಸುವಂತಾಯಿತು.

ಅದೇ ರೀತಿ ಟೀಕೆಗಳಿಂದ ನೊಂದು ಸ್ವಯಂ ನಿರಾಕರಣೆಗೆ ಹೋಗ ಬೇಕಾಯಿತು ಎಂಬುದು ಸಹ ವಾಸ್ತವ ಘಟನೆಗಳ ಹಿನ್ನೆಲೆಯಿಂದಲೂ ಸರಿಯನ್ನಿಸುವುದಿಲ್ಲ. ಇವರ ಹೆಸರಿಗೆ ಶಿಫಾರಸು ಮಾಡಿದ್ದ ಹೈಕೋರ್ಟ್ ಮು. ನ್ಯಾಯಮೂರ್ತಿಗಳಾದ ವಿಕ್ರಮಜಿತ್ ಸೆನ್‌ರವರು ತಾವು ನೀಡಿದ್ದ ಶಿಫಾರಸು ಪತ್ರವನ್ನು ಫೆಬ್ರವರಿ 2 ರಂದೇ ಹಿಂಪಡೆಯಲು ರಾಜ್ಯಪಾಲರನ್ನು ಕೋರಿದ್ದರು. ನಂತರದ ಹಲವು ದಿನಗಳ ನಂತರವೇ ನ್ಯಾ.ಬನ್ನೂರ್‌ಮಠ್ ರವರು ಹಿಂತೆಗೆವ ನಿರ್ಧಾರ ತೆಗೆದುಕೊಂಡದ್ದು.

ಆಗಬೇಕಾದ್ದು -ಆಗಬಾರದ್ದು

ಇರಲಿ. ಅದೀಗ ಮತ್ತೇ ಕಾಲದ ಕಡತಕ್ಕೆ ಸೇರಿ ಹೋಗಿದೆ. ಇನ್ನೇನಿದ್ದರೂ ಹೊಸ ಲೋಕಾಯುಕ್ತರ ನೇಮಕದ ಪ್ರಕ್ರಿಯೆ ಆರಂಭವಾಗಬೇಕು. •ಅದು ಇನ್ನಷ್ಟು ವಿಳಂಬವಾಗದೇ ಈಗಲೇ ಆಗಲೇಬೇಕಾದದ್ದು. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸದಾನಂದಗೌಡರು ಈ ಮೂರ್‍ನಾಕ್ಕು ದಿನಗಳಲ್ಲೇ ಹೆಸರು ಅಂತಿಮಗೊಳಿಸಿ ಶಿಫಾರಸು

ಪುಟ 15 ಕ್ಕೆ ......

ಕಾರ್ಟೂನ್ ಕಾರ್ನರ್



ಕೂಲಿ ಹಣ ನೀಡದ ಸರ್ಕಾರ ಹೋರಾಟ ಮುಂದುವರೆಸಿದ ಕೂಲಿಕಾರರು

ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡದಲ್ಲಿ ಈಗ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ತಾಲ್ಲೂಕು ಸಮ್ಮೇಳನ ನಡೆದು ತಾಲ್ಲೂಕು ಸಮಿತಿ ರಚನೆಯಾಗಿದೆ. ಕೂಲಿಕಾರರು ಶೋಷಿತರಲ್ಲೇ ಶೋಷಿತರು. ಅವರು ಇಲ್ಲಿ ಸಂಘಟಿತರಾದ ಪರಿ, ಕೂಲಿಕಾರರರು ಬೇಲೇದು ಬಂದ ಪರಿಯ ಕುರಿತು ಓದಿ.

2009ರ ಆರಂಭದಲ್ಲಿ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ್ ತಾಲ್ಲೂಕಿನ ಭದ್ರಾಪುರ ಎಂಬ ಕೃಷಿ ಕೂಲಿಕಾರರ ಸಭೆಯೊಂದನ್ನು ನಡೆಸುವ ಮೂಲಕ ಮುಂಡಗೋಡ್ ತಾಲ್ಲೂಕಿನಲ್ಲಿ ಕೃಷಿ ಕೂಲಿಕಾರರನ್ನು ಸಂಘಟಿಸಿ, ಅವರ ಪ್ರಜಾಸತ್ತಾತ್ಮಕ ಬೇಡಿಕೆಗಳಿಗಾಗಿ ಸಂಘಟಿತ ಹೋರಾಟಗಳನ್ನು ನಡೆಸುವ ಪ್ರಕ್ರಿಯೆ ಆರಂಭವಾಯಿತು. ಪಾಳ ಗ್ರಾಮದ ಭೀಮಣ್ಣ ಭೋವಿ ನೇತೃತ್ವ ನೀಡಲಾರಂಭಿಸಿದರು. ಪಾಳಾ, ಕಲಕೊಪ್ಪ, ಒಣಿಕೇರಿ, ಕೋಡಂಬಿ, ರಾಮಾಪುರ, ಕಾತೂರು, ಸಿದ್ಧನಕೊಪ್ಪ ಮೊದಲಾದ ಗ್ರಾಮಗಳಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಕ್ಕೆ ಸದಸ್ಯತ್ವವನ್ನು ನೋಂದಾಯಿಸಿ 2009 ಸೆಪ್ಟೆಂಬರ್ 22 ರಂದು ಪಾಳಾ ಗ್ರಾಮಗಳಲ್ಲಿ ಸಂಘದ ಅಧಿಕೃತ ಉದ್ಘಾಟನೆಯನ್ನು ಮಾಡಲಾಯಿತು. ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಅವರು ಸಂಘದ ಉದ್ಘಾಟನೆ ಮಾಡಿದರು. ಪ್ರಾಂತ ರೈತ ಸಂಘದ ಜಿಲ್ಲಾ ಮುಖಂಡರಾಧ ಶಾಂತರಾಮ ನಾಯಕ್ ಮತ್ತು CITU ಮುಖಂಡರಾದ ಯಮುನಾ ಗಾಂವ್ಕರ್ ಉಪಸ್ಥಿತರಿದ್ದರು.

ಅಲ್ಲಿಯವರೆಗೂ ತಾಲ್ಲೂಕಿನಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೆಲಸ ಆರಂಭ ಆಗಿರಲಿಲ್ಲ. ಆಳಾ ಗ್ರಾಮದಲ್ಲಿ ಭೀಮಣ್ಣ ಭೋವಿ ಅವರ ಮುತುವರ್ಜಿಯಿಂದ ಕೆಲಸಕ್ಕಾಗಿ ಅರ್ಜಿ ಹಾಕಿಸುವುದು, ನಿಗದಿತ ಕೆಲಸಕ್ಕಿಂತ ಹೆಚ್ಚಿಗೆ ಕೆಲಸ ಮಾಡಿಸುವುದರ ವಿರುದ್ಧ ಪ್ರತಿಭಟನೆ ಮಾಡುವುದು ಮೊದಲಾದ ಚಟುವಟಿಕೆಗಳು ಆರಂಭವಾದವು. ನ್ಯಾಸರಗಿ, ಚಿಗಳ್ಳಿ, ಮಳಗಿ ಮೊದಲಾದ ಗ್ರಾಮಗಳಿಗೂ ವಿಸ್ತರಿಸಲ್ಪಟ್ಟವು. 2010ರಲ್ಲಿ ತಾಲ್ಲೂಕು ಕಛೇರಿ ಎದುರು ಕೂಲಿಕಾರರಿಗೆ ರೇಷನ್ ಕಾರ್ಡ್ ವಿತರಿಸಲು ಒತ್ತಾಯಿಸಿ, ಸ್ವಂತ ಮನೆ ಇಲ್ಲದ ಕೂಲಿಕಾರ ಕುಟುಂಬಗಳಿಗೆ ಮನೆ ನಿವೇಶನಗಳನ್ನು ಮಂಜೂರು ಮಾಡಲು ಒತ್ತಾಯಿಸಿ ಅನೇಕ ಹೋರಾಟಗಳನ್ನು ಹಮ್ಮಿಕೊಳ್ಳಲಾಯಿತು. ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೆಲಸ ಒದಗಿಸಲು ಒತ್ತಾಯಿಸಿ, ಬಾಕಿ ವೇತನ ಸಂದಾಯ ಮಾಡಲು ಒತ್ತಾಯಿಸಿ ತಾಲೂಕು ಪಂಚಾಯತ್ ಕಛೇರಿ ಎದುರು ಪ್ರತಿಭಟನೆಗಳು ನಡೆದು, ಕಾತೂರು ಗ್ರಾಮದ ಕೂಲಿಕಾರರು ಸ್ಥಳೀಯ ಶಾಸಕರಿಗೆ ಘೆರಾವೊ ಮಾಡಿ ಬಾಕಿ ಕೂಲಿ ಹಣವನ್ನು ಪಡೆಯಲು ಸಾಧ್ಯವಾಗಿದೆ. ರಾಮಪುರ, ಕೋಡಂಬಿ, ಭದ್ರಾಪುರ, ಹನುಮಾಪುರ, ಕಾತೂರ ಗ್ರಾಮದ ಅರ್ಜಿದಾರರಿಗೆ ಆಮ್ ಆದ್ಮಿ ವಿಮಾ ಕಾರ್ಡ್ ಕೊಡಿಸಲು ಸಾಧ್ಯವಾಯಿತು. ಈ ಅವಧಿಯಲ್ಲಿ ತಾಲೂಕಿನ ಹಲವು ಗ್ರಾಮಗಳಲ್ಲಿ ಸಂಘದ ಘಟಕಗಳನ್ನು ರಚಿಸಲು ಸಾಧ್ಯವಾಗಿದೆ.

ನ್ಯಾಸರಗಿ ಗ್ರಾಮದಲ್ಲಿ ವಾಂತಿ ಬೇಧಿ ಕಾಯಿಲೆಗೆ ತುತ್ತಾಗಿ ಅನೇಕ ಕೂಲಿಕಾರರು ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗೆ ದಾಖಲಾದಾಗ ಅವರಿಗೆ ಸಂಘದ ವತಿಯಿಂದ ಹಾಲು ಹಣ್ಣು ವಿತರಿಸಲಾಯಿತು. ತಾಲ್ಲೂಕ್ ಕಾನೂನು ನೆರವು ಸಮಿತಿ ಸಹಯೋಗದೊಂದಿಗೆ ಕೂಲಿಕಾರರಿಗೆ

ಭೀಮಣ್ಣ ಭೋವಿ

ಕಾನೂನು ಅರಿವು ಮತ್ತು ನೆರವು ಶಿಬಿರವನ್ನು ನಡೆಸಲಾಯಿತು.

ಪಾಳಾ ಗ್ರಾಮದ ಕೂಲಿಕಾರರು ಬಾಕಿ ವೇತನಕ್ಕಾಗಿ ನಡೆಸಿದ ಹೋರಾಟ ರಾಜ್ಯದ ಗಮನ ಸೆಳೆಯಿತು. ಪಾಳಾ ಪಂಚಾಯತಿ ಮುಂದೆ ನಡೆಸಿದ ಸಾಮೂಹಿಕ ಧರಣಿ ಪರಿಣಾಮವಾಗಿ ತಾಲೂಕಿನ ಬಾಕಿ ವೇತನ ಪಾವತಿಗಾಗಿ 10 ಲಕ್ಷ ರೂ. ಬಿಡುಗಡೆಯಾಯಿತು. ಆದರೆ ಹೋರಾಟ ಮಾಡಿದ ಪಾಳಾ ಗ್ರಾಮದ ಕೂಲಿಕಾರರಿಗೆ ಬಾಕಿ ವೇತನ ಪಾವತಿ



ಆಗಲೇ ಇಲ್ಲ. 600ಕ್ಕೂ ಹೆಚ್ಚು ಕೂಲಿಕಾರರು ಕೆಲಸ ಮಾಡಿ 10 ತಿಂಗಳುಗಳು ಕಳೆದರೂ ಬಾಕಿ ಕೂಲಿ ಹಣ ಸಂದಾಯ ಮಾಡದಿದ್ದಾಗ ಕೂಲಿಕಾರರು ರೊಚ್ಚಿಗೆದ್ದು ಗ್ರಾಮ ಪಂಚಾಯತಿಗೆ ಬೀಗ ಹಾಕಿ ಪ್ರತಿಭಟಿಸಿದರು. ಅನಂತರ ತಾಲೂಕು ಪಂಚಾಯತ್ ಮುಂದೆ ಸಾಮೂಹಿಕ ಧರಣಿ ಆರಂಭಿಸಲಾಯಿತು. 8 ದಿನಗಳ ನಿರಂತರ ಧರಣಿಯ ನಂತರ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹವನ್ನು ಆರಂಭಿಸಲಾಯಿತು. ಶಾಸಕರಾದ ವಿ.ಎಸ್. ಪಾಟೀಲ್, ಉಸ್ತುವಾರಿ ಸಚಿವರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರುಗಳು ಬಂದು ಉಪವಾಸ ಕೈಬಿಡಲು ಒತ್ತಾಯಿಸಿದರೂ ಹೋರಾಟ ನಿಲ್ಲಲಿಲ್ಲ. ಪೋಲೀಸರು ಉಪವಾಸ ನಿರತರನ್ನು ಬಲವಂತವಾಗಿ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದರು. ಅಷ್ಟರಲ್ಲಿ ಸಂಘದ ರಾಜ್ಯ ನಾಯಕತ್ವದ ಮಧ್ಯ ಪ್ರವೇಶದಿಂದಾಗಿ, ರಾಜ್ಯ ಮಟ್ಟದ ತನಿಖಾ ತಂಡವೊಂದು ಮುಂಡಗೋಡಕ್ಕೆ ಭೇಟಿಕೊಟ್ಟಿತು. ಪಾಳಾ ಗ್ರಾಮದಲ್ಲಿ ಕೈಗೊಳ್ಳಲಾದ 13 ಕಾಮಗಾರಿಗಳನ್ನು ಅದು ಪರಿಶೀಲಿಸಿ ವರದಿ ಸಲ್ಲಿಸಿತು. 12 ಕಾಮಗಾರಿಗಳಲ್ಲಿ ಒಳ್ಳೆಯ ಕೆಲಸ ಆಗಿದೆ ಎಂದು ತನಿಖಾ ತಂಡ ವರದಿ ನೀಡಿತು. ಅವುಗಳ ಪೈಕಿ 7 ಕಾಮಗಾರಿಗಳ ಬಾಕಿ ಕೂಲಿ ಹಣ ಪಾವತಿ ಮಾಡಲಾಯಿತು. ಇನ್ನುಳಿದ 5 ಕಾಮಗಾರಿಗಳಲ್ಲಿ ಸರಿಯಾದ ದಾಖಲೆಗಳಿಲ್ಲ ಎಂಬ ಕಾರಣವನ್ನು ಮುಂದೆ ಮಾಡಿ ಕೂಲಿ ಹಣ ಪಾವತಿ ಮಾಡಲು ಸ್ಥಳೀಯ ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ. ಲಭ್ಯ ಇರುವ ಕಚ್ಚಾ ದಾಖಲೆಗಳ ಆಧಾರದಲ್ಲಿ ಕೂಲಿ ಹಣ ಸಂದಾಯ ಮಾಡಲು ರಾಜ್ಯ ನಿರ್ದೇಶಕರು ಆದೇಶ ನೀಡಿದ್ದರೂ ರಾಜಕೀಯ ಕಾರಣಕ್ಕಾಗಿ ಕೂಲಿ ಹಣ ಸಂದಾಯ ಮಾಡುತ್ತಿಲ್ಲ. ಹೋರಾಟ ಮುಂದುವರೆದಿದೆ.

ಈ ನಡುವೆ ಮನೆ ನಿವೇಶನಕ್ಕಾಗಿ ಸನವಳ್ಳಿ, ಸಾಲಗಾಂವ, ಕೋಡಂಬಿ, ಭದ್ರಾಪೂರ, ಕಲಕೊಪ್ಪ, ಪಾಳ, ನ್ಯಾಸರ್ಗಿ ಪ್ಲಾಟ್, ಬಾಚಣಕಿ, ಮಳಗಿ, ಇಂದ್ೂರ, ಕಾತೂರ ಮೊದಲಾದ ಗ್ರಾಮಗಳ ಕೂಲಿಕಾರರು ಸಲ್ಲಿಸಿದ ಅರ್ಜಿಗಳನ್ನು ಪರಿಶೀಲನೆಗಾಗಿ ತಹಶಿಲ್ದಾರರು ಆಯಾ ಗ್ರಾಮ ಪಂಚಾಯತಿಗಳಿಗೆ ಕಳುಹಿಸಿದ್ದಾರೆ. ಚವಡಳ್ಳಿ ಗ್ರಾಮದಲ್ಲಿ ಕೆಲಸ ಕೊಡಲು ಒತ್ತಾಯಿಸಿ ಕೂಲಿಕಾರರು ಇತ್ತೀಚೆಗೆ ಗ್ರಾಮ ಪಂಚಾಯತಿ ಎದುರು ಧರಣಿ ನಡೆಸಿ ಕೆಲಸ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ತಾಲ್ಲೂಕು ಮಟ್ಟದ ಕಾರ್ಯಾಗಾರವನ್ನು ನಡೆಸಿ 37 ಜನ ಕಾರ್ಯಕರ್ತರಿಗೆ ಒಂದು ದಿನದ ತರಬೇತಿ ನೀಡಲಾಗಿದೆ. ಈ ಎಲ್ಲ ಚಟುವಟಿಕೆಗಳ ಪರಿಣಾಮವಾಗಿ 2011–12 ರ ಸಾಲಿನಲ್ಲಿ ತಾಲ್ಲೂಕಿನಲ್ಲಿ 3,500 ಕೂಲಿಕಾರರನ್ನು ಸಂಘಕ್ಕೆ ಸದಸ್ಯರನ್ನಾಗಿಸಲು ಸಾಧ್ಯವಾಗಿದ್ದು ಪ್ರಸ್ತಕ ಸಾಲಿನಲ್ಲಿ ಸದಸ್ಯತ್ವವನ್ನು 5000ಕ್ಕೆ ಹೆಚ್ಚಿಸಲು ಗುರಿ ಇಟ್ಟುಕೊಳ್ಳಲಾಗಿದೆ.

ಪ್ರಥಮ ತಾಲೂಕ ಮಟ್ಟದ ಸಮ್ಮೇಳನ

ಈ ಹಿನ್ನೆಲೆಯಲ್ಲಿ ಇದೇ ಜನವರಿ 31 ರಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಪ್ರಥಮ ತಾಲೂಕು ಸಮ್ಮೇಳನ ಮುಂಡಗೋಡ ಪುರಸಭಾ ಭವನದಲ್ಲಿ ನಡೆಯಿತು. ಇದಕ್ಕೂ ಮೊದಲು ಪಟ್ಟಣದ ಮುಖ್ಯ ಬೀದಿಗಳಲ್ಲಿ ಕೂಲಿಕಾರರ ಮೆರವಣಿಗೆ ನಡೆಯಿತು. 5 ಜನ ಮಹಿಳಾ ಕೂಲಿಕಾರರು ದೀಪ ಬೆಳಗುವ ಮೂಲಕ ಸಮ್ಮೇಳನವನ್ನು ಉದ್ಘಾಟಿಸಿದರು. ರಾಜ್ಯ ಆಧ್ಯಕ್ಷರಾದ ನಿತ್ಯಾನಂದಸ್ವಾಮಿ ಉದ್ಘಾಟನಾ ಭಾಷಣ ಮಾಡಿದರು. ಕೇಂದ್ರದಲ್ಲಿಯೂ ರಾಜ್ಯದಲ್ಲಿಯೂ ಕೂಲಿಕಾರರ ವಿರೋಧಿ ಸರ್ಕಾರಗಳು ಅಧಿಕಾರದಲ್ಲಿವೆ ಎಂದು ವಿವರಿಸಿದ ಅವರು ಎರಡು ಶತ್ರು ಸರ್ಕಾರಗಳನ್ನು ಎದುರಿಸಿ ನಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಬಲಿಷ್ಠ ಸಂಘವನ್ನು ಕಟ್ಟಬೇಕೆಂದು ಕರೆ ನೀಡಿದರು.

ಸಂಘದ ರಾಜ್ಯ ಉಪಾಧ್ಯಕ್ಷರಾದ ಜಿ.ಎನ್. ನಾಗರಾಜ್, ಕರ್ನಾಟಕ ಪ್ರಾಂತ ರೈತ ಸಂಘದ ಉ.ಕ. ಜಿಲ್ಲಾ ಕಾರ್ಯದರ್ಶಿ ಶಾಂತರಾಮನಾಯಕ್, ಧಾರವಾಡದ ರೈತ ಮುಖಂಡರಾದ ಬಿ.ಎಸ್. ಸೊಪ್ಪಿನ್, ಹಾವೇರಿಯ SFI ಮುಖಂಡರಾದ ಬಸವರಾಜಪೂಜಾರ್ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು. ಅನಂತರ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಪ್ರತಿನಿಧಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು. ನೂತನ ತಾಲೂಕ ಸಮಿತಿಯ ಆಯ್ಕೆಯೊಂದಿಗೆ ಸಮ್ಮೇಳನ ಮುಕ್ತಾಯವಾಯಿತು.

ಪಾಳಾ, ಮಳಗಿ ಕಲ್ಲಹಕ್ಕಲ, ಕಾಳೆಬೈಲ, ಮೂಡಸಾಲಿ, ಕೋಡಂಬಿ, ಚಿಗಳ್ಳಿ, ಹಿರೇಹಳ್ಳಿ, ನ್ಯಾಸರ್ಗಿ, ಅಂದಲಗಿ, ಕಲಗೇರಿ, ಹನುಮಾಪೂರ, ಮುಂಡಗೋಡ ಕಂಬಾರಗಟ್ಟಿ ಪ್ಲಾಟ್ ಮತ್ತು ದೇಶಪಾಂಡೆ ನಗರದಿಂದ ಘಟಕಗಳ ಪದಾಧಿಕಾರಿಗಳು ಮತ್ತು ಮುಖ್ಯ ಕಾರ್ಯಕರ್ತರು ಒಟ್ಟು 127 ಜನ ಸಮ್ಮೇಳನದಲ್ಲಿ ಭಾಗವಹಿಸಿದರು. 31 ಜನರ ನೂತನ ತಾಲ್ಲೂಕು ಸಮಿತಿಗೆ ಭೀಮಣ್ಣ ಭೋವಿ ಅಧ್ಯಕ್ಷರಾಗಿಯೂ, ಚಂದ್ರಶೇಖರ ಕೆಳಗಿನಮನಿ ಕಾರ್ಯದರ್ಶಿಯಾಗಿಯೂ, ಬಸವರಾಜ ಶಿವಪ್ಪ ಧಾರವಾಡ, ಹನುಮಂತಪ್ಪ ವೆಂಕಪ್ಪ ನ್ಯಾಸರ್ಗಿ ಮತ್ತು ಗೌರಮ್ಮ ಕಾಶಿ ಉಪಾಧ್ಯಕ್ಷರುಗಳಾಗಿಯೂ ಭೂತೇಶ್ ಚಿತ್ತಗಾರ ಸಹ ಕಾರ್ಯದರ್ಶಿಯಾಗಿಯೂ ಆಯ್ಕೆಯಾಗಿದ್ದಾರೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಬಾಯಿ ಬಿಟ್ಟರೆ ಸಾಕು ಸಂಸ್ಕೃತಿ.., ಶೀಲ.., ನೈತಿಕತೆ.., ದೇಶಪ್ರೇಮ... ಇತ್ಯಾದಿ ಇತ್ಯಾದಿ ನುಡಿಮುತ್ತುಗಳನ್ನೇ ಉದುರಿಸುವ ಸಂಘ ಪರಿವಾರದ ಜನರ ಸಾಂಸ್ಕೃತಿಕ ಮಟ್ಟ ಎಂತಹದ್ದು ಎಂಬುದು ಪದೇ ಪದೇ ಸಾಬೀತಾಗುತ್ತಿದೆ. ಬಿಜೆಪಿ ಶಾಸಕ ಹಾಲಪ್ಪನವರಿಂದ ಸ್ನೇಹಿತನ ಹೆಂಡತಿಯ ಮೇಲೆ ಅತ್ಯಾಚಾರ.., ರೇಣುಕಾಚಾರ್ಯರ ರಾಸಲೀಲೆ ಪ್ರಕರಣದ ನಂತರ ಇದೀಗ ಮುಖ್ಯಮಂತ್ರಿಗಳಿಂದ ರೇವು ಪಾರ್ಟಿ ಸಮರ್ಥನೆ... ಬಿಜೆಪಿ ಸಚಿವರ ಹಿಂಡು ಸದನದಲ್ಲಿಯೇ ಮೊಬೈಲ್‌ನಲ್ಲಿ ಬ್ಲೂ ಫಿಲಂ ನೋಡಿದ ಅಘಾತಕಾರಿ ಘಟನಾವಳಿಗಳು ....ಇದಕ್ಕೆ ಇನ್ನೇನೇನು ಪ್ರಕರಣಗಳು ಸೇರಿಕೊಳ್ಳಲಿವೆಯೋ ?

ಧರ್ಮ-ಶೀಲ-ಸಂಸ್ಕೃತಿಗಳ 'ವಾರಸುದಾರ'ರ ನಿಜ ಬಣ್ಣ

ಜಿ.ವಿ.ಶ್ರೀರಾಮರೆಡ್ಡಿ

ದೇಶದಲ್ಲಿ ಎಲ್ಲವನ್ನು ಮಾರಾಟಕ್ಕೆ ಇಟ್ಟಿರುವ ಮಹಾನ್ 'ದೇಶಭಕ್ತ'ರು ಕರಾವಳಿಯಲ್ಲಿ ಸಾಂಸ್ಕೃತಿಕ ಉತ್ಸವದ ಹೆಸರಿನಲ್ಲಿ ಉಡುಪಿಯ ಹತ್ತಿರವಿರುವ ಸೇಂಟ್ ಮೇರಿ ದ್ವೀಪದಲ್ಲಿ ನಡೆದ ರೇವು ಪಾರ್ಟಿ ಎಂಬ ಮೋಜಿನ ಪಾರ್ಟಿ (5.2.2012)ಯಲ್ಲಿ ವಿದೇಶಿಯ ಪ್ರವಾಸಿಗರು ನಡೆಸಿರುವ ನಗ್ನ ನೃತ್ಯದ ದೃಶ್ಯಗಳನ್ನು ನೋಡಿ ದೇಶದ ಮತ್ತು ಮುಖ್ಯವಾಗಿ ರಾಜ್ಯದ ಪ್ರಜ್ಞಾವಂತ ಜನತೆ ರಾಜ್ಯದಲ್ಲಿ ಏನು ನಡೆದಿದೆ ಎಂದು ಆತಂಕಗೊಂಡಿದ್ದಾರೆ. ಈ ರಾಜ್ಯದ ಬಿಜೆಪಿ ಸರ್ಕಾರದ ನೇತೃತ್ವವನ್ನು ವಹಿಸಿರುವ ಈ ರಾಜ್ಯದ ಮುಖ್ಯಮಂತ್ರಿ ಉಡುಪಿಯಲ್ಲಿ ಸಮರ್ಥನೆ ಮಾಡಿದ ರೀತಿಯಂತೂ ಜನರಲ್ಲಿ ದಿಗ್ಭ್ರಮೆಯನ್ನು ಉಂಟುಮಾಡಿದೆ. ಸದಾನಂದಗೌಡರ ನುಡಿಮುತ್ತುಗಳು ಹೀಗಿವೆ. "ಪ್ರವಾಸೋಧ್ಯಮವನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಇಂತಹ ಕ್ರಿಯೆಗಳನ್ನು ಪ್ರೋತ್ಸಾಹಿಸಬೇಕಾಗುತ್ತದೆ. ಇದರಿಂದ ಹೇರಳವಾದ ವಿದೇಶಿಯರ ಹಣ ಡಾಲರ್‌ಗಳ ರೂಪದಲ್ಲಿ ನಮ್ಮ ರಾಜ್ಯಕ್ಕೆ ಬಂದು ರಾಜ್ಯದ ಆದಾಯ ಹೆಚ್ಚಾಗುತ್ತದೆ".

ನಿಜ ಬಣ್ಣ

ತಾವೇ ಪುರಾತನ ಭವ್ಯ ಸಂಸ್ಕೃತಿಯ ಏಕೈಕ ವಾರಸುದಾರೆಂದು, ಶೀಲ ಮತ್ತು ಸಭ್ಯತೆಯ ವಕ್ತಾರರೆಂದು, ತಾವು ಮಾತ್ರವೇ ಮಹಾನ್ ದೇಶಭಕ್ತರೆಂದು ದೇಶದ ಉದ್ದಗಲಕ್ಕೂ ಸ್ವಯಂ ಘೋಷಿಸಿಕೊಂಡು ತಮಗೆ ತಾವೇ ಹಣೆ ಪಟ್ಟಿಯನ್ನು ಹಾಕಿ ಕೊಂಡಿರುವ ಬಿಜೆಪಿಯ ನಿಜ ಬಣ್ಣ ಇದು. ಕಾಕತಾಳೀಯವೆಂಬಂತೆ 07/02/2012 ರಂದು ವಿಧಾನ ಸಭೆಯ ಸದನದಲ್ಲಿ ರಾಜ್ಯದ ಅನಾವೃಷ್ಟಿ ಮತ್ತು ಉಡುಪಿಯ ಸೇಂಟ್ ಮೇರೀಸ್ ದ್ವೀಪದಲ್ಲಿ ನಡೆದ ಮೋಜು ಮಸ್ತಿ ಬಗ್ಗೆ ಗಂಭೀರ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲೇ ಬಿಜೆಪಿ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮಂತ್ರಿಗಳಾದ ಸಿ.ಸಿ. ಪಾಟೀಲ್ ಮತ್ತು ಬಂದರು ಮತ್ತು ಮೀನುಗಾರಿಕೆ ಖಾತೆ ಸಚಿವ ಕೃಷ್ಣ ಪಾಲೇಮಾರ್, ಸಹಕಾರಿ ಇಲಾಖೆಯ ಸಂಪುಟ ದರ್ಜೆಯ ಸಚಿವ ಲಕ್ಷಣ ಸವದಿ ಲಂಪಟ ಮಂತ್ರಿಗಳು ಅಶ್ಲೀಲ ದೃಶ್ಯಗಳ ಬ್ಲೂ ಫಿಲಂ ನೋಡುತ್ತಿದ್ದುದನ್ನು ಸುದ್ದಿಮಾಧ್ಯಮಗಳು ಪ್ರಸಾರ ಮಾಡುತ್ತಿವೆ.



ಬೇಜವಾಬ್ದಾರಿ ಪ್ರತಿಕ್ರಿಯೆ

ಇದಕ್ಕೆ ಪ್ರತಿಕ್ರಿಯಿಸಿದ ರಾಜ್ಯ ಬಿಜೆಪಿ ಪಕ್ಷದ ಅಧ್ಯಕ್ಷರ ಧೋರಣೆ ತೀರಾ ಬೇಜವಾಬ್ದಾರಿಯಿಂದ ಕೂಡಿತ್ತು. ಈ ಬಗ್ಗೆ ಕಡೂರಿನಲ್ಲಿ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸದಾ ಆನಂದವಾಗಿ 'ಹಲ್ಲು ಗಿಂಜುವ ಮುಖ್ಯಮಂತ್ರಿ' ಗೌಡರ ಮಾತು ನಿಜವಾಗಿಯೂ ಹಾಸ್ಯಾಸ್ಪದವಾಗಿತ್ತು.



ತಾನು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಸಂಘ ಪರಿವಾರ ಮತ್ತು ಅದರ ರಾಜಕೀಯ ಮುಖವಾಡವಾಗಿರುವ ಬಿಜೆಪಿಯು ಈ ದೇಶದ ಜನತೆಗೆ ಹೇಳುತ್ತಿದ್ದ 'ದೇಶಭಕ್ತಿ', 'ಸ್ವದೇಶಿ ಮಂತ್ರ' ಎಷ್ಟು ಪೊಳ್ಳು ಮತ್ತು ವಂಚನೆಯ ಸ್ವರೂಪದ್ದೆಂದು ಗೊತ್ತಾಯಿತು. ಕೇಂದ್ರದಲ್ಲಿ 1998 ರಿಂದ 2004 ರವರೆಗೆ ನಡೆಸಿದ ಅಧಿಕಾರದ ಅವಧಿಯಲ್ಲಿ ಇವರು ಮಾಡಿದ ಮೊದಲ 'ದೇಶಭಕ್ತಿ' ಮತ್ತು 'ಸ್ವದೇಶಿ' ಭಕ್ತಿಯ ಕೆಲಸವೆಂದರೆ ವಿಶ್ವ ವ್ಯಾಪಾರ ಸಂಘಟನೆಯ ಎಲ್ಲಾ ನಿರ್ದೇಶನಗಳನ್ನು ಅತಿ ವೇಗವಾಗಿ ಜಾರಿಗೊಳಿಸಿ ಈ ದೇಶದ ಆರ್ಥಿಕ ವ್ಯವಸ್ಥೆಯನ್ನು ಸಾಮ್ರಾಜ್ಯಶಾಹಿ ದೇಶಗಳಲ್ಲಿನ ವಿದೇಶಿಯ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಒತ್ತೆ ಇಟ್ಟದ್ದು. ಈ ಒತ್ತೆಯನ್ನು ಇವರು ಸಮರ್ಥಿಸಿಕೊಂಡಿದ್ದು. ಈ ಒಪ್ಪಂದಗಳ ಜಾರಿಯಿಂದ ನಮ್ಮ ದೇಶಕ್ಕೆ ಹೇರಳವಾದ ವಿದೇಶಿ ಬಂಡವಾಳ ಹರಿದು ಬರುತ್ತದೆ ಇದರಿಂದ ನಮ್ಮ ದೇಶದ ವ್ಯಾಪಾರ ಅಭಿವೃದ್ಧಿಯಾಗಿ ಹೇರಳವಾದ ಆದಾಯ ಬರುತ್ತದೆಂದು ಸಮರ್ಥಿಸಿಕೊಂಡಿದ್ದು. ಇಲ್ಲಿಂದ ಪ್ರಾರಂಭವಾದ ಇವರ ದೇಶದ ಅಮೂಲ್ಯ ಸಂಪತ್ತಿನ ಮಾರಾಟದ ಪ್ರಕ್ರಿಯೆ ಮುಂದುವರಿದು ಈ ದೇಶದ ಶಿಕ್ಷಣವನ್ನು ಮಾರಾಟಕ್ಕೆ ಇಟ್ಟಿತು. ಪ್ರಕೃತಿ ಸಂಪತ್ತಾದ ಗಣಿಗಳನ್ನು ಮತ್ತು ಭೂಮಿಯನ್ನು ಮಾರಾಟಕ್ಕೆ ಇಟ್ಟಿತು. ಇದು ಸಾಲದೆಂಬಂತೆ ನಮ್ಮ ದೇಶದ ಜನತೆ ಅನೇಕ ತ್ಯಾಗ, ಬಲಿದಾನಗಳಿಂದ ಸಂಪಾದಿಸಿದ ಸ್ವಾತಂತ್ರ್ಯ, ಸಾರ್ವಭೌಮತ್ವವನ್ನು ಅಮೇರಿಕನ್ ಸಾಮ್ರಾಜ್ಯಶಾಹಿಗಳಿಗೆ ಒತ್ತೆ ಇಟ್ಟಿತು. ಕಡೆಗೆ ಈ ದೇಶದ ರಾಜಕೀಯ ಅಸ್ತಿತ್ವಕ್ಕೆ ಆಧಾರವಾದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಆಪರೇಷನ್ ಕಮಲದ ಹೆಸರಿನಲ್ಲಿ ಮಾರಾಟದ ಸರಕನ್ನಾಗಿ ಮಾರ್ಪಾಟು ಮಾಡಿತು. ನ್ಯಾಯಾಂಗ ಮತ್ತು ಕಾರ್ಯಾಂಗದಲ್ಲಿ ವ್ಯಾಪಾರವನ್ನು ಪ್ರಾರಂಭ ಮಾಡಿತು. ಇನ್ನು ತಾನು ಇಷ್ಟು ದಿವಸಗಳ ಕಾಲ ಈ ದೇಶದ ಜನತೆಯನ್ನು ವಂಚಿಸಿ 'ಪರಂಪರೆ', 'ಜಗತ್ತಿಗೆ ಆದರ್ಶವಾದ ಭಾರತೀಯ ಸಂಸ್ಕೃತಿ'ಯನ್ನು ವ್ಯಾಪಾರಕ್ಕೆ ಇಟ್ಟು ಬಿಟ್ಟರು. ಉಡುಪಿ ಸೇಂಟ್ ಮೇರಿ ದ್ವೀಪದಲ್ಲಿ ಕರಾವಳಿ ಉತ್ಸವವನ್ನು ಉದ್ಘಾಟನೆಯನ್ನು ಮಾಡಿದ್ದೂ ಅಲ್ಲದೇ, ಅಲ್ಲಿ ನಡೆದ ಅಶ್ಲೀಲ ಮೋಜಿನ ರೇವು ಪಾರ್ಟಿಯನ್ನು ಸಮರ್ಥಿಸಿಕೊಂಡರು. ಇದು ಇವರ ದೇಶದ ಉದ್ದಗಲಕ್ಕೂ ಪುರಾತನ ಭಾರತೀಯ 'ಸಂಸ್ಕೃತಿಯ ವಾರಸದಾರಿಕೆಯ ನಿಜ ಸ್ವರೂಪ.

ಈ ದೇಶದ ಇತಿಹಾಸದ ಬಗ್ಗೆ ಕನಿಷ್ಟ ತಿಳುವಳಿಕೆ ಇರುವ, ಬಹಳ ಮುಖ್ಯವಾಗಿ ಈ ದೇಶದ ಮಹಾನ್ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದ ಬಗ್ಗೆ ಕನಿಷ್ಟ ಪರಿಚಯವಿರುವ ಯಾರಿಗಾದರೂ ಕಾಣಿಸುವ ನಗ್ನ ಸತ್ಯವೆಂದರೆ ಇವರ ದೇಶ ದ್ರೋಹಿ ರೂಪ. ಸಂಘ ಪರಿವಾರದ ಪ್ರಥಮ ರೂವಾರಿಗಳಲ್ಲಿ ಒಬ್ಬರಾದ ಸಂಘಪರಿವಾರ 'ದೇಶದ ಹೆಮ್ಮೆಯ ಪುತ್ರ' ಎನ್ನುವ ವಿನಾಯಕ ದಾಮೋದರ ಸಾವರ್ಕರ್ ತಮ್ಮನ್ನು ಅಂಡಮಾನ್ ದ್ವೀಪದಲ್ಲಿ ಸೆಲ್ಯೂಲಾರ್ ಜೈಲಿನಲ್ಲಿ ಇಟ್ಟಿದ್ದಾಗ, ಅಂದರೆ 1911 ರಲ್ಲಿ ಬ್ರಿಟೀಷ್ ಸರ್ಕಾರಕ್ಕೆ ಪತ್ರವನ್ನು ಬರೆದು ನನ್ನನ್ನು ಜೈಲಿನಿಂದ ಬಿಡುಗಡೆ ಮಾಡಿದರೆ ನಮ್ಮ ಘನತೆವೆತ್ತ ವಿಕ್ಟೋರಿಯಾ ಮಾಹಾರಾಣಿಯ ಭಾರತ ಸರ್ಕಾರಕ್ಕೆ ಅತಿ ವಿಧೇಯತೆಯಿಂದ ಸೇವೆಯನ್ನು ಮಾಡುತ್ತೇನೆಂದು ಭರವಸೆ ನೀಡಿ, ಅದರಂತೆ ಬಿಡುಗಡೆಯಾದ ಮೇಲೆ ತಾನು ಹೇಳಿದ ರೀತಿಯಲ್ಲಿ ಮುಚ್ಚಳಿಕೆಯನ್ನು ಬರೆದುಕೊಟ್ಟು ಸ್ವಾತಂತ್ರ್ಯ ಹೋರಾಟಕ್ಕೆ ತಿಲಾಂಜಲಿ ಇಟ್ಟು, ಬರೀ ಕೋಮುಗಲಭೆಗಳ ಪಿತೂರಿಗಳನ್ನು ಮಾತ್ರವೇ ಮಾಡುತ್ತ ಜೀವನ ಕಳೆದ 'ಮಹಾನ್ ದೇಶಭಕ್ತ'. ಈ ಸಂಘ ಪರಿವಾರದ ಜನ ಸ್ವಾತಂತ್ರ್ಯ ಸಂಗ್ರಾಮದ ಉದ್ದಕ್ಕೂ ಬ್ರಿಟೀಷರ ಗುಲಾಮರಂತೆ ವರ್ತಿಸಿದ್ದಷ್ಟೆ ಅಲ್ಲದೇ ಅವರ ಆಳ್ವಿಕೆಯನ್ನು ಸಮರ್ಥಿಸಿದರು. 1975ರಲ್ಲಿ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಆರೆಸ್ಸೆಸ್ಸನ್ನು ಶ್ರೀಮತಿ ಇಂದಿರಾಗಾಂಧಿ ನಿಷೇದಿಸಿದಾಗ ಆಗಿನ ಸರ ಸಂಚಾಲಕರಾದ ಬಾಳಾಸಾಹೇಬ್ ದೇವರಸ್ ಆಗಿನ ಪ್ರಧಾನಿ ಇಂದಿರಾಗಾಂಧಿಗೆ " ನಮ್ಮದು ರಾಜಕೀಯ ಸಂಘಟನೆಯಲ್ಲ, ಸಾಂಸ್ಕೃತಿಕ ಸಂಘಟನೆ. ನಮ್ಮ ಮೇಲಿನ ನಿಷೇಧ ತೆಗೆಯಿರಿ " ಎಂದು ವಿನಂತಿಸಿ ಮುಚ್ಚಳಿಕೆ ಬರೆದುಕೊಟ್ಟ ಸಂಘದ ಮಹಾನ್ ದೇಶಭಕ್ತಿಯನ್ನು ಈ ದೇಶದ ಜನತೆ ನೋಡಿದ್ದಾರೆ.

6 ವರ್ಷಗಳ ಕಾಲ ಈ ದೇಶದ ಪ್ರಧಾನ ಮಂತ್ರಿಯಾಗಿದ್ದ ಶ್ರೀಮಾನ್ ಅಟಲ್ ಬಿಹಾರಿ ವಾಜಪೇಯಿ 1942ರ ಕ್ವಿಟ್ ಇಂಡಿಯಾ ಚಳುವಳಿಯ ಕಾಲದಲ್ಲಿ ಆಗ್ರಾದ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ " ನನಗೂ ಸ್ವಾತಂತ್ರ್ಯ ಹೋರಾಟಕ್ಕೂ ಯಾವುದೇ ಸಂಬಂಧವಿಲ್ಲ" ಎಂದು ಮುಚ್ಚಳಿಕೆಯನ್ನು ಬರೆದುಕೊಟ್ಟು ಸ್ವಾತಂತ್ರ್ಯ ಹೋರಾಟಗಾರರ ವಿರುದ್ಧ ಸಾಕ್ಷಿ ಹೇಳಿ ತಾವು ಬಿಡುಗಡೆಯಾಗಿ ಹೊರ ಬಂದ ಇತಿಹಾಸವನ್ನು ಅಳಿಸಲು ಸಾಧ್ಯವಿಲ್ಲ. ಇಂಥವರೊಬ್ಬರು ಈ ಮಹಾನ್ ದೇಶದ ಪ್ರಧಾನ ಮಂತ್ರಿಯಾಗಿದ್ದ ರೆಂಬುದೇ ಈ ದೇಶಕ್ಕೆ ಒಂದು ಕಳಂಕ. ಇದು ಇವರ ದೇಶ ಭಕ್ತಿಯ ಕೆಲವು ಸ್ಯಾಂಪಲ್‌ಗಳು. ಇನ್ನು ಇವರ ಒಟ್ಟು ಪರಂಪರೆಯ 'ಹೆಮ್ಮೆ'ಯ, 'ಸಂಸ್ಕೃತಿ'ಯ.

ಪುಟ 15 ಕ್ಕೆ.......

'ಜಾಗೋ ಭಾರತ್' ಕಾರ್ಯಕ್ರಮಕ್ಕೆ ಎಸ್‌ಎಫ್‌ಐನಿಂದ ಮಂಗಳೂರಿನಲ್ಲಿ ಪ್ರತಿಭಟನೆ

ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತು ಕೋಮುವಾದವನ್ನು ಪ್ರಚೋದಿಸುವ 'ಜಾಗೋ ಭಾರತ್' ಕಾರ್ಯಕ್ರಮವನ್ನು ಮಂಗಳೂರಿನ ವಿವಿ ಕಾಲೇಜಿನಲ್ಲಿ ಆಯೋಜಿಸಿ ಚಕ್ರವರ್ತಿ ಸೂಲಿಬೆಲೆಯನ್ನು ಭಾಷಣಕ್ಕಾಗಿ ಆಹ್ವಾನಿಸಲಿದ್ದ ಕಾರ್ಯಕ್ರಮಕ್ಕೆ ಎಸ್‌ಎಫ್‌ಐ ಹಾಗೂ ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಎಬಿವಿಪಿಯು ಕಾರ್ಯಕ್ರಮದ ಸ್ವರೂಪವನ್ನು ಬದಲಿಸಿ ತಮ್ಮ ಬೆಂಬಲಿಗರು ಹೆಚ್ಚಿರುವ ಕಾಲೇಜು ವಿದ್ಯಾರ್ಥಿ ಸಂಘದ ಮೂಲಕ 'ವಿವೇಕಾನಂದ ಜಯಂತಿ 'ಆಚರಿಸಲು ಸಿದ್ಧತೆ ಮಾಡುತ್ತಿರುವಾಗ, ಎಬಿವಿಪಿಯ ಹುನ್ನಾರ ಅರಿತ ಕಾಲೇಜಿನ ಆಡಳಿತ ಮಂಡಳಿ ಮೊದಲಲ್ಲಿ ಅದಕ್ಕೆ ಅನುಮತಿ ನೀಡಿರಲಿಲ್ಲ. ಇದನ್ನು ವಿರೋಧಿಸಿ ಎಬಿವಿಪಿ ವಿದ್ಯಾರ್ಥಿಗಳಿಂದ ತರಗತಿ ಬಹಿಷ್ಕಾರ ನಡೆಸಿ ಕಾಲೇಜಿನ ಆವರಣದಲ್ಲಿ ನಾಲ್ಕು ದಿನ ಪ್ರತಿಭಟನೆ ನಡೆಸುತ್ತಿತ್ತು. 'ವಿವೇಕಾನಂದ ಜಯಂತಿ'ಯು 'ಜಾಗೋ ಭಾರತ್' ಕಾರ್ಯಕ್ರಮದ ಹೊರಲೇಪ ಎಂದು ಎಸ್‌ಎಫ್‌ಐಯು ವಿದ್ಯಾರ್ಥಿಗಳಿಗೂ ಆಡಳಿತ ಮಂಡಳಿಗೂ ತಿಳಿಸಿ ಈ ಕಾರ್ಯಕ್ರಮ ಮಾಡಲು ಅವಕಾಶ ನೀಡಬಾರದೆಂದು ಆಗ್ರಹಿಸಿತ್ತು. ಆದಾಗ್ಯೂ ಪ್ರಾಂಶುಪಾಲರು ಎಬಿವಿಪಿಯೊಂದಿಗೆ ಸಂಧಾನ ನಡೆಸಿ ಕೆಲವು ಶರತ್ತುಗಳೊಂದಿಗೆ 'ವಿವೇಕಾನಂದ ಜಯಂತಿ'ಯನ್ನು ಫೆಬ್ರವರಿ 6 ರಂದು ಆಚರಿಸಲು ಅನುಮತಿ ಕೊಟ್ಟಿತು.

ಫೆಬ್ರವರಿ 6ರ ಕಾರ್ಯಕ್ರಮವನ್ನು ವಿರೋಧಿಸಿ ಎಸ್‌ಎಫ್‌ಐ ಮಂಗಳೂರು ವಿವಿ ಕಾಲೇಜಿನ ಆವರಣದ ಹೊರಭಾಗದಲ್ಲಿ ಪ್ರತಿಭಟನಾ ಪ್ರದರ್ಶನವನ್ನು ಅಂದೇ ಬೆಳಿಗ್ಗೆ ಏರ್ಪಡಿಸಿರುತ್ತದೆ. 'ಜಾಗೋ ಭಾರತ್' ಎಂಬ ಎಬಿವಿಪಿ ಕಾರ್ಯಕ್ರಮ ಹಾಗೂ ಚಕ್ರವರ್ತಿ ಸೂಲಿಬೆಲೆ ಅವರ ಭಾಷಣವು ಕಾಲೇಜಿನ ಒಳಗಿನ ಸೌಹಾರ್ದ ವಾತಾವರಣ ವನ್ನು ಕೆಡಿಸುವ ಕಾರ್ಯಕ್ರಮವೆಂದೂ, ಆರೆಸ್ಸೆಸ್ಸಿನ ಕೋಮುವಾದೀ ಅಜೆಂಡಾದ ಭಾಗ ಇದಾಗಿದೆಯೆಂದೂ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಎಸ್‌ಎಫ್‌ಐ ರಾಜ್ಯ ಸಮಿತಿ ಸದಸ್ಯರಾದ ಜೀವನ್‌ರಾಜ್ ಕುತ್ತಾರ್ ಟೀಕಿಸಿದರು. ಎಸ್‌ಎಫ್‌ಐ ಜಿಲ್ಲಾ ಸಮಿತಿ ಅಧ್ಯಕ್ಷ ನಿತಿನ್ ಕುತ್ತಾರ್, ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಚರಣ್ ಶೆಟ್ಟಿ ಕೂಡಾ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ್ದರು.

ಡಿವೈಎಫ್‌ಐ ನಗರ ಸಮಿತಿ ಅಧ್ಯಕ್ಷರಾದ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್, ಮಾಜಿ ರಾಜ್ಯ ಸಮಿತಿ ಅಧ್ಯಕ್ಷರಾದ ಸುನಿಲ್ ಕುಮಾರ್ ಬಜಾಲ್, ಸಮುದಾಯ ಸಂಘಟನೆಯ ವಾಸುದೇವ ಉಚ್ಚಿಲ, ಐ.ಎ.ಪ್ರಸನ್ನ ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಪ್ರವಾಸಿ ತಾಣಕ್ಕೆ ದುಬಾರಿ ಶುಲ್ಕ ವಿರೋಧಿಸಿ ಡಿವೈಎಫ್‌ಐ ಪ್ರತಿಭಟನೆ

ಕಡಲತಡಿ

ವರದಿ : ವಾ.ಉ.

ಬೆಳ್ತಂಗಡಿ ತಾಲೂಕಿನ ಜಮಾಲಾಬಾದ್ ಕೋಟೆ ಅಥವಾ ಗಡಾಯಿಕಲ್ಲು ಎಂಬುದು ಐತಿಹಾಸಿಕ ಪ್ರವಾಸಿ ತಾಣವಾಗಿದೆ. ಟಿಪ್ಪೂ ಸುಲ್ತಾನನು ಕಟ್ಟಿಸಿದ ಈ ಕೋಟೆಯು ಸಮುದ್ರ ಮಟ್ಟದಿಂದ 1700 ಅಡಿ ಎತ್ತರದಲ್ಲಿದ್ದು, ಚಾರಣಿಗರಿಗೆ ಸವಾಲು ಹಾಕುವ ಕೋಟೆಯಾಗಿದ್ದು ನೂರಾರು ಜನರು ಈ ಬೆಟ್ಟವನ್ನು ಹತ್ತುತ್ತಿದ್ದರು. ಕೋಟೆಯು ಪುರಾತತ್ವ ಇಲಾಖೆಗೆ ಸೇರಿದ್ದಾಗಿದೆ. ಈ ಬೆಟ್ಟವನ್ನು ಹತ್ತಲು ನಡ ಎಂಬ ಗ್ರಾಮದಿಂದ ಹೋಗಬೇಕಿದ್ದು, ಕುದುರೆಮುಖ ರಾಷ್ಟ್ರೀಯ ಅರಣ್ಯದ ಅರ್ಧ ಕಿ.ಮೀ.ನಷ್ಟು ಪ್ರದೇಶವನ್ನು ದಾಟಿ ಹೋಗಬೇಕಿದೆ. ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗವು ಪ್ರವಾಸಿಗಳಾದ ವಿದೇಶೀಯರಿಂದ ರೂ.1000 ಇತರರಿಂದ ರೂ.200 ಮತ್ತು ಮಕ್ಕಳಿಂದ ರೂ.100 ಶುಲ್ಕ ವಸೂಲಿ ಮಾಡುತ್ತಿತ್ತು. ಇದರಿಂದ ಸಾವಿರಾರು ಪ್ರವಾಸಿಗಳು ಚಾರಣ ಮಾಡಲಾಗದಂಥ ಪರಿಸ್ಥಿತಿ ಉಂಟಾಗಿತ್ತು.

ಈ ದುಬಾರಿ ಶುಲ್ಕವನ್ನು ಕಿತ್ತೊಗೆಯಬೇಕೆಂದು ಸಾರ್ವಜನಿಕರು ವನ್ಯಜೀವಿ ವಿಭಾಗವನ್ನು ಎಷ್ಟು ಕೇಳಿಕೊಂಡರೂ ಇಲಾಖೆ ಅದನ್ನು ಕೈಬಿಡಲಿಲ್ಲ. ಈ ಶುಲ್ಕ ವಸೂಲಿಯನ್ನು ವಿರೋಧಿಸಿ ಜನವರಿ 29 ರಂದು ಬೆಳ್ತಂಗಡಿ ತಾಲೂಕು ಡಿವೈಎಫ್‌ಐ ನೇತೃತ್ವದಲ್ಲಿ ನಡ ಗ್ರಾಮದ ಮಂಜೊಟ್ಟಿಯಲ್ಲಿ ಪ್ರತಿಭಟನಾ ಸಭೆ ನಡೆಸಿ ಮೆರವಣಿಗೆಯಲ್ಲಿ ಸಾಗಿದ ನಾಲ್ನೂರಕ್ಕೂ ಮೀರಿದ ಸಾರ್ವಜನಿಕರು ಪ್ರವೇಶ ಶುಲ್ಕ ನೀಡದೆ ಚಾರಣ ನಡೆಸಿದರು. ಬೆಟ್ಟದ ಕೋಟೆಯಲ್ಲಿ ಪ್ರವಾಸಿಗರಿಗೆ ಸೌಲಭ್ಯಗಳನ್ನು ವ್ಯವಸ್ಥಿತಗೊಳಿಸಬೇಕೆಂದೂ ಈ ಸಂದರ್ಭದಲ್ಲಿ ಆಗ್ರಹಿಸಲಾಯಿತು.

ಅರಣ್ಯ ಇಲಾಖೆಯವರು ಪ್ರವೇಶ ನಿರಾಕರಿಸಿದಾಗ ಪ್ರತಿಭಟನಾಕಾರರು ಹಾಗೂ ಇಲಾಖೆ ಸಿಬ್ಬಂದಿ ಮತ್ತು ಹತ್ತಕ್ಕೂ ಮೀರಿದ ಪೋಲೀಸರೊಂದಿಗೆ ಮಾತಿನ ಚಕಮಕಿ ನಡೆಯಿತು. ಬಳಿಕ ಚಾರಣಕ್ಕೆ ಅವಕಾಶ ದೊರೆಯಿತು. ಡಿವೈಎಫ್‌ಐ ಮಾಜಿ ಅಧ್ಯಕ್ಷ ವಸಂತ ನಡ ಪ್ರತಿಭಟನೆಯ ಅಧ್ಯಕ್ಷತೆ ವಹಿಸಿದ್ದರು. ನಡ ಗ್ರಾ.ಪಂ.ಮಾಜಿ ಅಧ್ಯಕ್ಷ ಮುನಿರಾಜ ಅಜ್ರಿ ಪ್ರತಿಭಟನೆಯನ್ನು ಉದ್ಘಾಟಿಸಿ ಮಾತನಾಡಿದರು. ಡಿವೈಎಫ್‌ಐ ತಾಲೂಕು ಅಧ್ಯಕ್ಷ ನಾರಾಯಣ, ಕಾರ್ಯದರ್ಶಿ ಸುಜಾತ, ಖಜಾಂಚಿ ದಾಮೋದರ ಭಟ್, ಸಿಪಿಎಂ ತಾಲೂಕು ಸಮಿತಿ ಮುಖಂಡರಾದ ಶಿವ ಕುಮಾರ್, ಬಿ.ಎಂ.ಭಟ್, ಹರಿದಾಸ್, ಶೇಖರ ಲಾಯಿಲ, ಶ್ಯಾಮರಾಜ್, ಸುಕನ್ಯಾ, ನೆಬಿಸಾ, ಜಯಂತಿ ನೆಲ್ಲಿಂಗೇರಿ, ಜಯರಾಮ ಮಯ್ಯ ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಈ ಪ್ರತಿಭಟನೆ ನಡೆದ ಬಳಿಕ ಪ್ರವಾಸಿಗಳಿಂದ ಅರಣ್ಯ ಇಲಾಖೆ ವನ್ಯಜೀವಿ ವಿಭಾಗ ಶುಲ್ಕ ವಸೂಲಿ ಮಾಡುತ್ತಿಲ್ಲವೆಂದು ತಿಳಿದು ಬರುತ್ತದೆ.

ಮನಸ್ಸು ಗಾಂಧಿ ಬಜಾರು....

ಪುಟ 16 ರಿಂದ....

ನಾನು ಈಗ ಮಾಡಿ ತೋರಿಸಿದ್ದೇನೆ. ಇದು ನನ್ನ ಸಾಧನೆ.' ಎಂಬ ಗರ್ವದ ನುಡಿ ಕಾರ್ಪೋರೇಟರ್ ಮಹಾಶಯರ ಬಾಯಿಯಿಂದ ಹೊರಬರುತ್ತಿದೆ ಎನ್ನುವುದನ್ನೂ ಕೇಳಿಸಿಕೊಂಡ ಈ ಬಡ ವ್ಯಾಪಾರಿಗಳು ಬಸವಳಿದಿದ್ದಾರೆ.

ಆಗಾಗ ಕೆಲ ಪೋಲೀಸರ ಹಫ್ತಾ ವಸೂಲಿಯ ನಡುವೆಯೂ ಕಷ್ಟವೋ ಸುಖವೋ ನೆಮ್ಮದಿಯಿಂದ ಗಂಜಿ ಕುಡಿಯಲು ದಾರಿ ಮಾಡಿಕೊಂಡು ವಂಶ ಪಾರಂಪರ್ಯವಾಗಿ ಅದೇ ಜಾಗದಲ್ಲೇ ವ್ಯಾಪಾರ ಮಾಡಿಕೊಂಡು ತಲೆತಲಾಂತರದ 'ಸಂಪ್ರದಾಯ' ಎಂಬಂತೆ ಬಾಳಿದ ಈ ಬಡ- ವರ್ಗದ ವ್ಯಾಪಾರಿಗಳು ಇಂದು ದಿಕ್ಕೆಟ್ಟಿದ್ದಾರೆ. ಈ ನಾಡ (ಕಟ್ಟಿ) ಬೆಳೆಸಿದವರು ನಾವೆಲ್ಲಿಗ್ಹೋಗಬೇಕು? ಎಂಬ ನೋವಿನ ಕೂಗು ಅವರದ್ದು. ಸುಮಾರು 250 ಕುಟುಂಬಗಳು ಬೀದಿಗೆ ಬಿದ್ದಿವೆ. ದಿನ ದೂಡುವುದೂ ದುಸ್ತರ ಎನ್ನುವುದು ಇವರ ಚಿಂತಾಜನಕ ಸ್ಥಿತಿ.

ಬದುಕು ಬವಣೆ

ಎಷ್ಟು ಸೈಟ್ ಮಾಡಿಕೊಂಡಿದ್ದೀರಿ? ಎಷ್ಟು ಮನೆ ಬಾಡಿಗೆಗೆ ಬಿಟ್ಟಿದ್ದೀರಿ? ಆಸ್ತಿ-ಪಾಸ್ತಿ ಎಷ್ಟಿದೆ? ಒಡವೆ-ಕಾಸು ಎಲ್ಲ ಕೂಡಿಟ್ಟಿದ್ದೀರಿ ಅಲ್ವಾ? ಎಂಬ ಕುಹಕಗಳ ನಡುವೆಯೂ ಆವತ್ತಿನ ಜೀವನೋಪಾಯಕ್ಕೆ; ವಾರದ ಬಡ್ಡಿಗೆ; ಬಂಡವಾಳಕ್ಕೆ; ಮಕ್ಕಳ-ಮರಿಗಳ ಓದಿಗೆ; ಕಾಯಿಲೆ-ಕಸಾಲೆಗೆ; ಮದುವೆ-ಮುಂಜಿ ಹಬ್ಬ-ಹರಿದಿನಕ್ಕೆ... ಹೀಗೆ ಪ್ರತಿಯೊಂದಕ್ಕೂ ಪರದಾಡಿ ಹಣ ಹೊಂದಿಸಿ ದಿನದೂಡುವ ಹೂ ಮಾರುವ ಮಹಿಳೆ, "1 ಕೆ.ಜಿ.ಗೆ 1,000-1,500ರೂ ಆಗಿರುವ ಮಲ್ಲಿಗೆ ಮೊಗ್ಗಿನ ದಂಡೆಯನ್ನು ಎಷ್ಟಕ್ಕೆ ಮಾರಬೇಕು ನೀವೆ ಹೇಳಿ?" ಎಂದು ಪ್ರಶ್ನಿಸುತ್ತಾಳೆ. "ಇವತ್ತು ನಾವುಗಳು ಕೊಂಡುಕೊಳ್ಳುವ ಎಲ್ಲದರ ಬೆಲೆಗಳೂ ಏರುತ್ತಿವೆ. ನಾವು ಯಾವುದನ್ನೂ ಬೆಳೆಯುತ್ತಿಲ್ಲ. (ಬೆಂಗಳೂರಿನಂತ ಮಹಾ ನಗರದಲ್ಲಿ ಬೆಳೆಯಲು ಜಾಗವೆಲ್ಲಿ!) ಎಲ್ಲವನ್ನೂ ಕೊಂಡುಕೊಳ್ಳೋದೆ ಅಲ್ವಾ?" ಅಂತ ಅವರ ಮಗಳು ಧ್ವನಿ ಸೇರಿಸುತ್ತಾರೆ. ಇವರ ಪ್ರಕಾರ- ಇವರ ಇಂದಿನ ಸ್ಥಿತಿಗೆ ಇವರ ಅಕ್ಕಪಕ್ಕದಲ್ಲಿರುವ ದೊಡ್ಡ ದೊಡ್ಡ ಶಾಪಿಂಗ್ ಮಾಲ್‌ಗಳೇ ಕಾರಣ. ಅವರ ಲಾಭಿಯಿಂದಾಗಿ ಈ ಬಡ ವ್ಯಾಪಾರಿಗಳನ್ನು ನಿರ್ನಾಮಗೊಳಿಸುವ ಹುನ್ನಾರ. 'ದೊಡ್ಡ ಮೀನು ಚಿಕ್ಕ ಮೀನುಗಳನ್ನು ನುಂಗಿ ಬದುಕು'ವಂತೆ ಇವರುಗಳನ್ನು ಎತ್ತಂಗಡಿ ಮಾಡಿಸಿದರೆ ತಮ್ಮ ಅಂಗಡಿಗೇ ಜನ ಬರುವರೆಂಬ ದೂ(ದು)ರಾಲೋಚನೆ ಇದ್ದಿರಲಿಕ್ಕೂ ಸಾಕು. ನಮ್ಮ ಸರ್ಕಾರದ ನೀತಿಯೂ ಕೂಡ 'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು' ಎಂಬಂತೆಯೇ ಇರುವುದರಿಂದಲೂ ಸಹ ಈ ಲಾಭ ಬಡುಕರಿಗೆ ಅನುಕೂಲವಾಗಿದೆ.

ಜಿ.ವಿ.ಶ್ರೀರಾಮ ರೆಡ್ಡಿಯವರನ್ನೂ ಒಳಗೊಂಡ ಎ.ಟಿ.ರಾಮಸ್ವಾಮಿ ಅಧ್ಯಕ್ಷತೆಯ ಸಮಿತಿಯನ್ನು ಭೂಮಿಗಳ್ಳರ ಕುರಿತ ತನಿಖೆಗಾಗಿ ಸರ್ಕಾರ ನೇಮಿಸಿತ್ತು. ಈ ರಾಮಸ್ವಾಮಿ ಆಯೋಗ 2005ರಲ್ಲಿಯೇ ಭೂಕಳ್ಳತನದ ಕುರಿತು ದಾಖಲೆ ಪುರಾವೆಗಳನ್ನು ಒದಗಿಸಿತ್ತು. ಆಗ ಅದರ ಅಂದಾಜು ಮೌಲ್ಯ ಸುಮಾರು 1ಲಕ್ಷ ಕೋಟಿ. ಈ ವರೆಗೂ ಸರ್ಕಾರ ಆ ಭೂಮಿಯನ್ನು ವಶಪಡಿಸಿಕೊಂಡಿಲ್ಲ. ವಿರೋಧ ಪಕ್ಷಗಳೂ ಕೂಡ ಸುಮ್ಮನೇ ಇವೆ. ಅಭಿವೃದ್ಧಿಗೆ ಅಂತಹ ಜಮೀನುಗಳನ್ನು ಬಳಸುವ ಬದಲು ಬಡವರ ಹೊಟ್ಟೆಯ ಮೇಲೆ ಹೊಡೆಯುವ ಕಾರ್ಯವನ್ನು ಸರ್ಕಾರ ಮಾಡುತ್ತಿದೆ. ಮತ್ತು ಈ ಕುರಿತು ಈಗ ನಡೆಯುತ್ತಿರುವ ಅಧಿವೇಶನದಲ್ಲೂ ಸಹ ಈವರೆಗೆ ಯಾವುದೇ ಚರ್ಚೆಗಳೂ ಬಂದಿಲ್ಲ.

ಇವತ್ತು ಜನ ಪೌಷ್ಟಿಕಾಂಶಗಳ ಕೊರತೆಯಿಂದಾಗಿ ನರಳಿ ನರಳಿ ಸಾಯುತ್ತಿದ್ದಾರೆ. ಉದ್ಯೋಗಗಳೂ ಲಭ್ಯವಿಲ್ಲ. ಜೀವನಾವಶ್ಯಕ ವಸ್ತುಗಳನ್ನು ಕೊಂಡುಕೊಳ್ಳಲು ಸಾಧ್ಯವೇ ಆಗುತ್ತಿಲ್ಲ. ಹಣದ ಅಪಮೌಲ್ಯವಾಗುತ್ತಿದೆ. ಬೆಲೆಗಳು ಏರುತ್ತಿವೆ. ಎಲ್ಲವೂ ಖಾಸಗೀಮಯವಾಗುತ್ತಿದೆ. ಇಂತಹ ಇಂದಿನ ಸಂದರ್ಭದಲ್ಲಿ ಪ್ರತಿ ಸಾಮಾನ್ಯನೂ ದೊಡ್ಡ-ದೊಡ್ಡ ಅಂಗಡಿ ಮುಂಗಟ್ಟುಗಳಲ್ಲಿ, ಅಥವಾ ಮಾಲ್‌ಗಳಿಗೆ ಹೋಗಿ ಬೇಕಾದ, ಅಗತ್ಯ ವಸ್ತುಗಳನ್ನು ಕೊಂಡುಕೊಳ್ಳಲು ಸಾಧ್ಯವೇ? ಅಲ್ಲಿ ಸಿಗುವಂತವು ಜೀವ ಭರಿತವಾದಂತವುಗಳೇ?

ಇಡ್ಲಿ-ದೋಸೆಗಳನ್ನು ತೊರೆದು ಪಿಜ್ಜಾ-ಬರ್ಗರ್‌ಗಳಂತ ಫಾಸ್ಟ್‌ಫುಡ್ ಸಂಸ್ಕೃತಿಗೆ ಮರುಳಾಗುತ್ತಿರುವ ಈಗಿನ ಸಂದರ್ಭದಲ್ಲಿ ನಮ್ಮದೇ ಆದ ಜೀವ ಭರಿತ, ಸತ್ವ ಭರಿತ ತಾಜಾ ಹೂ,ಹಣ್ಣು-ಹಂಪಲ,ತರಕಾರಿಗಳು ನಮಗೆ ಬೇಡವೇ? ಬಡ ಬೀದಿ ಬದಿ ವ್ಯಾಪಾರಸ್ಥರ ಬದುಕು ಮುಂದೇನು ಎಂಬ ಪ್ರಶ್ನೆ ಎದುರಾಗಿದೆ.

ವ್ಯಾಪಾರಿಗಳು ಪ್ರತಿಭಟನೆ ನಡೆಸಿದ್ದಾರೆ. ಸಮಸ್ಯೆಗೆ ಪರಿಹಾರ ದೊರೆಯಬೇಕಿದೆ.

ಯುಪಿಎ-2 ರಂತಹ ಯಾವುದೇ ದಿಕ್ಕು-ದೆಸೆ ಇಲ್ಲದಂತೆ ಕಾಣುವ, ಜತೆಗೆ ಹತ್ತು ಹಲವು ಹಗರಣಗಳು, ಭ್ರಷ್ಟಾಚಾರಗಳು ಮತ್ತು ವಿವಾದಗಳಿಗೆ ಅದರಂತೆ ತುತ್ತಾಗಿರುವ ಇನ್ನೊಂದು ಸರಕಾರವನ್ನು ನಾವು ಕಂಡಿಲ್ಲ. ಆದರೆ ಜನ-ವಿರೋಧಿ ನವ-ಉದಾರವಾದಿ ಸುಧಾರಣೆಗಳನ್ನು ಅವಿಶ್ರಾಂತವಾಗಿ ಅನುಸರಿಸುವಲ್ಲಿ ಮಾತ್ರ ಅದರದ್ದು ಏಕಚಿತ್ತದ ಸಮರ್ಪಣಾ ಭಾವ! ಈಗ ನಡೆಯುತ್ತಿರುವ ಚುನಾವಣೆಗಳ ಫಲಿತಾಂಶ ಕೆಲವು ರಾಜ್ಯಗಳಲ್ಲಿ ತಮ್ಮ ಪರವಾಗಿರುತ್ತದೆಂಬ ನಿರೀಕ್ಷೆಯಿಂದ ಮತ್ತು ಏರುತ್ತಿರುವ ಹಣಕಾಸು ಕೊರತೆಯನ್ನು ತಡೆಯುವ ಹೆಸರಿನಲ್ಲಿ ಪ್ರಸಕ್ತ ಬಜೆಟಿನಲ್ಲಿ ಒಂದು ಹೆಚ್ಚು ಆಕ್ರಾಮಕವಾದ ಉದಾರೀಕರಣದ ದಾಳಿ ಆರಂಭಿಸಲು ಅದು ಸಿದ್ಧಗೊಳ್ಳುತ್ತಿದೆ. ಇದನ್ನು ತಡೆಯಲು, ಅದರ ಧೋರಣೆಗಳ ದಿಕ್ಕನ್ನು ಬದಲಾಯಿಸಲು ಜನತೆಯ ಒತ್ತಡಗಳು ಹೆಚ್ಚ ಬೇಕಾಗಿದೆ.

ಉದಾರೀಕರಣಕ್ಕೆ ಮಾತ್ರ ಸಮರ್ಪಿಸಿಕೊಂಡಿರುವ

ದಿಕ್ಕುಗೇಡಿ ಯುಪಿಎ ಸರಕಾರ!

'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಫೆಬ್ರವರಿ 09, 2012 ರ ಸಂಚಿಕೆಯ ಸಂಪಾದಕೀಯದಿಂದ

ಉತ್ತರ ಪ್ರದೇಶದಲ್ಲಿ ಸಾಗಿರುವ ವಿಧಾನ ಸಭಾ ಚುನಾವಣೆಗಳು ಸಹಜವಾಗಿಯೇ ಬಹಳಷ್ಟು ಭಾವೋದ್ರೇಕ ಮತ್ತು ಕಹಿಯನ್ನು ಉಂಟು ಮಾಡಿವೆ. ಮುಂದಿನ ಹದಿನೈದು ದಿನಗಳಲ್ಲಿ ಇದು ತಾರಕಕ್ಕೆ ಏರುವುದು ಖಂಡಿತ. ಇದಕ್ಕೆ ಕಾರಣಗಳು ಹಲವು. ಒಂದೆಡೆ, ಅಧಿಕಾರಸ್ಥರ ವಿರುದ್ಧ ಸಾಮಾನ್ಯವಾಗಿ ಇರುವ ಭಾವನೆಯನ್ನು ಎದುರಿಸುತ್ತಿರುವ ಬಿಎಸ್‌ಪಿ, ಇನ್ನೊಂದೆಡೆ, ಹತಾಶ ಸ್ಪರ್ಧೆಯಲ್ಲಿರುವ ಎಸ್‌ಪಿ, ಮತ್ತೊಂದೆಡೆಯಲ್ಲಿ, ಹರಿದು ಹಂಚಿ ಹೋದಂತಿರುವ ಬಿಜೆಪಿ ಬಾಬ್ರಿ ಮಸೀದಿಯ ಧ್ವಂಸಕ್ಕೆ ಕಾರಣವಾದ ತನ್ನ ಗತವೈಭವ(!)ವನ್ನು ಮರಳಿ ಪಡೆಯಲು ಹೆಣಗುತ್ತಿದೆ, ಮಗದೊಂದು ಕಡೆ ದೇಸೀ ಯುವ ಪೀಳಿಗೆಯ ನೇತೃತ್ವದಲ್ಲಿ ಕಾಂಗ್ರೆಸ್ ಎಬ್ಬಿಸುತ್ತಿರುವ ಗದ್ದಲ-ಇಂತಹ ತೀಕ್ಷ್ಣ ಧ್ರುವೀಕರಣಗೊಂಡಿರುವ ಚತುಷ್ಕೋಣ ಸ್ಪರ್ಧೆ ಬಹಳಷ್ಟು ಧೂಳು ಎಬ್ಬಿಸಿದೆ.

ಮಹತ್ವದ ಸಂಗತಿಯೆಂದರೆ, ಉತ್ತರಪ್ರದೇಶದ ಫಲಿತಾಂಶಗಳು ಸದಾ ರಾಷ್ಟ್ರೀಯ ರಾಜಕಾರಣದ ಮೇಲೆ ಪರಿಣಾಮ ಬೀರಿದೆ. ಅದು ಈಗಲೂ ದೇಶದ ಅತಿ ಹೆಚ್ಚು ಜನಸಂಖ್ಯೆಯ ರಾಜ್ಯ. ಲೋಕಸಭೆಯಲ್ಲಿ ಅದರ ಸಂಖ್ಯೆ ಹಲವು ಬಾರಿ ಕೇಂದ್ರ ಸರಕಾರ ಮತ್ತು ಅದರ ಮುಖಂಡತ್ವದ ಸಂಯೋಜನೆಯನ್ನು ನಿರ್ಧರಿಸುತ್ತದೆ. ದೇಶಕ್ಕೆ ಅತಿ ಹೆಚ್ಚು ಸಂಖ್ಯೆಯ ಪ್ರಧಾನ ಮಂತ್ರಿಗಳನ್ನು ಕೊಟ್ಟಿರುವ ರಾಜ್ಯ ಅದು.

ಅಷ್ಟೇ ಅಲ್ಲ, ಸದ್ಯದ ಸನ್ನಿವೇಶದಲ್ಲಿ, ಅಲ್ಲಿ ತ್ರಿಶಂಕು ವಿಧಾನ ಸಭೆ ಏರ್ಪಟ್ಟಲ್ಲಿ, ಬಹುಮತ ಸ್ಥಾಪಿಸಲಿಕ್ಕಾಗಿ ಏರ್ಪಡುವ ಸಂಯೋಜನೆಗಳು ಮತ್ತು ಕಸರತ್ತುಗಳು ಕೇಂದ್ರದಲ್ಲಿನ ಮೈತ್ರಿಕೂಟದ ಸಮತೋಲನದ ಮೇಲೂ ಗಮನಾರ್ಹ ಪ್ರಭಾವ ಬೀರಲಿವೆ. ಹೀಗಿರುವಾಗ ಈ ಚುನಾವಣೆಗಳು ಇಂತಹ ಪ್ರಚಾರಕ್ಕೆ ಕಾರಣವಾಗಿರುವಲ್ಲಿ ಆಶ್ಚರ್ಯವೇನಿಲ್ಲ.

ಅಪೂರ್ವ ಸರಕಾರ!


ಈಗ ಸಂಸತ್ತಿನ ಬಜೆಟ್ ಅಧಿವೇಶನ ಇದರ ಮತ್ತು ಪಂಜಾಬ್, ಉತ್ತರಾಖಂಡ, ಮಣಿಪುರ ಮತ್ತು ಗೋವಾದಲ್ಲಿನ ಫಲಿತಾಂಶಗಳಿಗೆ ಕಾಣಬೇಕಾಗಿದೆ. ದೇಶ ಇದಕ್ಕೆ ಕಾಯುತ್ತಿರುವಾಗ, ನಾವೂ ಅದರೊಂದಿಗೆ ಕಾಯೋಣ. ಆದರೆ, ಇತ್ತೀಚಿನ ಅವಧಿಯಲ್ಲಿ ಮನಮೋಹನ ಸಿಂಗ್ ನೇತೃತ್ವದ ಯುಪಿಎ-2 ರಂತಹ ಯಾವುದೇ ದಿಕ್ಕು-ದೆಸೆ ಇಲ್ಲದಂತೆ ಕಾಣುವ, ಜತೆಗೆ ಹತ್ತು ಹಲವು ಹಗರಣಗಳು, ಭ್ರಷ್ಟಾಚಾರಗಳು ಮತ್ತು ವಿವಾದಗಳಿಗೆ ಅದರಂತೆ ತುತ್ತಾಗಿರುವ ಇನ್ನೊಂದು ಸರಕಾರವನ್ನು ನಾವು ಕಂಡಿಲ್ಲ.

ಸುಪ್ರಿಂ ಕೋರ್ಟ್ 2ಜಿ ಪರವಾನಿಗೆಗಳನ್ನು ರದ್ದು ಮಾಡಿದೆ, ಈ ಮೂಲಕ ಇದರಲ್ಲಿ ಹಗರಣವೇ ಇರಲಿಲ್ಲ, 'ಖಜಾನೆಗೆ ಆಗಿರುವ ನಷ್ಟ ಸೊನ್ನೆ' ಮತ್ತು 'ಅಕ್ರಮ' ಏನೂ ನಡೆದಿಲ್ಲ ಎಂಬ ದೂರಸಂಪರ್ಕ ಮಂತ್ರಿಗಳ ದಾವೆಗಳು ನಿರಾಕರಣೆಯಾಗಿದೆ. ಹೊಸ ಕಿತ್ತಾಟಗಳು ಎದ್ದು ಬಂದಿವೆ, ಸೇನಾ ಮುಖ್ಯಸ್ಥರ ವಯಸ್ಸಿನ ವಿವಾದ ಎದ್ದಿದೆ, ಇಸ್ರೊ ವಿಜ್ಞಾನಿಗಳು ಅಂತರಿಕ್ಷ ಹಗರಣ ಕುರಿತಂತೆ ಸರಕಾರದ ದಾವೆಗಳನ್ನು ನಿರಾಕರಿಸುತ್ತಿದ್ದಾರೆ ಮತ್ತು ಆಂಧ್ರ ಪ್ರದೇಶದಲ್ಲಿ ಐಎಎಸ್ ಅಧಿಕಾರಿಗಳು ಸಿಬಿಐ ಆಳುವ ರಾಜಕಾರಣಿ ಗಳನ್ನು ಮಾತ್ರ ಬಿಟ್ಟು ತಮ್ಮ ವಿರುದ್ಧ ಮಾತ್ರವೇ ಭ್ರಷ್ಟಾಚಾರಗಳ ಆಪಾದನೆಗಳ ಮೇಲೆ ಕ್ರಮ ಕೈಗೊಳ್ಳುತ್ತಿದೆಯೆಂದು ಪ್ರತಿಭಟಿಸಿದ್ದಾರೆ.

ಈ ನಡುವೆ, ಜನತೆಯ ಮೇಲೆ ಬೆಲೆಯೇರಿಕೆಯ ಹೊರೆಗಳು ಹೆಚ್ಚುತ್ತಲೇ ಇವೆ, ರೈತರ ಹತಾಶ ಆತ್ಮಹತ್ಯೆಗಳು ನಿಲ್ಲದೆ ಸಾಗಿವೆ. ಸ್ವತಃ ಪ್ರಧಾನ ಮಂತ್ರಿಗಳೇ ನಮ್ಮ ಮಕ್ಕಳ ಪೋಷಣಾಂಶ ಪರಿಸ್ಥಿತಿ ಒಂದು 'ರಾಷ್ಟ್ರೀಯ ಅವಮಾನ' ಎಂದು ಒಪ್ಪಿಕೊಂಡಿದ್ದಾರೆ. ನಮ್ಮ ದೇಶದಲ್ಲಿ ವೈಜ್ಞಾನಿಕ ಸಂಶೋಧನೆಯನ್ನು ಅಭಿವೃದ್ಧಿ ಪಡಿಸುವಲ್ಲಿಯೂ ಪರಿಸ್ಥಿತಿ ಶೋಚನೀಯವಾಗಿದೆ ಎಂದೂ ಅವರು ಮರುಗಿದ್ದಾರೆ. ಇದು ನಮ್ಮ ಭವಿಷ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆಯೆಂಬುದು ಖಂಡಿತ. ಯುಪಿಎ ಮಿತ್ರಪಕ್ಷಗಳೊಂದಿಗೆ ಸಮಸ್ಯೆಗಳ ಬೆಟ್ಟವೇ ನಿರ್ಮಾಣವಾಗುತ್ತಿದೆ. ಜತೆಗೆ ಜನಸಾಮಾನ್ಯರ ಪರವಾಗಿ ಮೊಸಳೆ ಕಣ್ಣೀರು ಮತ್ತು ಮಧ್ಯೆ-ಮಧ್ಯೆ ತೃಣಮೂಲ ಕಾಂಗ್ರೆಸಿನ ಅವಾಂತರಗಳು.

ಆಕ್ರಾಮಕ ಅಜೆಂಡಾ

ಈ ಬೆಳವಣಿಗೆಗಳನ್ನು ಭಂಡತನದಿಂದ ಬದಿಗೊತ್ತುವಲ್ಲಿ ಸರಕಾರ ತೋರುತ್ತಿರುವ ವಿಶ್ವಾಸವನ್ನು ಕಂಡರೆ ಈಗ ನಡೆಯುತ್ತಿರುವ ಚುನಾವಣೆಗಳ ಫಲಿತಾಂಶ ಕೆಲವು ರಾಜ್ಯಗಳಲ್ಲಿ ತಮ್ಮ ಪರವಾಗಿರುತ್ತದೆಂದು ಅದು ಸಮಾಧಾನ ಪಡುತ್ತಿರುವಂತೆ ಕಾಣುತ್ತದೆ. ಉತ್ತರಾಖಂಡ ಮತ್ತು ಪಂಜಾಬನ್ನು ಪ್ರತಿಪಕ್ಷಗಳಿಂದ ಕಿತ್ತುಕೊಳ್ಳುತ್ತೇವೆ, ಗೋವಾ ಮತ್ತು ಮಣಿಪುರದಲ್ಲಿ ಸಂಖ್ಯೆಗಳ ಕಸರತ್ತು ನಡೆಸಬಹುದು ಮತ್ತು ಉತ್ತರ ಪ್ರದೇಶದಲ್ಲಿ ಅಧಿಕಾರ ಯಾರ ಕೈಗೆ ಹೋಗಬೇಕೆಂಬುದನ್ನು ತಾವೇ ನಿರ್ಧರಿಸುವಂತಹ ಸನ್ನಿವೇಶ ನಿರ್ಮಾಣವಾಗಬಹುದೆಂಬ ನಿರೀಕ್ಷೆಯನ್ನು ಅದು ಇಟ್ಟುಕೊಂಡಿದೆ. ಪ್ರಮುಖ ಪ್ರತಿಪಕ್ಷ ಬಿಜೆಪಿಯಲ್ಲಿ ಕಾಣಬರುತ್ತಿರುವ ಕಸಿವಿಸಿ ಮತ್ತು ಈ ನಿರೀಕ್ಷೆಗಳ ಈಡೇರಿಕೆ ತನಗೆ ಬಿರುಗಾಳಿಯನ್ನು ಎದುರಿಸಿ ನಿಲ್ಲಲು ಅವಕಾಶ ಕೊಡಲಿದೆ ಎಂಬುದು ಯುಪಿಎ ಭಾವನೆ.



ಕೃಪೆ : ದಿ ಹಿಂದೂ

ಇದರ ಆಧಾರದಲ್ಲಿ ಯುಪಿಎ ಪ್ರಸಕ್ತ ಬಜೆಟಿನಲ್ಲಿ ಒಂದು ಹೆಚ್ಚು ಆಕ್ರಾಮಕವಾದ ಉದಾರೀಕರಣದ ದಾಳಿ ಆರಂಭಿಸಲು ಸಿದ್ಧಗೊಳ್ಳುತ್ತಿದೆ. ಬೇರೆ ರೀತಿಯಲ್ಲೂ, ಏರುತ್ತಿರುವ ಹಣಕಾಸು ಕೊರತೆಯನ್ನು ತಡೆಯುವ ಹೆಸರಿನಲ್ಲಿ ಇಂತಹ ಒಂದು ಅಜೆಂಡಾ ಇಟ್ಟುಕೊಳ್ಳಲಾಗಿದೆ.

ಮೇಲೆ ಹೇಳಿರುವಂತೆ ಈ ಸರಕಾರ ಎಲ್ಲ ವಿಧಗಳಲ್ಲೂ ಒಂದು ದಿಕ್ಕುಗೇಡಿಯಾಗಿ ಗಾಳಿ ಬಂದತ್ತ ತೇಲಿ ಹೋಗುತ್ತಿರುವಂತೆ ಕಂಡರೂ, ನವ-ಉದಾರವಾದಿ ಸುಧಾರಣೆಗಳನ್ನು ಅವಿಶ್ರಾಂತವಾಗಿ ಅನುಸರಿಸುವಲ್ಲಿ ಮಾತ್ರ ಅದರದ್ದು ಏಕಚಿತ್ತದ ಸಮರ್ಪಣಾ ಭಾವ!

ಯುಪಿಎ-2 ಸರಕಾರ, ಎಡಪಕ್ಷಗಳು ಕಳೆದ ಏಳು ವರ್ಷಗಳಿಂದ ಕಾನೂನಾಗದಂತೆ ತಡೆದಿರುವ ಪ್ರಮುಖ ಹಣಕಾಸು ಸುಧಾರಣೆಗಳನ್ನು ಈ ಬಜೆಟಿನಲ್ಲಿ ತರಲು ಸರ್ವಸನ್ನದ್ಧವಾಗಿದೆ. ಈ ರೀತಿ ಹಣಕಾಸು ವಲಯವನ್ನು ತೆರೆಯದಿದ್ದುದೇ ಜಾಗತಿಕ ಕುಸಿತದ ವಿನಾಶಕಾರಿ ಪರಿಣಾಮಗಳನ್ನು ಪ್ರತಿರೋಧಿಸುವಲ್ಲಿ ಭಾರತಕ್ಕೆ ನೆರವಾದದ್ದು ಎಂಬ ನಮ್ಮ ಸ್ವಂತ ಅನುಭವದಿಂದಲೂ ಪಾಠ ಕಲಿಯಲು ಅದು ನಿರಾಕರಿಸುತ್ತಿದೆ.

ಈ ಹಿಂದೆ ಈ ಅಂಕಣದಲ್ಲಿ ಹೇಳಿದಂತೆ ಶ್ರೀಮಂತ ದೇಶಗಳ ಬಳಿ ಈಗ ಮುಂದುವರೆಯುತ್ತಿರುವ ಆರ್ಥಿಕ ಹಿಂಜರಿತದ ವಿಷವರ್ತುಲವನ್ನು ಬೇಧಿಸಲು ಯಾವ ಹಣಕಾಸು ಅಸ್ತ್ರವೂ ಉಳಿದಿಲ್ಲ ಎಂದು ಸ್ವತಃ ವಿಶ್ವಬ್ಯಾಂಕ್ ಎಚ್ಚರಿಸಿರುವಾಗ, ಇನ್ನಷ್ಟು ಹಣಕಾಸು ಉದಾರೀಕರಣದಿಂದ ವಿದೇಶಿ ನಿಧಿಗಳು ಬಂದು ನಮ್ಮ ಬೆಳವಣಿಗೆಗೆ ಉತ್ತೇಜನೆ ಸಿಗುತ್ತದೆ ಎಂಬ ಭಾರತದ ನಿರೀಕ್ಷೆಯೂ ಬಹಳ ದೂರದ ಮಾತಾಗಿರುವಂತೆ ಕಾಣುತ್ತಿದೆ.

ಏಕಮಾತ್ರ ಉತ್ತರ

ಬಂಡವಾಳ ಹೆಚ್ಚು ಮುಕ್ತವಾಗಿ ಮತ್ತು ಕಡಿಮೆ ಖರ್ಚಿನಲ್ಲಿ ಲಭ್ಯವಾಗುವಂತೆ ಮಾಡುವುದರಿಂದಲೇ ಆರ್ಥಿಕ ಬೆಳವಣಿಗೆಗೆ ಉತ್ತೇಜನೆ ಸಿಗಲಾರದು. ಇದರಿಂದ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಮತ್ತು ಭಾರತೀಯ ದೊಡ್ಡ ಬಂಡವಾಳಗಾರರ ಲಾಭಗಳೇನೋ ಹಿಗ್ಗಬಹುದು. ಆದರೆ ಬಹಳ ದಿನ ಉಳಿಯಬಹುದಾದ ಆರ್ಥಿಕ ಬೆಳವಣಿಗೆ ಜನತೆಯ ಖರೀದಿ ಸಾಮರ್ಥ್ಯ ಹೆಚ್ಚದೆ ಸಾಧ್ಯವಾಗುವುದಿಲ್ಲ.

ಶ್ರೀಮಂತರಿಗೆ ಅಪಾರ ಮೊತ್ತಗಳ ತೆರಿಗೆ ರಿಯಾಯ್ತಿಗಳನ್ನು (ಕಳೆದ ಮೂರು ವರ್ಷಗಳಲ್ಲಿ ಸುಮಾರು 15 ಲಕ್ಷ ಕೋಟಿ ರೂ.ಗಳಷ್ಟು) ಕೊಡುವ ಬದಲು ಈ ಮೊತ್ತಗಳನ್ನು ವಸೂಲಿ ಮಾಡಿ ಅವನ್ನು ಬಹಳ ಆವಶ್ಯಕವಾದ ಸಾಮಾಜಿಕ ಮತ್ತು ಆರ್ಥಿಕ ಮೂಲರಚನೆಗಳನ್ನು ಕಟ್ಟಲು ಸಾರ್ವಜನಿಕ ಹೂಡಿಕೆಗಾಗಿ ಬಳಸಬೇಕು. ಇದರಿಂದ ಉದ್ಯೋಗಾವಕಾಶಗಳೂ ನಿರ್ಮಾಣವಾಗುತ್ತವೆ ಎಂದು ನಾವು ಮತ್ತೆ-

ಪುಟ 15ಕ್ಕೆ ....

ದೇಶದ ಕಾರ್ಮಿಕ ವರ್ಗವು ಜಾತಿ, ಮತ, ಬಣ್ಣ, ಭಾಷೆ, ಪ್ರದೇಶ, ಪಕ್ಷ ರಾಜಕಾರಣದ ಒಲವು-ನಿಲುವು, ಸಂಘಟನಾತ್ಮಕ ಭಿನ್ನತೆ ಇವೆಲ್ಲವುಗಳನ್ನು ಮೀರಿ ಕೇವಲ ಕಾರ್ಮಿಕ ವರ್ಗವಾಗಿ ಕಾರ್ಯಾಚರಣೆಗೆ ಇಳಿಯುವ ಐತಿಹಾಸಿಕ ಕ್ಷಣಗಳು ಹತ್ತಿರವಾಗುತ್ತಿವೆ. ಫೆಬ್ರವರಿ 28,2012ರ ಅಖಿಲ ಭಾರತ ಮುಷ್ಕರ ಕೇವಲ ಕಾರ್ಖಾನೆಗಳ ಬಂದ್ ಆಗಿ ಉಳಿಯಲಾರದು. ಅದು ತನ್ನ ಆಳವಾದ ರಾಜಕೀಯ ಪ್ರಭಾವದ ಮುದ್ರೆಯನ್ನೂ ಒತ್ತಲಿದೆ ಎಂಬುದು ಖಚಿತವಾಗುತ್ತಿದೆ.

ಜಾತಿ-ಮತ-ಭಾಷೆ-ಪ್ರದೇಶ-ರಾಜಕೀಯ ಒಲವುಗಳ ಭಿನ್ನತೆ ಮೀರಿ ಕಾರ್ಮಿಕ ವರ್ಗದ ಐಕ್ಯ ಕಾರ್ಯಾಚರಣೆಯತ್ತ

ಎಸ್. ಪ್ರಸನ್ನ ಕುಮಾರ್

'ಮುಷ್ಕರ' ದುಡಿಯುವ ಜನರ ಕೈಯಲ್ಲಿರುವ ಒಂದು ಮಹತ್ವದ ಆಯುಧ. ಮುಷ್ಕರವು ಕಾರ್ಮಿಕರು ಕೆಲಸವನ್ನು ಸಾಮೂಹಿಕವಾಗಿ ಸ್ಥಗಿತಗೊಳಿಸುವ ಮೂಲಕ ತಮ್ಮ ಬದುಕಿನ ಸಮಸ್ಯೆಗಳ ಪರಿಹಾರಕ್ಕಾಗಿ ಅತ್ಯಂತ ಜವಾಬ್ದಾರಿಯಿಂದ ನಡೆಸುವ ಸಾಮೂಹಿಕ ಹಿತಕ್ಕಾಗಿ ಮಾಡುವ ಚಳುವಳಿಯ ಭಾಗವಾಗಿದೆ. ಒಂದು ಕಾರ್ಖಾನೆ, ಒಂದು ಕೈಗಾರಿಕೆ, ಒಂದು ರಂಗ ಮತ್ತು ಒಂದು ಪ್ರದೇಶದ ಕಾರ್ಮಿಕರು ಅವರ ತುರ್ತು ಬೇಡಿಕೆಗಳಿಗಾಗಿ ಮಾಲೀಕರನ್ನು ಅಥವಾ ಸರಕಾರಗಳನ್ನು ಒತ್ತಾಯಿಸಲು ಮುಷ್ಕರ ಮಾಡುವುದು ಅಲ್ಲಲ್ಲಿ ನೋಡುತ್ತೇವೆ. ಆದರೇ ಇಡೀ ದೇಶದ ಕಾರ್ಮಿಕರು ಒಂದಾಗಿ ಒಂದೇ ದಿನ ಮುಷ್ಕರ ಮಾಡುವುದು ಸಾಮಾನ್ಯವಾದ ವಿಷಯವಲ್ಲ. ಆದ್ದರಿಂದ 28 ಫೆಬ್ರವರಿ 2012 ರಂದು ದೇಶದ ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳು ಬಾರತದ ಇತಿಹಾಸದಲ್ಲಿ ಮೊಟ್ಟಮೊದಲಬಾರಿಗೆ ಐಕ್ಯ ಮುಷ್ಕರ ನಡೆಸಲು ಕರೆ ನೀಡಿವೆ. ರಾಜಕೀಯವಾಗಿ, ಸೈದ್ಧಾಂತಿಕವಾಗಿ ವಿಭಿನ್ನವಾದ ದೃಷ್ಟಿಕೋನಗಳಿರುವ ಕೇಂದ್ರ ಕಾರ್ಮಿಕ ಸಂಘಟನೆಗಳು ಅವುಗಳ ವಿಭಿನ್ನವಾದ ಬಣ್ಣಗಳ ಬಾವುಟಗಳನ್ನು ಹಿಡಿದಿದ್ದರೂ ಒಂದೇ ವೇದಿಕೆಗೆ ಬರಲು ಸಾದ್ಯವಾಗಿರುವುದು ಹೇಗೆ ? ಕಾರ್ಮಿಕರು, ದುಡಿಯುವ ಜನ ಯಾವುದೇ ಜಾತಿ, ಧರ್ಮ, ಲಿಂಗ, ಭಾಷೆ, ಪ್ರದೇಶಗಳಿಗೆ ಸೇರಿದ್ದರೂ, ರಾಜಕೀಯ, ಒಲವುಗಳಿದ್ದರೂ ಕಾರ್ಮಿಕರ ಸಮಸ್ಯೆಗಳು, ಬದುಕಿನ ಕಷ್ಟಗಳು ಒಂದೇ ಆಗಿರುತ್ತವೆ. ಆದ್ದರಿಂದ ಇಂತಹ ಐಕ್ಯತೆ ಕಾರ್ಮಿಕ ವರ್ಗಕ್ಕೆ ಮಾತ್ರ ಸಾಧ್ಯ.

ಇಂತಹ ಐತಿಹಾಸಿಕ ಐಕ್ಯತೆ ಮುಖ್ಯ ಕಾರಣಗಳು ಬೆಲೆ ಏರಿಕೆ, ಕನಿಷ್ಟ ಕೂಲಿ ನಿಗದಿ ಮಾಡುವಲ್ಲಿ ಸರಕಾರಗಳ ತೀವ್ರ ನಿರ್ಲಕ್ಷ ಅಲ್ಲದೇ ಗುತ್ತಿಗೆ ಕಾರ್ಮಿಕ ಪದ್ಧತಿಯಲ್ಲಿ ಅತ್ಯಂತ ಕಡಿಮೆ ಕೂಲಿಯಲ್ಲಿ ದುಡಿಸಿಕೊಳ್ಳುತ್ತಿರುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿರುವುದು, ಮಾಲೀಕರ ಲಾಭಾಂಶ ಮಾತ್ರ ಹೆಚ್ಚಾಗುತ್ತಾ ಇದೆ ಆದರೇ ಕಾರ್ಮಿಕರಿಗೆ ಕೊಡಬೇಕಾದ ಬೋನಸ್ ಅತಿ ನಿಕೃಷ್ಟವಾಗಿರುವುದು ಮತ್ತು ರೂ.3500 ಗಳನ್ನು ಮಾತ್ರ ಬೋನಸ್ಸು ಪಾವತಿಗಾಗಿ ಲೆಕ್ಕಕ್ಕೆ ಪರಿಗಣಿಸುವ ಅವೈಜ್ಞಾನಿಕ ವಿಧಾನಗಳು ಕಾರ್ಮಿಕರನ್ನು ಅವರ ಹಕ್ಕುಗಳಿಂದ ವಂಚಿತರಾಗಿ ಮಾಡಲಾಗುತ್ತಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳೇ ವಿವಿಧ ಯೋಜನೆಗಳ ಹೆಸರಲ್ಲಿ ಲಕ್ಷಾಂತರ ಅಂಗನವಾಡಿ, ಬಿಸಿಊಟ, ಆಶಾ ಮುಂತಾದ ಹೆಸರಲ್ಲಿ (ಅ)ಗೌರವಧನ ಎಂಬ ಕಳಪೆ ಸಂಬಳವನ್ನು ಪಾವತಿಸಿ ಶೋಷಣೆ ಮಾಡುತ್ತಿರುವುದು ಮುಂತಾಗಿ ಎಲ್ಲಾ ಕಾರ್ಮಿಕರನ್ನು ತೀವ್ರವಾಗಿ ಭಾದಿಸುತ್ತಿವೆ. ಕಾಂಟ್ರಾಕ್ಟ್ ಕಾರ್ಮಿಕ ಕಾನೂನು ಪರಿಣಾಮಕಾರಿಯಾಗಿಲ್ಲದ್ದರೂ, ಆ ಕಾನೂನು ವ್ಯಾಪ್ತಿಯಿಂದಲೂ ತಪ್ಪಿಸಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ವ್ಯಾಪಾರ ವ್ಯವಹಾರಗಳಿಗೆ ಉಪಯೋಗಿಸುವ ಕಾಂಟ್ರಾಕ್ಟ್ (ಒಪ್ಪಂದಗಳ) ಕಾನೂನು ದುರುಪಯೋಗ ಮಾಡಿ ಕಾರ್ಮಿಕ ಮಾಲೀಕ ಸಂಬಂಧವನ್ನೇ ಕಾನೂನುಬದ್ಧವಾಗಿ ಇಲ್ಲದಂತಹ ಅನ್ಯಾಯಗಳನ್ನು ಸರಕಾರವೇ ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ ಮತ್ತು ಇತರ ಎಲ್ಲಾ ಇಲಾಖೆಗಳಲ್ಲಿ ಅಳವಡಿಸಿ ಮೋಸ ಪೂರಿತವಾದ ನಡುವಳಿಕೆಯಲ್ಲಿ ತೊಡಗಿದೆ. ಮಾದರಿ ಮಾಲಿಕನಂತೆ ಸರಕಾರಗಳು ನಡೆದುಕೊಳ್ಳಬೇಕೆಂದು ಹಲವು ಬಾರಿ ಸುಪ್ರೀಂ ಕೋರ್ಟ್ ತನ್ನ ತೀರ್ಪುಗಳಲ್ಲಿ ಆದೇಶಗಳನ್ನು ಹೊರಡಿಸಿದ್ದರೂ ಸರಕಾರಗಳು ಉದಾರೀಕರಣ ನೀತಿಗಳ ಜಾರಿಯ ಭರಾಟೆಯಲ್ಲಿ ಅದಕ್ಕೆ ಕವಡೆ ಕಾಸಿನ ಕಿಮ್ಮತ್ತನ್ನು ಕೊಡುತ್ತಿಲ್ಲ. ಕಾರ್ಮಿಕ ಕಾನೂನುಗಳ ಜಾರಿಯನ್ನು ಮಾಡಲು ಕಾಳಜಿಯನ್ನೇ ವಹಿಸಲಾಗುತ್ತಿಲ್ಲ. ಕಾರ್ಮಿಕ ಇಲಾಖೆಯ ಅನುಷ್ಠಾನದ ಅಧಿಕಾರಿ ಮತ್ತು ಸಿಬ್ಬಂದಿ ಇಲ್ಲವೇ ಇಲ್ಲ ಅನ್ನುವಷ್ಟು ನಾಮಕಾವಾಸ್ತೆ ಸಂಖ್ಯೆಯಲ್ಲಿ ನೇಮಕಾತಿ ಮಾಡಲಾಗಿದೆ. ಭವಿಷ್ಯನಿಧಿ ಯೋಜನೆಗೆ ಇನ್ನು ಮುಂದೆ ಕಾರ್ಮಿಕರ ಭವಿಷ್ಯಕ್ಕೆ ಪ್ರಯೋಜನವೇ ಅಗದಂತಹ ಪರಿಸ್ಥಿತಿ ಉಂಟಾಗಿದೆ. ಭವಿಷ್ಯ ನಿಧಿ ಯೋಜನೆ ಅಡಿಯಲ್ಲಿ ನೀಡುವ ಪಿಂಚಣಿಯು ತಿಂಗಳಿಗೆ ರೂ. 10 ರಿಂದ 500 ಒಳಗೆ ಮಾತ್ರ ಹೆಚ್ಚಿನ ಕಾರ್ಮಿಕರಿಗೆ ದೊರೆಯುತ್ತಿದೆ. 30 ರಿಂದ 40 ವರ್ಷಗಳ ಸೇವೆ ಮತ್ತು ಉಳಿತಾಯದ ಹಣದ ಪ್ರಯೋಜನ ಕಾರ್ಮಿಕರಿಗೆ ಆಗುತ್ತಿಲ್ಲ. ವರ್ಷದಿಂದ ವರ್ಷಕ್ಕೆ ಭವಿಷ್ಯನಿಧಿ ಉಳಿತಾಯ ಹಣಕ್ಕೆ ನೀಡುವ ಬಡ್ಡಿ ದರವು ಕಡಿತ ಮಾಡಲಾಗುತ್ತಿದೆ. ಭವಿಷ್ಯನಿಧಿ ಯೋಜನೆಯಲ್ಲಿ ಇದುವರಗೆ ಕಾರ್ಮಿಕರಿಗೆ ಲಭ್ಯವಿದ್ದ ಅಲ್ಪ ಸ್ವಲ್ಪ ಅನುಕೂಲತೆಗಳನ್ನು ಕಿತ್ತುಹಾಕಲಾಗಿದೆ. ಅಲ್ಲದೇ ಈಗಿನ ತುಟ್ಟಿ ಕಾಲದಲ್ಲಿಯೂ ಭವಿಷ್ಯನಿಧಿ ಯೋಜನೆಗೆ ಮಾಲೀಕರ ಕೊಡುಗೆ ರೂ.6500 ಸಂಬಳದ ವರಗೆ ಮಾತ್ರ ಕಾನೂನುಬದ್ಧವಾಗಿದೆ. ರೂ. 6500 ಮೇಲಿನ ಸಂಬಳವನ್ನು ಕಾರ್ಮಿಕ ಪಡೆಯುತ್ತಿದ್ದರೂ ಆ ಮೇಲಿನ ಸಂಬಳದ ಮೊತ್ತಕ್ಕೆ ಸಮಾನ ಕೊಡುಗೆಯನ್ನು ಕೊಡುವುದು ಮಾಲೀಕನ ಐಚ್ಚಿಕ ವಿಚಾರವಾಗಿ ಮಾಲೀಕರಿಗೆ ಅನುಕೂಲ ಮಾಡಿಕೊಡಲಾಗಿದೆ. ಹಲವು ದಶಕಗಳ ಕಾಲ ಸೇವೆ ಸಲ್ಲಿಸಿದ್ದರೂ ಕೊನೆ ಕಾರ್ಮಿಕರಿಗೆ ಸಿಗಬೇಕಾದ ಗ್ರಾಚ್ಯುಟಿ ಮೊತ್ತವು ಪ್ರತಿ ವರ್ಷದ ಸೇವೆಗೆ ಕೇವಲ 15 ದಿನಗಳು ಮಾತ್ರ ಲೆಕ್ಕ ಹಾಕಲಾಗುತ್ತದೆ. ಎಲ್ಲಕ್ಕೂ ಮಿಗಿಲಾಗಿ ಕಾರ್ಮಿಕರು ಸಂಘಟಿತರಾಗಲು ಅಡ್ಡಿ ಆತಂಕಗಳನ್ನು ಉಂಟು ಮಾಡುವ ಕಾನೂನು ಕಿರಿಕಿರಿಗಳನ್ನು ಸರಕಾರಗಳು, ಮಾಲೀಕರು ಹಾಗೂ ಮಾಲೀಕರೊಂದಿಗೆ ಶಾಮೀಲಾಗಿ ಅಧಿಕಾರಶಾಹಿ ಸಂಘಟನಾ ಹಕ್ಕನ್ನೇ ಮೊಟಕುಗೊಳಿಸಲಾಗುತ್ತಿದೆ. ಹಲವು ಮಾಲೀಕರು ಕಾರ್ಮಿಕ ಪ್ರತಿನಿಧಿಗಳೊಂದಿಗೆ ಮಾತುಕತೆಗಳನ್ನು ಮಾಡಲು ಕೂಡ ನಿರಾಕರಿಸಿ ಸಾಮೂಹಿಕ ಚೌಕಾಸಿ ಹಕ್ಕನ್ನು ನಿರಾಕರಿಸಲಾಗುತ್ತಿದೆ. ಆದ್ದರಿಂದಲೇ ಐಎಲ್‌ಒ ವರದಿಯಲ್ಲಿ ಗುರುತಿಸಿದಂತೆ ಭಾರತ ದೇಶದಲ್ಲಿ ಉದ್ಯೋಗಸ್ಥರಾಗಿರುವ ಬಡವರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಮೇಲಿನ ಎಲ್ಲಾ ಸಮಸ್ಯೆಗಳು ಯಾವುದೋ ಒಂದು ಕಾರ್ಮಿಕ ಸಂಘಟನೆಗಾಗಲಿ ಅಥವಾ ಒಂದು ವಿಭಾಗದ ಕಾರ್ಮಿಕರಿಗಾಗಲಿ ಅಲ್ಲದೇ ಇಡೀ ದುಡಿಯುವ ಜನತೆಯನ್ನು ಕಾಡುತ್ತಿದೆ. ಆದ್ದರಿಂದ ದೇಶ ಮಾನ್ಯತೆ ಪಡೆದ ಎಲ್ಲಾ 11 ಕೇಂದ್ರ ಕಾರ್ಮಿಕ ಸಂಘಟನೆಗಳಾದ ಸಿಐಟಿಯು, ಬಿಎಂಎಸ್, ಐಎನ್‌ಟಿಯುಸಿ, ಎಐಟಿಯುಸಿ, ಹೆಚ್‌ಎಂಎಸ್, ಎಐಯುಟಿಯುಸಿ, ಎಐಸಿಸಿಟಿಯು, ಯುಟಿಯುಸಿ, ಟಿಯುಸಿಸಿ, ಎಲ್‌ಪಿಎಫ್ ಮತ್ತು ಸೇವಾ ಸಂಘಟನೆಗಳು ದಿನಾಂಕ 28 ಫೆಬ್ರವರಿ 2012 ರಂದು ಮುಷ್ಕರಕ್ಕೆ ಕರೆ ನೀಡಿವೆ. ಈಗ ಕರೆ ನೀಡಲಾಗಿರುವ ಅಖಿಲ ಬಾರತ ಮುಷ್ಕರವು 14 ನೇ ದೇಶ ವ್ಯಾಪಿ ಮುಷ್ಕರವಾಗಿದೆ.



ದೇಶವ್ಯಾಪಿ ಐತಿಹಾಸಿಕ ಮುಷ್ಕರದಲ್ಲಿ ಭಾಗವಹಿಸಲು ಭಾರತದಾದ್ಯಂತ ವ್ಯಾಪಕ ತಯಾರಿಗಳನ್ನು ನಡೆಸಲಾಗುತ್ತಿದೆ. ಇತ್ತಿಚಿನ ದಶಕಗಳಲ್ಲಿ ಮೊದಲಬಾರಿಗೆ ತಮ್ಮ ಆರ್ಥಿಕ ಬೇಡಿಕೆಗಳಿಗಲ್ಲದೇ ಎಲ್ಲಾ ಬಂದರುಗಳ ನೌಕರರ ಫೆಡರೇಷನ್‌ಗಳು ಸಮಾವೇಶಗೊಂಡು 28 ಫೆಬ್ರವರಿ 2012 ರಂದು ಸಂಪೂರ್ಣ ಮುಷ್ಕರವನ್ನು ವೇತನ ಕಡಿತಕ್ಕೂ ಸಿದ್ಧರಾಗಿ ಮಾಡಲು ಸರ್ವಾನುಮತದ ನಿರ್ಣಯವನ್ನು ಕೈಗೊಂಡಿದ್ದಾರೆ. ದೇಶದ 247 ಕೇಂದ್ರ ಸಾರ್ವಜನಿಕ ಕೈಗಾರಿಕೆಗಳ ಕಾರ್ಮಿಕರು ಜನವರಿ 13, 2012 ರಂದು ಬೆಂಗಳೂರಿನ ಹೆಚ್.ಎ.ಎಲ್. ಸಂಕೀರ್ಣದಲ್ಲಿ ಜೆಎಫ್ ಮುತುವರ್ಜಿಯಲ್ಲಿ ರಾಷ್ಟ್ರೀಯ ಸಮಾವೇಶ ತ್ರಿಪುರದಿಂದ ಗುಜರಾತು ಹಾಗೂ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಇರುವ ವಿಶಾಲ ಭಾಗವಹಿಸುವಿಕೆಯೊಂದಿಗೆ ಐತಿಹಾಸಿಕ ಐಕ್ಯತೆಯ ಪ್ರದರ್ಶನವನ್ನು ಮಾಡಿದೆ. ಈ ಸಮಾವೇಶದಲ್ಲಿ ಬಹುತೇಕ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳ ಪ್ರಮುಖ ಮುಖಂಡರು ಭಾಗವಹಿಸಿ ಒಕ್ಕೊರಲಿನ ಭಾಷಣಗಳನ್ನು ಮಾಡಿದ್ದೂ

ವಿಶೇಷವಾಗಿತ್ತು. ಈ ಬಾರಿ ಎಲ್ಲಾ ಕೇಂದ್ರೋದ್ಯಮಗಳಲ್ಲಿ ಸಂಪೂರ್ಣ ಮುಷ್ಕರ ಯಶಸ್ವಿಗೊಳಿಸಲು ನಿರ್ಣಯಿಸಿದ್ದಾರೆ. ಅಲ್ಲದೇ ಬ್ಯಾಂಕು, ವಿಮಾ, ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಿ ನೌಕರರು, ಬಿಎಸ್‌ಎನ್‌ಎಲ್ ನೌಕರರು, ರಕ್ಷಣಾ ವಲಯದ ನೌಕರರು ಮುಷ್ಕರದಲ್ಲಿ ಭಾಗವಹಿಸುವುದಾಗಿ ಘೋಷಣೆ ಮಾಡಿದ್ದಾರೆ. ಇದರೊಂದಿಗೆ ಎಲ್ಲಾ ಅಸಂಘಟಿತ ವಲಯಗಳ ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಳ್ಳಲು ಸಜ್ಜಾಗಿದ್ದಾರೆ.

ಕಾರ್ಮಿಕ ವರ್ಗದ ಇಂತಹ ಐಕ್ಯ ಹೋರಾಟದ ಕರೆಯು ಕಾರ್ಮಿಕ ವರ್ಗದ ಪಕ್ಷದ ದೃಷ್ಟಿಯಲ್ಲಿ ಒಂದು ಮಹತ್ತರ ಬೆಳವಣಿಗೆಯಗಿದೆ. ಸಂಯುಕ್ತ ರಂಗದ ತಂತ್ರದ ಪ್ರಮುಖ ಅಂಶವನ್ನು ಅರ್ಥ ಮಾಡಿಕೊಳ್ಳುವುದು ಅಗತ್ಯ. ಜನತಾ ಪ್ರಜಾಪ್ರಭುತ್ವ ರಂಗ ಕಟ್ಟುವ ಮೂಲಕ ಕ್ರಾಂತಿಕಾರಿ ಸಾಮಾಜಿಕ ಬದಲಾವಣೆ ಮಾಡುವ ಕಾರ್ಯಕ್ರಮ ನಮ್ಮದಾಗಿದೆ. ಜನತಾ ಪ್ರಜಾಪ್ರಭುತ್ವ ರಂಗವು ಕಾರ್ಮಿಕ ವರ್ಗದ ಅಧಿನಾಯಕತ್ವದಲ್ಲಿ ಸಾಮ್ರಾಜ್ಯಶಾಹಿ, ಏಕಸ್ವಾಮ್ಯ ಬಂಡವಾಳಗಾರರ ಹಾಗೂ ಭೂಮಾಲೀಕ ಶಕ್ತಿಗಳ ಶೋಷಣೆಗೆ ಗುರಿಯಾಗುತ್ತಿರುವ ಇತರ ಎಲ್ಲಾ ವರ್ಗದ ಜನಸಮೂಹಗಳನ್ನು ಒಳಗೊಂಡು ವರ್ಗಗಳ ಬಲಿಷ್ಠ ರಂಗವಾಗಿ ಬೆಳೆದು ಬರಬೇಕು ಎಂಬ ಸ್ಪಷ್ಟವಾದ ಕಣ್ಣೋಟ ನಮ್ಮದಾಗಿದೆ. ಆದ್ದರಿಂದ ಕಾರ್ಮಿಕ ವರ್ಗ ತನ್ನ ಐತಿಹಾಸಿಕ ಸಾಮಾಜಿಕ ಪಾತ್ರವನ್ನು ವಹಿಸಬೇಕಾದರೇ ಇಡೀ ಕಾರ್ಮಿಕ ವರ್ಗವು ಒಂದು ಸಂಘಟಿತ ಶಕ್ತಿಯಾಗಿ ರೂಪುಗೊಳ್ಳುವುದು ಅವಶ್ಯಕವಾಗಿದೆ. ಈ ಹಿನ್ನಲೆಯಲ್ಲಿ 28 ಫೆಬ್ರವರಿ 2012 ರ ಐಕ್ಯ ಮುಷ್ಕರವು ಒಂದು ಮಹತ್ವದ ಅವಕಾಶವಾಗಿ ಪರಿಗಣಿಸುವುದು ಅಗತ್ಯವಾಗಿದೆ. ಅಂದರೇ ನಾವು ಐಕ್ಯ ಕಾರ್ಮಿಕ ಚಳುವಳಿಯ ಕರೆಯು ನೇರವಾಗಿ ನಮ್ಮ ನಾಯಕತ್ವದಲ್ಲಿ ಸಂಘಟಿತವಾಗಿರುವ ಕಾರ್ಮಿಕರು ಮತ್ತು ದುಡಿಯುವ ಜನತೆ ಮಾತ್ರ ಅಲ್ಲದೇ ವಿಶಾಲವಾದ ಜನಸಮುದಾಯಗಳನ್ನು ತಲುಪಲು ಸದಾವಕಾಶವಾಗಿದೆ. ಆದ್ದರಿಂದ ಆ ದಿನ ಅಂದರೇ ಫೆಬ್ರವರಿ 28 ರಂದು ಮುಷ್ಕರವು ಯಶಸ್ವಿಯಾಗಿ ನಡೆಸುವುದು ಒಂದು ಮುಖ್ಯ ಅಂಶವಾಗಿದೆ. ಆದರೇ ಅಂದು ಮುಷ್ಕರ ಯಶಸ್ವಿ ಆದರೇ ಮಾತ್ರ ಸಾಲದು ಈ ಮುಷ್ಕರದಲ್ಲಿ ಭಾಗವಹಿಸುವ ಮತ್ತು ಭಾಗವಹಿಸಬೇಕಾದ ದುಡಿಯುವ ಜನತೆ ಏಕೆ ಈ ಮುಷ್ಕರದಲ್ಲಿ ಭಾಗವಹಿಸುತ್ತಿದ್ದೇವೆಂಬ ಸ್ಪಷ್ಟವಾದ ಜಾಗೃತಿಯಿಂದ ಭಾಗವಹಿಸುವಂತೆ ಆಗಬೇಕಾಗಿದೆ. ಆದ್ದರಿಂದ ಸಂಘಟನಾತ್ಮಕವಾಗಿ ರಾಜಕೀಯವಾಗಿ ಈ ಮುಷ್ಕರವು ಒಂದು ನೆಗೆತವನ್ನು ಸಾಧಿಸಲು ಸಾಧ್ಯವಾಗಬೇಕು. ಹಾಗೆ ರಾಜಕೀಯ ಸಂಘಟನಾತ್ಮಕ ಪ್ರಯೋಜನ ವಾಗಬೇಕಾದರೆ ಪ್ರಜ್ಞಾಪೂರ್ವಕವಾಗಿ ಎಲ್ಲಾ ಕಾರ್ಮಿಕರನ್ನು ತಲುಪಿ ಈ ಮುಷ್ಕರದ ಬೇಡಿಕೆಗಳೇನು ? ಈ ಬೇಡಿಕೆಗಳು ದುಡಿಯುವ ಜನತೆಯ ಬದುಕಿಗೆ ಎಷ್ಟು ಪ್ರಮುಖವಾಗಿವೆ ? ಹಾಗೂ ಈ ಬೇಡಿಕೆಗಳು ಇಂದಿಗೂ ಈಡೇರದೇ ಇರುವ ಪರಿಸ್ಥಿತಿಗೆ ಯಾವ ರಾಜಕೀಯ, ಸಾಮಾಜಿಕ ನೀತಿಗಳು ಕಾರಣವಾಗಿವೆ ಎಂಬ ಕುರಿತು ಪ್ರಜ್ಞಾ ಮಟ್ಟವನ್ನು ಎತ್ತರಿಸುವ ಪ್ರಚಾರ ಪ್ರಕ್ಷೋಭೆಗಳ ಮೂಲಕ ಜನತೆಯ ಅನುಭವದೊಂದಿಗೆ ಸಂಯೋಜನೆ ಮಾಡಿ ಮನವರಿಕೆ ಮಾಡುವುದು ಪ್ರಧಾನವಾಗಿದೆ. ಆದ್ದರಿಂದ ಮುಷ್ಕರದ ನಿಜವಾದ ಪ್ರಯೋಜನವೆಂದರೇ ಆ ದಿನ ಮುಷ್ಕರ ಯಶಸ್ವಿಯಾದರೇ ಸಾಲದು ಬದಲಾಗಿ ಮುಷ್ಕರದ ಮೂಲ ಉದ್ದೇಶಗಳ ಕುರಿತು ಎಷ್ಟು ಹೆಚ್ಚಿನ ಕಾರ್ಮಿಕರಲ್ಲಿ ಜಾಗೃತಿ ಮೂಡಿಸಲು ಸಾಧ್ಯವಾಗಿದೆ ಎಂಬುದು ಮತ್ತಷ್ಟು ಪ್ರಮುಖವಾಗಿದೆ.

ಎಲ್ಲಾ ವಸ್ತುಗಳ ಬೆಲೆಗಳು ಏರುತ್ತಲೇ ಇವೆ. ಗೊಬ್ಬರ, ಬೀಜ, ಔಷದಿ, ಅಕ್ಕಿ, ಗೋಧಿ, ಎಣ್ಣೆ, ಬಟ್ಟೆ ಬರೆ, ಶಿಕ್ಷಣ, ಆರೋಗ್ಯ ವೆಚ್ಚಗಳು ಜನಸಾಮಾನ್ಯರ ಕೈಗೆಟುಕಲಾರದ ಮಟ್ಟದಲ್ಲಿವೆ.



ಈಗಿನ ಅತಿಯಾದ ಬೆಲೆ ಏರಿಕೆಗೆ ಕೇಂದ್ರ ರಾಜ್ಯ ಸರಕಾರಗಳು ಅನುಸರಿಸುತ್ತಿರುವ ನೀತಿಗಳು ಮುಖ್ಯವಾಗಿ ದೊಡ್ಡ ಬಂಡವಾಳಗಾರರಿಗೆ ಹಾಗೂ ವಿದೇಶಿ ಬಂಡವಾಳಗಾರರಿಗೆ ಮತ್ತಷ್ಟು ಲಾಭ ಸೂರೆಗೊಳ್ಳಲು ಅನುಕೂಲವಾಗುವಂತೆ ಮುಂಗಡ ವ್ಯಾಪಾರ ನೀತಿ, ಎಪಿಎಂಸಿ ಕಾನೂನು ತಿದ್ದುಪಡಿ ಮಾಡಿ ಹೊಲದಲ್ಲಿ ಬೀಜ ಬಿತ್ತುವ ಮೊದಲೇ ರೈತರ ಬೆಳೆಯನ್ನು ಕಾಂಟ್ರಾಕ್ಟ್ ವ್ಯವಸಾಯ ಮೂಲಕ ಶೋಷಣೆ ಮಾಡಲು ಅವಕಾಶ ಮಾಡಿಕೊಡಲಾಗಿದೆ. ಪೆಟ್ರೋಲ್ ಬೆಲೆಗಳನ್ನು ಈಗಾಗಲೇ ಅನಿಯಂತ್ರಿತವಾಗಿ ಮಾಡಿದ್ದೂ ಪೆಟ್ರೋಲಿಯಂ ವ್ಯಾಪಾರಿಗಳಾದ ಬಹುರಾಷ್ಟ್ರೀಯ ಕಂಪನಿಗಳು ಹಾಗೂ ದೇಶೀಯ ರಿಲಯನ್ಸ್, ಎಸ್ಸಾರ್ ಮುಂತಾದ ಕಂಪೆನಿಗಳು ಜನರನ್ನು ಲೂಟಿ ಮಾಡಲು ಅವಕಾಶ ಮಾಡಿಕೊಡಲಾಗಿದೆ. ಕೇಂದ್ರ ಸರಕಾರವು ಡಿಸೆಲ್ ಬೆಲೆಗಳನ್ನು ಅನಿಯಂತ್ರಿತಗೊಳಿಸಲು ತರಾತುರಿ ಮಾಡುತ್ತಿದೆ. ಯಾವುದೇ ಕ್ಷಣದಲ್ಲಿ ಆ ನಿರ್ಣಯವನ್ನು ಜಾರಿಗೊಳಿಸುವ ಸಾಧ್ಯತೆ ಇದೆ. ಆ ನಿರ್ಣಯ ಜಾರಿ ಆದರೆ ಡೀಸೆಲ್ ದರಗಳು ಮತ್ತಷ್ಟು ಆಕಾಶಕ್ಕೆ ಹಾರಿ ಎಲ್ಲಾ ವಸ್ತುಗಳ ಬೆಲೆಗಳು ಮತ್ತಷ್ಟು ದುಬಾರಿ ಆಗುತ್ತವೆನ್ನುವದರಲ್ಲಿ ಅನುಮಾನವೇ ಇಲ್ಲ. ಅಲ್ಲದೇ ಸರಕಾರಗಳು ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಹಾಕಿರುವ ತೆರಿಗೆಗಳು ಶೇ 60 ರಷ್ಟು ಇರುವುದು ಆತಂಕಕಾರಿಯಾದ ಅಂಶವಾಗಿದೆ. ಇದರೊಂದಿಗೆ ನ್ಯಾಯ ಬೆಲೆ ಅಂಗಡಿಗಳ ಮೂಲಕ ಕೊಡಲಾಗುತ್ತಿರುವ ಆಹಾರ ಪದಾರ್ಥಗಳನ್ನು ಇನ್ನು ಮುಂದೆ ಕೊಡದಿರಲು "ನಗದು ವರ್ಗಾವಣೆ ಯೋಜನೆ" ಹೆಸರಲ್ಲಿ ಎಲ್ಲಾ ರೇಷನ್ ಅಂಗಡಿಗಳನ್ನು ಮುಚ್ಚುವ ಕುತಂತ್ರವನ್ನು ಮಾಡಲಾಗುತ್ತಿದೆ. ಶೇ.56 ರಷ್ಟು ಕಾರ್ಡ್‌ದಾರರು ಕೂಡ ನ್ಯಾಯ ಬೆಲೆ ಅಂಗಡಿಗಳಲ್ಲಿ ಅಲ್ಲದೇ ಬಹಿರಂಗ ಮಾರುಕಟ್ಟೆಯಲ್ಲಿ ಖರೀದಿ ಮಾಡಬೇಕಾದ ಪರಿಸ್ಥಿತಿ ಉಂಟು ಮಾಡಿ ಮತ್ತಷ್ಟು ಬೆಲೆ ಏರಿಕೆಗೆ ಕಾರಣವಾಗಲಿದೆ. ಮತ್ತೊಂದು ಕಡೆ ರೈತರ ಬೆಳೆಗಳಿಗೆ ಯಾವುದೇ ನ್ಯಾಯವಾದ ಬೆಂಬಲಿತ ಬೆಲೆಗಳನ್ನು ನೀಡದೇ ರೈತರನ್ನು ದಿವಾಳಿ ಮಾಡಲಾಗುತ್ತಿದೆ. ಆದ್ದರಿಂದ ಸರಕಾರಗಳ ಈ ಬೆಲೆ ಏರಿಕೆ ನೀತಿಗಳು ಬದಲಾಗುವಂತೆ ರಾಜಕೀಯ ಕಾರ್ಯಾಚರಣೆ ನಡೆಸುವುದು ಅಗತ್ಯವಾಗಿದೆ.

ಕನಿಷ್ಟ ಕೂಲಿಯು ಅಕುಶಲ ಅಂದರೆ ಕುಶಲತೆ ಇಲ್ಲದ ಮಟ್ಟದಲ್ಲಿ ಕನಿಷ್ಟ ರೂ.10,000 ಕಾನೂನುಬದ್ಧವಾಗಿ ನಿಗದಿ ಆಗಬೇಕೆಂಬುದು ಒಕ್ಕೊರಳಿನ ಕೂಗಾಗಿದೆ. ಕನಿಷ್ಟ ಕೂಲಿ ನಿಗದಿ ಮಾಡಲು ಈಗ ಜಾರಿಯಲ್ಲಿರುವ ಕಾನೂನಿನಲ್ಲಿ ಸರಕಾರ ಪಟ್ಟಿ (ಶೆಡ್ಯೂಲ್) ಮಾಡಿದ ಉದ್ಯೋಗಗಳಿಗೆ ಮಾತ್ರ ಸಿಗುತ್ತದೆ. ಆದ್ದರಿಂದ ಎಲ್ಲೇ ಕೆಲಸ ಮಾಡುವ ಅಥವಾ ಯಾವುದೇ ಉದ್ಯೋಗ ಮಾಡಲಿ ಕನಿಷ್ಟ ವೇತನ ಸಿಗುವಂತೆ ಕಾನೂನು ಬದಲಾವಣೆ ಮಾಡಬೇಕಾಗಿದೆ. ಆಗ ಮಾತ್ರ ಅರ್ಥ ಪೂರ್ಣವಾಗಿ ಕನಿಷ್ಟ ವೇತನ ಜಾರಿಗೊಳಿಸಲು ಸಾಧ್ಯವಾಗುತ್ತದೆ. ಕಾರ್ಮಿಕರಿಗೆ ಕನಿಷ್ಟ ಕೂಲಿಯನ್ನು ಜಾರಿಗೊಳಿಸುವ ಬದಲಾಗಿ ಕೇಂದ್ರ ಸರಕಾರವು ರೇಗಾ ಯೋಜನೆಯಲ್ಲಿ ಕನಿಷ್ಟ ಕೂಲಿಯನ್ನು ನಿರಾಕರಿಸುವ ನಿಲುವೆಯನ್ನು ತೆಗೆದುಕೊಂಡಿದ್ದೂ ಅತ್ಯಂತ ಕಡು ಬಡವರಾಗಿರುವ ರೇಗಾ ಕಾರ್ಮಿಕರ ಹೊಟ್ಟೆ ಹೊಡೆಯಲು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಮಾಡಿರುವುದು ಅತ್ಯಂತ ಅಮಾನವೀಯವಾದ ಕ್ರಮವಾಗಿದೆ. ಇಂತಹ ನೀತಿಗಳನ್ನು ಹಿಮ್ಮೆಟ್ಟಿಸುವುದು ಅಗತ್ಯವಾಗಿದೆ. ರಾಜ್ಯ ಬಿಜೆಪಿ ಸರಕಾರವು ಸಾಮಾನ್ಯ ಕನಿಷ್ಟ ಕೂಲಿ ನಿಗದಿ ಮಾಡಲು ರಚಿಸಲಾದ ಸಮಿತಿಯ ಸಭೆಯನ್ನು ವರ್ಷಗಟ್ಟಲೆ ಕರೆಯದೇ ಮೀನಮೇಷ ಎನಿಸುತ್ತಿದೆ. ಬೀಡಿ ಕಾರ್ಮಿಕರ ಕೂಲಿ ಹಾಗೂ ತುಟ್ಟಿ ಭತ್ಯೆ ಹಾಗೂ ಬೀಡಿ ಕಾರ್ಮಿಕರ ಮಕ್ಕಳಿಗೆ ಇದುವರಗೆ ದೊರೆಯುತ್ತಿದ್ದ ಸ್ಕಾಲರ್‌ಶಿಪ್ ನಿರಾಕರಿಸಲು ಮುಂಧಾಗಿವೆ. ಈ ಎಲ್ಲಾ ನೀತಿಗಳನ್ನು ಹಿಮ್ಮೆಟ್ಟಿಸಲು ಐಕ್ಯ ಹೋರಾಟದಿಂದ ಮಾತ್ರ ಸಾಧ್ಯ. ಆದ್ದರಿಂದ ಕೆಳಗಿನ ಬೇಡಿಕೆಗಳಿಗಾಗಿ ನಡೆಸುತ್ತಿರುವ ದೇಶವ್ಯಾಪಿ ಐಕ್ಯ ಹೋರಾಟಕ್ಕೆ ಎಲ್ಲಾ ಸಂಘಟನಾತ್ಮಕ ಕ್ರಮಗಳ ಮೂಲಕ ಹೆಚ್ಚಿನ ಕಾರ್ಮಿಕರನ್ನು ಜನಸಮೂಹಗಳನ್ನು ತಲುಪಲು ಮುಂದಾಗೋಣ.

ಈ ಹಿನ್ನೆಲೆಯಲ್ಲಿ ದೇಶದ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ದಿನಾಂಕ 28ನೇ ನವೆಂಬರ್ 2011 ರಂದು ದೇಶ ವ್ಯಾಪಿಯಾಗಿ ಬೃಹತ್ ಪ್ರಮಾಣದಲ್ಲಿ ಜೈಲ್ ಭರೋ / ಸತ್ಯಾಗ್ರಹ ನಡೆಸಲಾಗಿದೆ. ಕೇಂದ್ರ ಕಾರ್ಮಿಕರ ಸಂಘಟನೆಗಳು ಈಗಾಗಲೇ ಗುರುತಿಸಿರುವ 10 ಪ್ರಮುಖ ಬೇಡಿಕೆಗಳಾದ

1. ಬೆಲೆ ಏರಿಕೆ ನಿಯಂತ್ರಣ
2. ಉದ್ಯೋಗ ಸೃಷ್ಟಿಸಲು ಹಾಗೂ ರಕ್ಷಿಸಲು ಪ್ಯಾಕೇಜ್
3. ಕಾರ್ಮಿಕ ಕಾನೂನುಗಳ ಕಠಿಣವಾದ ಅನುಷ್ಠಾನ
4 ಸಾವತ್ರಿಕವಾಗಿ ಎಲ್ಲಾ ಕಾರ್ಮಿಕರಿಗೂ ಸಾಮಾಜಿಕ ಭದ್ರತೆ ಒದಗಿಸಲು ಹಣಕಾಸು ಸಂಪನ್ಮೂಲ ಒದಗಿಸುವ ಕ್ರಮಗಳು ಹಾಗೂ 5. ಲಾಭದಾಯಕ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿ ಷೇರು ಮಾರಾಟ ಮಾಡದಿರಲು ಒತ್ತಾಯಿಸುತ್ತಾ ಬರಲಾಗಿದೆ.

ಮೇಲಿನ ಪ್ರಮುಖ ಬೇಡಿಕೆಗಳ ಜೊತೆಗೆ ಕೂಡಲೇ ಕೆಳಗಿನ ಬೇಡಿಕೆಗಳ ಕುರಿತು ತುರ್ತು ಕ್ರಮಗಳನ್ನು ವಹಿಸಲು ಸರಕಾರವನ್ನು ಒತ್ತಾಯಿಸಲು ಕರೆ ನೀಡಲಾಗಿದೆ.

1 ಖಾಯಂ ಹಾಗೂ ನಿರಂತರ ಸ್ವರೂಪದ ಕೆಲಸಗಳನ್ನು ಗುತ್ತಿಗೆ ಪದ್ಧತಿಯಲ್ಲಿ ನಿರ್ವಹಿಸುತ್ತಿರುವುದನ್ನು ರದ್ದು ಪಡಿಸಬೇಕು ಹಾಗೂ ರದ್ದು ಪಡಿಸುವ ವರೆಗೆ ಕೈಗಾರಿಕೆ/ಸಂಸ್ಥೆಯಲ್ಲಿ ಖಾಯಂ ಕಾರ್ಮಿಕರಿಗೆ ನೀಡಲಾಗುವ ವೇತನ/ಸೌಲಭ್ಯಗಳ ದರದಲ್ಲಿಯೇ ಗುತ್ತಿಗೆ ಕಾರ್ಮಿಕರಿಗೂ ಸಿಗುವಂತೆ ಕ್ರಮ ವಹಿಸತಕ್ಕದ್ದು.
2 ಷೆಡ್ಯೂಲ್‌ಗಳ ವ್ಯತ್ಯಾಸವಿಲ್ಲದೆ, ಸೂಚ್ಯಂಕ ಆಧಾರಿತ ತಿಂಗಳಿಗೆ 10,000 ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಶಾಸನಬದ್ಧ ಕನಿಷ್ಟ ಕೂಲಿಯನ್ನು ನಿಗದಿಪಡಿಸಲು 'ಕನಿಷ್ಟ ಕೂಲಿ ಕಾಯಿದೆಯನ್ನು ತಿದ್ದುಪಡಿ ಮಾಡಿ ಅದರ ವ್ಯಾಪ್ತಿಯನ್ನು ಸಾರ್ವತ್ರಿಕಗೊಳಿಸತಕ್ಕದ್ದು.
3 ಬೋನಸ್, ಭವಿಷ್ಯನಿಧಿ ಪಾವತಿಗೆ ಇರುವ ಎಲ್ಲಾ ಮಿತಿ ಹಾಗೂ ಅರ್ಹತೆಗಳನ್ನು ತೆಗೆದು ಹಾಕಿ ಗ್ರಾಚ್ಯುಯಿಟಿ ಮೊತ್ತವನ್ನು ಏರಿಸತಕ್ಕದ್ದು.
4 ಎಲ್ಲ ಕಾರ್ಮಿಕರಿಗೆ ನಿವೃತ್ತಿ ವೇತನ ನೀಡಬೇಕು.
5 45 ದಿನಗಳ ಒಳಗಾಗಿ ಕಾರ್ಮಿಕ ಸಂಘಟನೆಗಳ ಕಡ್ಡಾಯ ನೊಂದಣಿ ಮತ್ತು ಐಎಲ್‌ಓನ 87 (ಸಂಘಟನಾ ಹಕ್ಕು) ಹಾಗೂ 98ನೇ (ಸಾಮೂಹಿಕ ಚೌಕಾಸಿ ಹಕ್ಕು) ನಿರ್ಣಯಗಳನ್ನು ಭಾರತ ಸರಕಾರ ದೃಢೀಕರಿಸಬೇಕು.

ಕರ್ನಾಟಕ ರಾಜ್ಯದಲ್ಲೂ ಕೇಂದ್ರ ಕಾರ್ಮಿಕ ಸಂಘಟನೆಗಳು ಐತಿಹಾಸಿಕ ಐಕ್ಯತೆಯೊಂದಿಗೆ ನೀಡಿರುವ ರಾಷ್ಟ್ರೀಯ ಕರೆಯನ್ನು ಯಶಸ್ವಿಗೊಳಿಸಲು ಎಲ್ಲಾ ಜಿಲ್ಲೆಗಳಲ್ಲಿ ಹಾಗೂ ಕೈಗಾರಿಕಾ ಕೇಂದ್ರಗಳಲ್ಲಿ ಸಭೆ ಸಮಾವೇಶಗಳನ್ನು ನಡೆಸಿ ಕಾರ್ಮಿಕರಲ್ಲಿ ಜಾಗೃತಿಯನ್ನು ಉಂಟು ಮಾಡುವ ಕಾರ್ಯಕ್ರಮಗಳನ್ನು ನಡೆಸಲಾಗುವುದು.

ನೆರೆ ಹೊರೆ

ಪಶ್ಚಿಮ ಬಂಗಾಳ

ಕೃಷಿ ಬಿಕ್ಕಟ್ಟು ತೀವ್ರತೆ–ಹೆಚ್ಚುತ್ತಿರುವ ರೈತರ ಆತ್ಮಹತ್ಯೆ

ಪಶ್ಚಿಮ ಬಂಗಾಳ ರಾಜ್ಯದಲ್ಲಿ ಕೃಷಿ ಬಿಕ್ಕಟ್ಟು ಆತಂಕಕಾರಿ ಸ್ಥಿತಿಯನ್ನು ತಲುಪಿದೆ. ಇದಕ್ಕೆ ರಾಜ್ಯದ ತೃಣಮೂಲ ಸರ್ಕಾರವೂ ನೇರವಾಗಿ ಕಾರಣ ಎಂದರೆ ತಪ್ಪಲ್ಲ. ನಗರ ಹಾಗೂ ಗ್ರಾಮೀಣ ಬಂಡವಾಳದ ನೇತೃತ್ವದಲ್ಲಿ ನಡೆಯುತ್ತಿರುವ ಮುಕ್ತ ಮಾರಾಟಕ್ಕೆ ರಾಜ್ಯ ಸರ್ಕಾರ ಒಂದು ಕಡೆ ಅವಕಾಶ ಮಾಡಿಕೊಟ್ಟಿದೆ. ಇದೇ ವೇಳೆ, ಈ ಕೃಷಿ ನೀತಿಗಳ ಪರಿಣಾಮದಿಂದ ರೈತರನ್ನು ಕಾಪಾಡುವಲ್ಲಿ ಸರ್ಕಾರದ ವಿವಿಧ ಇಲಾಖೆಗಳು ವಿಫಲವಾಗಿವೆ.

ಖಾಸಗಿ ಸಂಸ್ಥೆಗಳಲ್ಲಿ ತಾನು ಮಾಡಿದ ಸಾಲವನ್ನು ತೀರಿಸದ ಕಾರಣ ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡುತ್ತಿವೆ. ಹೆಚ್ಚಾಗುತ್ತಿರುವ ಉತ್ಪಾದನಾ ವೆಚ್ಚ, ಬೆಳೆದ ಬೆಳೆಗೆ ಮಾರುಕಟ್ಟೆಯಲ್ಲಿ ಸಿಗದ ಬೆಲೆ... ಇನ್ನೊಂದೆಡೆ, ಚಕ್ರಬಡ್ಡಿಯಿಂದ ಬೆಟ್ಟದಷ್ಟು ಆಗುತ್ತಿರುವ ಸಾಲದ ಹೊರೆ.: ಇದರಿಂದ ಕಂಗಾಲಾದ ರೈತನಿಗೆ ಆತ್ಮಹತ್ಯೆ ಬಿಟ್ಟರೆ ಬೇರೆ ದಾರಿಯೇ ಕಾಣುತ್ತಿಲ್ಲ.



34 ವರ್ಷಗಳಿಂದ ರೈತರ ಪರ ನಿಂತ ಸರ್ಕಾರ ಪತನಗೊಂಡ ಬಳಿಕ ಪಶ್ಚಿಮ ಬಂಗಾಳದಲ್ಲೂ ಆತಂಕಕಾರಿ ಬೆಳವಣಿಗೆಗಳು ಆಗುತ್ತಿವೆ. ಕನಿಷ್ಟ ಬೆಂಬಲ ಬೆಲೆಯ ಘೋಷಣೆ, ರೈತರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ ಮೊದಲಾದ ಯೋಜನೆಗಳನ್ನು ಎಡರಂಗ ಸರ್ಕಾರ ಹಾಕಿಕೊಂಡಿತ್ತು. ಆದರೆ, ಸರ್ಕಾರ ಬದಲಾದಂತೆ ಇಂತಹ ಯೋಜನೆಗಳನ್ನು ಒಂದೊಂದಾಗಿಯೇ ಹಿಂದಕ್ಕೆ ಪಡೆದು ಕೊಳ್ಳಲಾಗುತ್ತಿದೆ. ಭತ್ತ, ಜೋಳ ಮತ್ತು ಆಲೂಗಡ್ಡೆಯನ್ನು ರೈತರು ನಿಕೃಷ್ಟ ಎನಿಸುವ ಬೆಲೆಗೆ ಮಾರಾಟ ಮಾಡ ಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿವೆ.



ಪರಿಸ್ಥಿತಿ ಕೈ ಮೀರುತ್ತಿರುವಾಗಲೂ ಮಮತಾ ಸರ್ಕಾರ ಮಾತ್ರ ಕೈಕಟ್ಟಿ ಕುಳಿತುಕೊಳ್ಳುತ್ತಿದೆ. ರೈತರ ಆತ್ಮಹತ್ಯೆ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿವೆ. ಸರ್ಕಾರದ ಮಿತ್ರ ಪಕ್ಷವಾದ ಕಾಂಗ್ರೆಸ್ ಸಂತ್ರಸ್ತ ರೈತ ಕುಟುಂಬಕ್ಕೆ ಪರಿಹಾರ ನೀಡಬೇಕೆಂದು ಒತ್ತಾಯಿಸುತ್ತಿದ್ದರೂ ಕೃಷಿ ಸಚಿವರು, ಮುಖ್ಯಮಂತ್ರಿಗಳು ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲ.

ಸಿಮ್ಮಿಸಿ

ಬೆಳೆಗಳ ಖರೀದಿ ಪ್ರಕ್ರಿಯೆಯಲ್ಲಿ ಸರ್ಕಾರ ತನ್ನ ಇಲಾಖೆಗಳನ್ನು ತೊಡಗಿಸಿಕೊಳ್ಳುತ್ತಿಲ್ಲ. ಮಾರಾಟ ವ್ಯವಸ್ಥೆಯಲ್ಲೂ ರೈತರಿಗೆ ನೆರವಿನ ಹಸ್ತ ಚಾಚುತ್ತಿಲ್ಲ. ಬೊಕ್ಕಸ ಬರಿದಾಗಿದೆ ಎಂದು ಹೇಳಿ ರೈತರಿಗೆ ಬೆಂಬಲ ಬೆಲೆ ಮುಂತಾದ ವಿತ್ತೀಯ ನೆರವನ್ನೂ ನೀಡುತ್ತಿಲ್ಲ. ಇದೇ ವೇಳೆ, ಶಾಸಕರು, ಸಚಿವರ ಗೌರವಧನ, ಭತ್ಯೆಗಳನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ದಿಘಾ ಹಬ್ಬವನ್ನು ಆಚರಿಸಲು ಕೋಟಿಗಟ್ಟಲೆ ಹಣವನ್ನು ವ್ಯಯಿಸಲಾಗಿದೆ. ಸರ್ಕಾರದ ದಿವ್ಯ ನಿರ್ಲಕ್ಷ್ಯದಿಂದ ರೈಸ್ ಮಿಲ್‌ಗಳ ಒಡೆಯಲು ರೈತರ ಮೇಲೆ ದರ್ಬಾರ್ ಮಾಡಲು ಆರಂಭಿಸಿದ್ದಾರೆ.

ಇದನ್ನೆಲ್ಲ ನೋಡಿ ಕಂಗೆಟ್ಟ ರೈತಾಪಿ ಜನತೆ ಮತ್ತೆ ಹೋರಾಟದತ್ತ ಮುಖ ಮಾಡಿದ್ದಾರೆ. ಕೂಚ್‌ಬಿಹಾರ್, ಬರ್ದ್ವಾನ್ ಮತ್ತು ಹೂಗ್ಲಿಯಲ್ಲಿ ಆಲೂಗಡ್ಡೆ ಬೆಳೆಗಾರರು ಬೃಹತ್ ಪ್ರತಿಭಟನೆಯನ್ನು ನಡೆಸಿದ್ದಾರೆ. ರಸ್ತೆಯಲ್ಲೇ ತಾವು ಬೆಳೆದ ಬೆಳೆಯನ್ನು ಬೆಂಕಿಗೆ ಹಾಕಿ ಸರ್ಕಾರಕ್ಕೆ ಬಿಸಿ ಮುಟ್ಟಿಸಿದ್ದಾರೆ.

ಸಿಪಿಐ(ಎಂ), ರಾಜ್ಯದ ಎಡರಂಗ, ಎಡ ಮತ್ತು ಪ್ರಜಾಸತ್ತಾತ್ಮಕ ಸಂಘಟನೆಗಳು ಹಾಗೂ ಒಂದು ವಿಭಾಗದ ಮಾಧ್ಯಮ ರಾಜ್ಯ ಸರ್ಕಾರದ ಈ ಮತಿಗೆಟ್ಟ ನೀತಿಗಳನ್ನು ಉಗ್ರವಾಗಿ ತರಾಟೆಗೆ ತೆಗೆದುಕೊಂಡಿದೆ. ಗ್ರಾಮೀಣಾಭಿವೃದ್ಧಿಗೆ ಪೂರಕವಲ್ಲದ, ರೈತವಿರೋಧಿ ನೀತಿಗಳನ್ನು ಸರ್ಕಾರ ಜಾರಿಗೆ ತರುತ್ತಿದೆ ಎಂದು ನೇರಾನೇರ ಖಂಡನೆ ಮಾಡುತ್ತಿವೆ.

ಇತ್ತೀಚೆಗೆ ಪ್ರತಿಪಕ್ಷದ ನಾಯಕ ಹಾಗೂ ಸಿಪಿಎಂ ಶಾಸಕಾಂಗ ಪಕ್ಷದ ನಾಯಕ ಡಾ. ಸೂರ್ಯಕಾಂತ ಮಿಶ್ರಾ ನೇತೃತ್ವದ ನಿಯೋಗವೊಂದು ಸರ್ಕಾರಕ್ಕೆ ಮನವಿ ಸಲ್ಲಿಸಿತು.

ಈ ಮನವಿಯಲ್ಲಿ ರೈತ ಆತ್ಮಹತ್ಯೆಗಳಿಗೆ ಕಾರಣಗಳು ಮತ್ತು ಅದನ್ನು ತಡೆಯಲು ಕೈಗೊಳ್ಳಬೇಕಾದ ಕ್ರಮಗಳನ್ನು ಸವಿವರವಾಗಿ ಸೂಚಿಸಲಾಗಿತ್ತು.

ಪುಟ 15 ಕ್ಕೆ.........

ಬಂಗಾಳದಲ್ಲಿ ರೈತರ ಆತ್ಮಹತ್ಯೆಗಳು

☞ ಇಲ್ಲ ಎಂದ ಮುಖ್ಯಮಂತ್ರಿಗಳು – ☞ ಇದೆ ಎಂದ ರಾಜ್ಯಪಾಲರು

ಯುಪಿಎ ಅಂಗಪಕ್ಷಗಳಾದ ಟಿಎಂಸಿ ಮತ್ತು ಕಾಂಗ್ರೆಸ್ ಪಶ್ಚಿಮ ಬಂಗಾಳ ಸರಕಾರ ಅಧಿಕಾರ ವಹಿಸಿಕೊಂಡ ಎಂಟು ತಿಂಗಳಲ್ಲಿ 24 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವುಗಳಲ್ಲಿ ಕೆಲವು ಆತ್ಮಹತ್ಯೆಗಳೇಅಲ್ಲ, ಇನ್ನುಳಿದವುಗಳಿಗೂ ಸಾಲಬಾಧೆ ಕಾರಣವಲ್ಲ, ವೈಯುಕ್ತಿಕ ಮತ್ತು ಕೌಟುಂಬಿಕ ಕಾರಣಗಳಿಂದಾಗಿವೆ ಎಂದು ಟಿಎಂಸಿ ಮುಖ್ಯಮಂತ್ರಿ ತಮ್ಮ ಯುಪಿಎ ನೇತಾರ ಪಕ್ಷ ಕಾಂಗ್ರೆಸಿನ ಮಾದರಿಯನ್ನೇ ಅನುಕರಿಸಿದ್ದಾರೆ. ಆದರೆ ಅವರ ರಾಜ್ಯಪಾಲರು ಈ ರೈತರಲ್ಲಿ ಬಹುಪಾಲು ಅಗಾಧ ಸಾಲದಲ್ಲಿದ್ದವರು, ಸರಕಾರ ಇದಕ್ಕೊಂದು ಪರಿಹಾರ ಕಂಡುಕೊಳ್ಳಬೇಕು ಎಂದಿದ್ದಾರೆ.

ಇವುಗಳಲ್ಲಿ 17 ಆತ್ಮಹತ್ಯೆಗಳು ಪಶ್ಚಿಮ ಬಂಗಾಳ್ ಭತ್ತದ ಕಣಜ ಎನಿಸಿಕೊಂಡ ಬರ್ದ್ವಾನ್ ಜಿಲ್ಲೆಯಿಂದಲೇ ವರದಿಯಾಗಿವೆ. ಕೇಂದ್ರದ ಯುಪಿಎ ಸರಕಾರ ಆರ್ಥಿಕ ನೀತಿಗಳು ತಂದಿರುವ ಕೃಷಿ ಬಿಕ್ಕಟ್ಟಿನ ಜೊತೆಗೆ, ರಾಜ್ಯದಲ್ಲಿ ರೈತರಿಗೆ ರಕ್ಷಣೆ ಕೊಡುತ್ತಿದ್ದ ಎಡರಂಗ ಸರಕಾರ ನಿರ್ಮಿಸಿದ್ದ ಬೆಳೆ ಖರೀದಿ ವ್ಯವಸ್ಥೆಯನ್ನು ಕಳಚಿ ಹಾಕಿರುವುದು ಎಂದು ಹೇಳಲಗುತ್ತಿದೆ.

ಇಷ್ಟೇ ಅಲ್ಲ, ಚಹಾತೋಟಗಳಿರುವ ಪ್ರದೇಶಗಳಿಂದ 9 ಮಂದಿ ಹಸಿವಿನಿಂದ ಸತ್ತಿರುವ ವರದಿಗಳೂ ಬಂದಿವೆ. ಇದು ಕೂಟೆಡರಂಗ ಸರಕಾರ ಮುಚ್ಚಿದ ಕಾರ್ಖಾನೆಗಳು ಮತ್ತು ಚಹಾತೋಟಗಳ ಕಾರ್ಮಿಕರಿಗೆ ಪ್ರತಿತಿಂಗಳು 1500 ರೂ. ಒದಗಿಸುವ ಸ್ಕೀಮನ್ನು ಟಿಎಂಸಿ–ಕಾಂಗ್ರೆಸ್ ಸರಕಾರ ರದ್ದು ಮಾಡಿರುವುದರ ಪರಿಣಾಮ ಎನ್ನಲಾಗಿದೆ.

ಈಗ ಟಿಎಂಸಿ ತಮ್ಮನ್ನು ಬದಿಗೊತ್ತಲು ಪ್ರಯತ್ನಿಸಿರುವ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಕೂಡ ಇದು ದುರಾಡಳಿತ ಎಂದು ತಮ್ಮದೇ ಸರಕಾರದ ವಿರುದ್ಧ ಬಹಿರಂಗವಾಗಿ ಟೀಕಿಸಲಾರಂಭಿಸಿದೆ.

ಸಾರಿಗೆ ಕ್ಷೇತ್ರದ ಖಾಸಗೀಕರಣಕ್ಕೆ ಹುನ್ನಾರ : ಸ್ಥಗಿತಗೊಂಡ ವೇತನ ನೌಕರನ ಆತ್ಮಹತ್ಯೆ

ಕೊಲ್ಕತ್ತಾದ ಟ್ರಾಮ್‌ವೇ ಕಾರ್ಪೊರೇಷನ್‌ನ ನೌಕರ ವಿಕ್ರಮ್ ಸಿಂಗ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಳೆದ ನಾಲ್ಕು ತಿಂಗಳಿನಿಂದ ವೇತನವಾಗಿಲ್ಲ ಎಂಬುದು ಈ ಆತ್ಮಹತ್ಯೆಗೆ ಕಾರಣ. ಇವರಿಗಷ್ಟೇ ಅಲ್ಲ, ಸಾರಿಗೆ ನಿಗಮದಡಿಯಲ್ಲಿ ಬರುವ ಐದು ಸಂಸ್ಥೆಗಳ ನೌಕರರದ್ದೂ ಇದೇ ಪಾಡು. ಏಕಾಏಕಿ ಹೀಗೆ ಆಗಲು ಸಾಕಷ್ಟು ಹಿನ್ನೆಲೆಯೂ ಇದೆ. ಸಾರಿಗೆ ಸಂಸ್ಥೆಗಳನ್ನು ಖಾಸಗಿಕರಣಗೊಳಿಸುವ ಹುನ್ನಾರವನ್ನು ಮಮತಾ ಸರ್ಕಾರ ಅಧಿಕಾರಕ್ಕೆ ಬಂದ ಆರಂಭದಿಂದಲೇ ಮಾಡಿತ್ತು. ಇದರ ಭಾಗವಾಗಿ ಸಾರಿಗೆ ಸಂಸ್ಥೆಗಳಿಗೆ ನೀಡಬೇಕಾದ ಆರ್ಥಿಕ ಸಹಕಾರಗಳನ್ನು ಸ್ಥಗಿತಗೊಳಿಸಿತ್ತು.

ಎಡರಂಗ ಸರ್ಕಾರ ಇದ್ದ ಸಂದರ್ಭದಲ್ಲಿ ಸರ್ಕಾರಿ ನಿಯಂತ್ರಿತ ಸಾರಿಗೆ ನಿಗಮಕ್ಕೆ 400 ಕೋಟಿ ರೂಪಾಯಿಗಳ ಬಜೆಟ್ ನೆರವು ಸಿಗುತ್ತಿತ್ತು. ಇದರಿಂದ ದೇಶದಲ್ಲೇ ಅತಿ ಕಡಿಮೆ ದರದಲ್ಲಿ ಸಾಗಾಟ ವ್ಯವಸ್ಥೆ ಸುಸೂತ್ರವಾಗಿ ಸಾಗುತ್ತಿತ್ತು.

ಮಮತಾ ದೀದಿ ಸರ್ಕಾರದ ಹೊಸ ಕಠಿಣ ಕ್ರಮದಿಂದಾಗಿ ಹರಿದುಬರುತ್ತಿರುವ ಸರ್ಕಾರಿ ನೆರವು ನಿಂತುಹೋಯಿತು. ಇದರಿಂದ 18 ಸಾವಿರ ಕಾರ್ಮಿಕರು ಕಳೆದ ನಾಲ್ಕು ತಿಂಗಳಿನಿಂದ ವೇತನ ಇಲ್ಲದೆ ಪರಿತಪಿಸುವಂತಾಯಿತು. ನಿವೃತ್ತಿ ವೇತನ ಹಾಗೂ ಪಿಂಚಣಿ ಮೊದಲಾದ ಸೌಲಭ್ಯಗಳನ್ನೂ ಪ್ರಸ್ತುತ ತಡೆ ಹಿಡಿಯಲಾಗಿದೆ. ಇದರಿಂದಾಗಿ ಕಳೆದ ಒಂದು ತಿಂಗಳಲ್ಲಿ ಓರ್ವ ಪಿಂಚಣಿದಾರ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಕೇರಳದಲ್ಲಿ, ಎಡರಂಗ ಸರ್ಕಾರ 600 ಕೋಟಿ ರೂಪಾಯಿಗೂ ಹೆಚ್ಚು ಮೊತ್ತದ ಅನುದಾನವನ್ನು ಸಾರ್ವಜನಿಕ ಸಾರಿಗೆ ಸಂಸ್ಥೆಗೆ ನೀಡುತ್ತಿತ್ತು. ಇದರಿಂದ 22 ಸಾವಿರ ಮಂದಿ ಕಾರ್ಮಿಕರಿಗೆ ಅನುಕೂಲ ಆಗುತ್ತಿತ್ತು. ಆದರೆ, ಇಲ್ಲೂ ಯುಡಿಎಫ್ ಸರ್ಕಾರ ವ್ಯವಸ್ಥೆಯನ್ನು ಹದಗೆಡಿಸುವ ಪ್ರಯತ್ನಕ್ಕೆ ಕೈಹಾಕಿದೆ. ಒಂದು ಸಾವಿರ ನೂತನ ಬಸ್‌ಗಳನ್ನು ಖರೀದಿಸುವ ನಿರ್ಧಾರ ಕೈಗೊಂಡಿದೆ. ಈಗ ಈ ನಿಗಮ ನಷ್ಟದಿಂದ ಮುಳುಗುವ ಹಂತದಲ್ಲಿದೆ. ಇದೇ ಸಂದರ್ಭದಲ್ಲಿ, ಎಲ್‌ಡಿಎಫ್ ಸರ್ಕಾರ ಮಂಜೂರು ಮಾಡಿದ್ದ 1070 ಕೋಟಿ ರೂಪಾಯಿಗಳ ಅನುದಾನವನ್ನು ಕಡಿತಗೊಳಿಸಿದೆ.

ಈ ಎರಡೂ ರಾಜ್ಯಗಳ ಸಾರಿಗೆ ಸಂಸ್ಥೆಗಳ ಸಮಸ್ಯೆಯನ್ನು ಬಗೆಹರಿಸಲು ಅಖಿಲ ಭಾರತ ರಸ್ತೆ ಸಾರಿಗೆ ಸಂಸ್ಥೆ ಕಾರ್ಮಿಕರ ಒಕ್ಕೂಟ ಉಭಯ ಸರ್ಕಾರಗಳ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದೆ. ಸರ್ಕಾರಿ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಿ, ನಾಲ್ಕು ತಿಂಗಳ ವೇತನವನ್ನು ತಕ್ಷಣ ಪಾವತಿಸಿ, ತಡೆ ಹಿಡಿದಿರುವ ಕಾರ್ಮಿಕ ಸೌಲಭ್ಯಗಳನ್ನು ಬಿಡುಗಡೆ ಮಾಡಿ ಎಂದು ಲಿಖಿತ ಮನವಿಯನ್ನು ಮಾಡಿದೆ. ಇದೇ ವೇಳೆ, ಮೃತ ಕುಟುಂಬಗಳಿಗೆ ಸೂಕ್ತ ಪರಿಹಾರದ ಬೇಡಿಕೆಯನ್ನೂ ಅದು ಮುಂದಿಟ್ಟಿದೆ. ⊙

ರಾಜ್ಯದ 35 ಇಲಾಖೆಯಲ್ಲಿನ ಖಾಲಿ ಹುದ್ದೆಗಳು 1.42 ಲಕ್ಷ

ಕರ್ನಾಟಕ ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆ ಗಳ ಸಂಖ್ಯೆ ಎಷ್ಟು ಗೊತ್ತೆ ? ಬರೋಬ್ಬರಿ 1.42 ಲಕ್ಷ !!! ಅಂದರೆ ಸ್ವಲ್ಪ ಸ್ಥೂಲವಾಗಿ ಹೇಳುವುದಾದರೆ ಸು ಒಂದೂವರೆ ಲಕ್ಷ. ಇಷ್ಟೊಂದು ಹುದ್ದೆ ಖಾಲಿ ಇಟ್ಟುಕೊಂಡು ಸರ್ಕಾರ ಹೇಗೆ ನಡೆಸುತ್ತಾರಿವರು ಅಂತ ಅಂತೀರಾ ?! ಸರ್ಕಾರ ಎಲ್ಲದೆ ಇಲ್ಲಿ ? ಸರ್ಕಾರ ನಡೆಸೋದು ಯಾರಿಗೆ ಬೇಕಾಗಿದೆ ಸ್ವಾಮಿ ಇಲ್ಲಿ. ??

ರಾಜ್ಯದ ಗಂಭೀರ ಬರ ಪರಿಸ್ಥಿತಿಯ ಬಗೆಗೆ ಸದನದಲ್ಲಿ ಚರ್ಚೆ ನಡೆಯುತ್ತಿರುವಾಗ ಭವ್ಯ ಭಾರತೀಯ ಸಂಸ್ಕೃತಿ-ಸಂಘ ಸಂಸ್ಕಾರದಿದಂದ ಮಾರ್ಗದರ್ಶಿತವಾದ ಪ್ರೇರಿತವಾದ ಈ ದಕ್ಷಿಣ ಭಾರತದ ಪ್ರಪ್ರಥಮ ಬಿಜೆಪಿ ಸರ್ಕಾರದ ಮೂವರು ಮಂತ್ರಿ ಮಹೋದಯರು ತಮ್ಮ ಮೊಬೈಲು ಫೋನುಗಳಲ್ಲಿ ಮಹಿಳೆಯೊಬ್ಬಳು ಕುಣಿಯುತ್ತ ಬೆತ್ತಲೆಯಾಗುವ ಲೈಂಗಿಕ ದೃಶ್ಯಾವಳಿಗಳನ್ನು ನೋಡಿ ಆನಂದಿಸುತ್ತಾರೆ ಎಂದರೆ ಈ ಲಂಪಟರ ಸರ್ಕಾರದಲ್ಲಿ ಏನು ನಡೆದಿದೆ ಎಂದು ಯಾರಾದರೂ ಊಹಿಸಬಹುದು.

ಸರ್ಕಾರಿ ಹುದ್ದೆಗಳು ಖಾಲಿ ಬಿದ್ದಿರುವುದು ಹಾಗಿರಲಿ ದಿನೇ ದಿನೇ ಸಚಿವ ಸ್ಥಾನಗಳೇ ಖಾಲಿ ಬಿದ್ದು, ಪರಪ್ಪನ ಅಗ್ರಹಾರ ಯಾತ್ರೆ ಕೈಗೊಳ್ಳುವವರ ಮತ್ತು ಕೈಗೊಳ್ಳಬೇಕಾದ ಶಾಸಕರು, ಸಚಿವರಗಳ ಸಂಖ್ಯೆ ಏರುತ್ತಿರುವುದರ ಅರ್ಥವೇನು ಎಂದು ನಿತೀಶ ಗಡ್ಕರಿ, ಮೋಹನ್ ಭಾಗವತ್.....ಮುಂತಾದವರು ರಾಜ್ಯದ ಜನತೆಗೆ ವಿವರಿಸ ಬೇಕಾಗಿದೆ, ಇರಲಿ. ಈಗ ಮತ್ತೆ ರಾಜ್ಯದ ಇಲಾಖೆಗಳ ಖಾಲಿ ಹುದ್ದೆಗಳ ಸಮಾಚಾರಕ್ಕೆ ಬರೋಣ.

ರಾಜ್ಯದಲ್ಲಿ ಒಟ್ಟಾರೆ ಇರುವುದು ಒಟ್ಟು 35 ಇಲಾಖೆಗಳು. ಅದರಲ್ಲಿ ಮಂಜೂರಾದ ಇಲಾಖೆಗಳು ಇರುವುದು. 6,96,242. ಅದರಲ್ಲಿ ಖಾಲಿ ಬಿದ್ದಿರುವ ಹುದ್ದೆಗಳ ಸಂಖ್ಯೆ 1,42,330. ಇದರಲ್ಲಿ ಅಧಿಕಾರಿ ವರ್ಗಗಳ ಖಾಲಿ ಹುದ್ದೆಗಳು ಒಟ್ಟು 15,598. ಉಳಿದದ್ದು ನೌಕರರದ್ದು.

ಇಲಾಖಾವಾರು ಖಾಲಿ ಹುದ್ದೆಗಳ ವಿವರ ಹೀಗಿದೆ.


ಶಿಕ್ಷಣ ಇಲಾಖೆ	–	24,518
ವೈದ್ಯ ಶಿಕ್ಷಣ	–	20,413
ಪೋಲಿಸ್	–	16,950
ನಿಗಮ-ಮಂಡಳಿ	–	13,319
ಸಮಾಜ ಕಲ್ಯಾಣ	–	10,546
ನ್ಯಾಯಾಂಗ	–	7,516
ಕಂದಾಯ	–	6,108
ತಾಂತ್ರಿಕ ಶಿಕ್ಷಣ	–	6.601
ತೋಟಗಾರಿಕೆ	–	7,363
ಪಶು ಸಂಗೋಪನೆ	–	5,364
ಆರೋಗ್ಯ	–	2,675
ಲೋಕೋಪಯೋಗಿ	–	1,973
ಅಬಕಾರಿ	–	2,334
ಕಾರ್ಮಿಕ	–	2,242
ಮಹಿಳಾ ಅಭಿವೃದ್ಧಿ	–	1,989
ಅರಣ್ಯ	–	2,196
ಸಹಕಾರ	–	1,513
ವಾಣಿಜ್ಯ ತೆರಿಗೆ	–	1,351
ಕೈಗಾರಿಕೆ	–	1,094
ರಾಜಭವನ	–	29
ಸಚಿವಾಲಯ	–	504

ಶಿಕ್ಷಣ ಇಲಾಖೆಯಲ್ಲಿ 24,518 ಹುದ್ದೆಗಳು ಖಾಲಿ, ಒಟ್ಟಾರೆ ಆರೋಗ್ಯಕ್ಕೆ ಸಂಬಂಧ ಪಟ್ಟ ಎರಡು ಇಲಾಖೆಯಲ್ಲಿ 23,088 ಹುದ್ದೆಗಳೂ ಖಾಲಿ ಎಂದರೆ ಈ ಶಿಕ್ಷಣ ಮತ್ತು ಆರೋಗ್ಯಕ್ಕೆ ಈ ಬಿಜೆಪಿ ಸರ್ಕಾರದ ಆದ್ಯತೆ ಏನು ಎಷ್ಟು ಎಂಬುದು ತಿಳಿದು ಹೋಗುತ್ತದೆ. ಕಾರ್ಮಿಕ ಇಲಾಖೆಯಲ್ಲಿ 2,242 ಹುದ್ದೆಗಳು ಖಾಲಿ ಇವೆ. ಕಾರ್ಮಿಕ ಕಾನೂನು ಜಾರಿಮಾಡಬೇಕೆಂಬ ಉದ್ದೇಶವೇ ಸರ್ಕಾರಕ್ಕೆ ಇಲ್ಲದಿರುವಾಗ ಕಾರ್ಮಿಕ ಇಲಾಖೆಯ ಹುದ್ದೆಗಳು ಖಾಲಿ ಬಿದ್ದಿದ್ದರೆ ಯಾರಿಗೇನು ನಷ್ಟ. ಸಾಕಷ್ಟು ಲಾಭವೇ ಉಂಟು, ಮಾಲೀಕರಿಗೆ. ಭರ್ತಿಯಾಗಿರಬೇಕಾದ ಒಟ್ಟು ಹುದ್ದೆಗಳಲ್ಲಿ ಸರಿ ಸುಮಾರು ಶೇ. 20 ರಷ್ಟು ಖಾಲಿ ಉಳಿಸಿರುವ ಸರ್ಕಾರದ ಸಾಧನೆಯೇ ಸಾಧನೆ.

ತೊಗರಿ ಬೆಳೆದ ರೈತರ ಪಾಡು


ಕರ್ನಾಟಕ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರ್ಕಾರ ಹುಟ್ಟಿದ್ದೇ ರೈತ ಮಂತ್ರ ಜಪಿಸುತ್ತ. ಬಹುಶಃ ರಾಜ್ಯದ ರೈತರು ಮತ್ತು ಜನರು ಈ ಸರ್ಕಾರಕ್ಕೆ ಒದ್ದು ಒದ್ದು ಇದನ್ನು ತೊಲಗಿಸುವಾಗಲೂ ಈ ಸರ್ಕಾರ ರೈತ ಮಂತ್ರ ಜಪಿಸುತ್ತಿರುತ್ತದೆ ಎಂದು ಕಾಣುತ್ತದೆ.

ತೊಗರಿ ಉತ್ತರ ಕರ್ನಾಟಕದ ಅದರಲ್ಲೂ ಗುಲಬರ್ಗಾ ಜಿಲ್ಲೆಯ ಒಂದು ಪ್ರಮುಖ ಬೆಳೆ. ಜನರ ಆಹಾರದಲ್ಲಿ ಬಹುತೇಕ ನಿತ್ಯವೂ ಬೇಕು ಎಂಬಷ್ಟು ನಮ್ಮ ಅಡುಗೆಯಲ್ಲಿ ಹಾಸು ಹೊಕ್ಕಾದ ಒಂದು ಕಾಳಿನ ಉತ್ಪನ್ನ ಈ ತೊಗರಿ ಬೇಳೆ. ರಾಜ್ಯದ ಸಹಸ್ರಾರು ತೊಗರಿ ರೈತರು ಈಗ ಅಕ್ಷರಶಃ ತಲೆಯ ಮೇಲೆ ಕೈ ಹೊತ್ತು ಕುಳಿತಿದ್ದಾರೆ. ಈ ವರ್ಷ ರಾಜ್ಯದಲ್ಲಿ ಮಳೆ ಕೈಕೊಟ್ಟಿದೆ. ರಾಜ್ಯದಲ್ಲಿ ಸರಿಯಾಗಿ ಮಳೆ ಬರದಿದ್ದರೂ ರೈತೋದ್ಧಾರದ ಮಾತುಗಳ ಸುರಿಮಳೆಗೆ ಏನು ಕಡಿಮೆ ಇರಲಿಲ್ಲ. ರೈತ ಗೀತೆ...ಕೃಷಿ ಬಜೆಟ್....ಸಾವಯವ ಕೃಷಿ...ಪ್ರತಿಜ್ಞೆ ಮುಂತಾದವುಗಳಿಗೇನೂ ಕೊರತೆಯೇ ಇರಲಿಲ್ಲ. ಭಾಷಣ..ಕೃಷಿ ಬಜೆಟ್ ಮಂತ್ರಗಳಿಂದ ರೈತರಿಗೆ ಹೆಚ್ಚೇನು ಪ್ರಯೋಜನವಾಗದಿದ್ದರೂ, ಮಳೆಯ ಅಭಾವವಿದ್ದರೂ ಕೂಡ ನಮ್ಮ ರೈತರು ಏನೇನೋ ಪಾಡು ಬಿದ್ದು ಬೆಳೆ ಬೆಳೆದಿದ್ದಾರೆ. ಅಷ್ಟಿಷ್ಟು ತೊಗರಿ ಬೆಳೆಯೇನೋ ಕೈಗೆ ದಕ್ಕಿದೆ. ಆದರೆ ಈಗ ಈ ರೈತರ ಎದೆಯ ಉರಿ-ಸಂಕಟಗಳು ಇನ್ನಷ್ಟು ಹೆಚ್ಚಿದ್ದಾವೆಯೇ ಹೊರತು ಕಡಿಮೆಯಾಗಿಲ್ಲ.



ಗುಲ್ಬರ್ಗಾದ ಎಪಿಎಂಸಿ ಮಾರುಕಟ್ಟೆಯಲ್ಲಿ ತೊಗರಿ ಚೀಲಗಳು ರಾಶಿ ಬಿದ್ದಿವೆ. ಮುಕ್ತ ಮಾರುಕಟ್ಟೆಯಲ್ಲಿ ತೊಗರಿ ಧಾರಣೆ ಕುಸಿದಿದೆ.

ರೈತರನ್ನು ಕೇಳುವವರು [illegible]. ಕೃಷಿ ಸಚಿವ ಉಮೇಶ್ [illegible] ಪರವಾಗಿ ಜನವರಿ 21 ರಂದೇ ಖರೀದಿ ಕೇಂದ್ರ ತೆರೆಯುತ್ತೇವೆ ಎಂದು ಘೋಷಿಸಿದ್ದರು. ಜನವರಿ ತಿಂಗಳು ಮುಗಿದು ಫೆಬ್ರವರಿ ಮೊದಲ ವಾರ ಕಳೆದೇ ಹೋದರೂ ಖರೀದಿ ಕೇಂದ್ರವೂ ಇಲ್ಲ. ಪರಿಹಾರ ಕೇಂದ್ರವೂ ಇಲ್ಲ. ಕರ್ನಾಟಕ ಪ್ರಾಂತ ರೈತ ಸಂಘ ತೊಗರಿಗೆ ಕ್ವಿಂಟಲ್‌ಗೆ ಕನಿಷ್ಠ ಬೆಂಬಲ ಬೆಲೆ 5,000 ರೂಪಾಯಿ ನೀಡಬೇಕೆಂದು ಒತ್ತಾಯಿಸಿದೆ. ಆದರೆ ಮಾರುಕಟ್ಟೆಯಲ್ಲಿ ಈಗ 3500 ಸಿಗುವುದೇ ಹೆಚ್ಚಾಗಿದೆ. ಸರ್ಕಾರದ ಘೋಷಿತ ಬೆಂಬಲ ಬೆಲೆ 4000 ಇದೆ. ಆದರೆ ಅದು ಬರೀ ಘೋಷಣೆಯಾಗಿದೆ. ಜನರ ಕಣ್ಣಿಗೆ ಮಣ್ಣೆರಚಲು ಸರ್ಕಾರ ಈಗಲೋ ಆಗಲೋ ಇಷ್ಟರಲ್ಲೇ ಖರೀದಿ ಕೇಂದ್ರ ಶುರು ಮಾಡಲೂ ಬಹುದು. ಅದರೆ ಅದರಿಂದ ಲಾಭ ಯಾರಿಗೆ ? ಒಮ್ಮೆ ಸರ್ಕಾರ ಬೆಂಬಲ ಬೆಲೆಯೊಂದಿಗೆ ಮಾರುಕಟ್ಟೆ ಪ್ರವೇಶಿಸಿದರೆ ಸಹಜವಾಗಿ ತೊಗರಿ ಧಾರಣೆ ಸ್ವಲ್ಪ ಏರುತ್ತದೆ. ಆದರೆ .ಉತ್ತಮ ಧಾರಣೆಗಾಗಲೀ ಅಥವಾ ಸರ್ಕಾರದ ಖರೀದಿಗಾಗಲಿ ಕಾಯುವ ಆರ್ಥಿಕವಾಗಿ ಚೈತನ್ಯವಿಲ್ಲದ ಬಡ ರೈತರು ಆ ಹೊತ್ತಿಗಾಗಲೇ ಮಧ್ಯವರ್ತಿಗಳಿಗೆ , ಶ್ರೀಮಂತ ವ್ಯಾಪಾರಿಗಳಿಗೆ ತೊಗರಿಯನ್ನು ಅಗ್ಗದ ಬೆಲೆಗೆ ಮಾರಿಕೊಂಡಿರುತ್ತಾರೆ. ಹೀಗೆ ಅಗ್ಗವಾಗಿ ತೊಗರಿ ಕೊಂಡ ಖಾಸಗಿ ವ್ಯಾಪಾರಿಗಳಿಗೆ ಆಗ ಸುಗ್ಗಿ. ಹೇಗಿದೆ ರೈತ ಪರ ಬಿಜೆಪಿ ಸರ್ಕಾರದ ತೊಗರಿ ರೈತ ರಕ್ಷಣಾ ಕ್ರಮಗಳು [illegible]ಗಲ್ಲವೇ ಬಿಜೆಪಿ ಸರ್ಕಾರದ ಧೋರಣೆ



ಬಜೆಟ್ ದರ್ಬಾರ್

ಆರ್.ರಾಮಕೃಷ್ಣ

ಕೃಷಿ ಬಜೆಟ್ ಘೋಷಣೆ 17 ಸಾವಿರ ಕೋಟಿ. ಖರ್ಚು ಮಾಡಿದ್ದು ಬರೀ 328 ಕೋಟಿ

ತೋರಿಸಿದ್ದು ಕಾಮನಬಿಲ್ಲು ಕೈಗೆ ಕೊಟ್ಟಿದ್ದು ತೆಂಗಿನ ಕರಟ

ಕಳೆದ ವರ್ಷ ಬಿಜೆಪಿ ಸರ್ಕಾರದ ಬಜೆಟ್ ಮಂಡನೆಯಾಗುವಾಗ ಆಗಿನ ಮುಖ್ಯ ಮಂತ್ರಿ ಡಾ.ಬಿಎಸ್. ಯಡಿಯೂರಪ್ಪನವರು ಇಂತಹ ಬಜೆಟ್ ದೇಶದಲ್ಲೇ ಎಲ್ಲೂ ಇಲ್ಲ, ಪ್ರತ್ಯೇಕವಾಗಿ ಕೃಷಿ ಬಜೆಟ್ಟನ್ನು ಮಂಡಿಸುತ್ತಿರುವುದು ದೇಶದಲ್ಲೇ ಇದೇ ಪ್ರಪ್ರಥಮ ಎಂದು ಬೊಬ್ಬೆ ಹೊಡೆದರು. 17 ಸಾವಿರ ಕೋಟಿ ರೂಪಾಯಿ ಮೀರಿದ ಪ್ರತ್ಯೇಕ ಕೃಷಿ ಬಜೆಟ್ ನಮ್ಮದು ಎಂದು ಬೋರಿಟ್ಟರು. ಬಿಜೆಪಿ ಸರ್ಕಾರದ ಮತ್ತು ಪಕ್ಷ ಇತರ ಮುಖಂಡರೂ ಅದನ್ನೇ ಹೇಳುತ್ತಾ ಊಳಿಟ್ಟರು.

ಈಗ ಬಜೆಪಿ ಸರ್ಕಾರ ಮತ್ತೊಂದು ಬಜೆಟ್ ಮಂಡಿಸುವ ಕಾಲ ಬರುತ್ತಿದೆ. ಕಳೆದ ವರ್ಷ ಮಂಡಿಸಿದ ಬಜೆಟ್‌ನಲ್ಲಿ ಜಾರಿಯಾಗಿದ್ದೆಷ್ಟು, ಜಾರಿಯಾಗದೇ ಜಾರಿ ಹೋಗಿದ್ದೆಷ್ಟು ? ಅಂತ ನೋಡಿದರೆ ನಿಮಗೆ ಆಘಾತವಾದೀತು. ನೀರಾವರಿ ಯೋಜನೆಗಳಿಗೆ 1785.7 ಕೋಟಿ.., ಸುವರ್ಣ ಭೂಮಿ ಯೋಜನೆಗೆ 1 ಸಾವಿರ ಕೋಟಿ.., ನೀರಾವರಿ ಪಂಪ್‌ಸೆಟ್‌ಗಳಿಗೆ ಗುಣಮಟ್ಟದ ವಿದ್ಯುತ್ ನೀಡಲು 3,900 ಕೋಟಿ.., ಕೆರೆಗಳ ಪುನರುಜ್ಜೀವನಕ್ಕೆ 1 ಸಾವಿರ ಕೋಟಿ...ಹೀಗೆ ಒಟ್ಟು 17.000 ಕೋಟಿ ರೂಪಾಯಿಗಳ ಬಾರಿ ಕೃಷಿ ಬಜೆಟ್ಟನ್ನೇ ಮಂಡಿಸಲಾಗಿತ್ತು.

[illegible] ನಂತರ ಈಗ ತಿಳಿದು [illegible] 17 ಸಾವಿರ ಬಜೆಟ್‌ನಲ್ಲಿ ಖರ್ಚು [illegible] ಕೋಟಿ.

[illegible]

'ವಾರಸುದಾರ'ರ ನಿಜ ಬಣ್ಣ

ಪುಟ 5 ರಿಂದ.......

ವಾರಸುದಾರತ್ವದ ಮುಖವಾಡದ ನಿಜ ಸ್ವರೂಪ ಈ ದೇಶದ ಹೆಮ್ಮೆಯ ಬಹುಮುಖಿ ಸಂಸ್ಕೃತಿಯನ್ನು ನಾಶಮಾಡಲು ಪಣತೊಟ್ಟು ಈ ದೇಶದಲ್ಲಿ ಏಕಮುಖಿ ಸಂಸ್ಕೃತಿಯನ್ನು ಹೇರಲು ಈ ದೇಶದಲ್ಲಿ ರಕ್ತಪಾತ ಹರಿಯಬಿಟ್ಟದ್ದು. ಸಾವಿರಾರು ಮುಗ್ಧ ಜೀವಿಗಳನ್ನು ಇವರ ದೇಶಭಕ್ತಿ, ಸಂಸ್ಕೃತಿ ರಕ್ಷಣೆಯ ಮುಖವಾಡದ ಕೋಮುವಾದಿ ರಾಜಕೀಯ ಬಲಿ ತೆಗೆದು ಕೊಂಡಿತು. ತನ್ನ ಸಂಸ್ಕೃತಿಯೇ ಶ್ರೇಷ್ಠವೆಂದು ಹೇಳಿ ಇತರರ ಸಂಸ್ಕೃತಿಗಳನ್ನು ಅವಹೇಳನ ಮಾಡಿ, ಆ ಸಂಸ್ಕೃತಿಗಳ ಬಗ್ಗೆ ದೇಶದ ಬಹು ಸಂಖ್ಯಾತ ಜನರಲ್ಲಿ ದ್ವೇಷ ಹುಟ್ಟಿಸುವ ನೀಚ ಕೆಲಸಕ್ಕೆ ಕೈ ಹಾಕಿ ಅನ್ಯ ಸಂಸ್ಕೃತಿಯ ಜನರನ್ನು ನಮ್ಮ 'ಶತ್ರು'ಗಳನ್ನಾಗಿ ಬಿಂಬಿಸಿದ್ದೇ ದೇಶಕ್ಕೆ ಇವರ ಅಮೋಘ 'ಕೊಡುಗೆ'. ಈ ರಾಜಕೀಯವು ಜನಾಂಗೀಯ ದ್ವೇಷವನ್ನು ಹುಟ್ಟಿಹಾಕಿ ಭಯೋತ್ಪಾದನೆಗೆ ಮುನ್ನುಡಿ ಹಾಡಿತು. ಇದರಿಂದಾಗಿ ಭಯೋತ್ಪಾದನೆಯು ಈ ದೇಶದ ನೆಮ್ಮದಿಗೆ ಆತಂಕ ತಂದು "ಗಂಡಾಂತರಕಾರಿಯಾಗಿ ಬೆಳೆದಿದೆ. ಈಗ ಇದೇ 'ಸಂಸ್ಕೃತಿ'ಯನ್ನು ವ್ಯಾಪಾರಕ್ಕೆ ಇಡಲಾಗಿದೆ. ಇಡೀ ದೇಶದಲ್ಲಿ ಶಿಕ್ಷಣವನ್ನು ಖಾಸಗೀಕರಣ ಮಾಡುವುದರ ಮುಖಾಂತರ ಶಿಕ್ಷಣವನ್ನು ಉಳ್ಳವರ ಸ್ವತ್ತಾಗಿ ಮಾರ್ಪಾಟು ಮಾಡಿ ವ್ಯಾಪಾರದ ಸರಕನ್ನಾಗಿ ಮಾರ್ಪಾಟು ಮಾಡಿಲಾಯಿತು. ಇತ್ತೀಚೆಗೆ ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳನ್ನು ಮುಚ್ಚುವ ತೀರ್ಮಾನ ಮಾಡಿ ಆದೇಶ ಹೊರಡಿಸಿದೆ. ಇದಕ್ಕೆ ಇವರು ಕೊಟ್ಟ ಉತ್ತರ ಮತ್ತು ಸಮರ್ಥನೆ- ಇವುಗಳಲ್ಲಿ ಹಾಜರಾತಿ ಕಡಿಮೆ ಅಗಿದೆ ಎಂಬುದು. ಈ 'ಅನುಪಯುಕ್ತ ಶಾಲೆ'ಗಳನ್ನು ನಡೆಸುವುದು ಸರ್ಕಾರಕ್ಕೆ ಆರ್ಥಿಕ ಹೊರೆ ಆಗುತ್ತದೆ-ಎಂದು. ಅಂದರೆ ಇಲ್ಲಿ ಲಾಭ ನಷ್ಟಗಳ ವ್ಯಾಪಾರಿ ದೃಷ್ಟಿ ಹಾಗಾಗಿ ಶಿಕ್ಷಣ ಲಾಭದಾಯಕ ಅಲ್ಲವೆಂಬ ನೆಪವಿಟ್ಟು ಶಿಕ್ಷಣವನ್ನು ಖಾಸಗಿಯವರಿಗೆ ಮಾರಾಟಕ್ಕೆ ಇಡಲಾಗಿದೆ. ಸಂಘ ಪರಿವಾರವು 'ಜ್ಞಾನ' ಪವಿತ್ರವಾದದ್ದೆಂದು, 'ಜ್ಞಾನಿ'ಗಳು ಹುಟ್ಟು ಹಾಕಿದ ಸಂಸ್ಕೃತಿಯೇ ನಮ್ಮ ಭವ್ಯ ಪರಂಪರೆಯೆಂದು ಹೇಳುತ್ತಲೇ ಈ ಜ್ಞಾನವನ್ನು ಹೆಚ್ಚಿಸುವ ಶಿಕ್ಷಣವನ್ನು ವ್ಯಾಪಾರಕ್ಕೆ ಇಟ್ಟು ಬಿಟ್ಟಿತು. ಈಗ ರಾಜ್ಯಕ್ಕೆ ಆದಾಯ ಬರುತ್ತೆ ವಿದೇಶೀಯ ವಿನಿಮಯದಿಂದಾಗಿ ಡಾಲರ್‌ಗಳು ಹರಿದು ಬರುತ್ತದೆಂದು ಪ್ರವಾಸೋದ್ಯಮದ ಹೆಸರಿನಲ್ಲಿ ಸಂಸ್ಕೃತಿಯನ್ನು ವ್ಯಾಪಾರಕ್ಕೆ ಇಟ್ಟಿದ್ದಾರೆ. ಸಂಘ ಪರಿವಾರದ ನಯವಂಚಕತನದ ಕ್ರೂರ ಮುಖಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ?

ಇನ್ನು 7/02/2012 ರಂದು ಸದನದಲ್ಲಿ ಈ ರಾಜ್ಯದ ಮಂತ್ರಿ ಬ್ಲೂ ಫಿಲಂ ನೋಡುತ್ತಿದ್ದುದು ಪ್ರಸಾರ ಮಾಧ್ಯಮಗಳ ಮುಖಾಂತರ ಬಿತ್ತರಿಸಿದಾಗ ಇಡೀ ರಾಜ್ಯದ ಜನತೆ ಬೆಚ್ಚಿಬಿದ್ದರು. ಈ ನಾಚಿಕೆಗೇಡಿನ ಘಟನೆಯಲ್ಲಿ ಮೂರು ಜನ ಮಂತ್ರಿಗಳು ಭಾಗಿಯಾಗಿದ್ದಾರೆ. ಆದರೆ ಬಿಜೆಪಿ ಎಂಬ 'ಶ್ರೀರಾಮ'ನ ಹೆಸರು ಹೇಳುವ ಪಕ್ಷ ಯಾವ ಕ್ರಮವನ್ನು ಇದುವರೆವಿಗೂ ತೆಗೆದು ಕೊಂಡಿಲ್ಲ. ಇಂತಹ ಲಜ್ಜೆಗೇಡಿ ಭಂಡ ಪಕ್ಷ ಈ ಬಿಜೆಪಿ. ಇದು ಇಡೀ ದೇಶವನ್ನೇ ಮಾರಾಟಕ್ಕೆ ಇಟ್ಟಿದೆ. ಇದು ಇವರಿಗೇನು ಹೊಸದಲ್ಲ. ಹಿಂದೆ ರೇಣುಕಾಚಾರ್ಯವೆಂಬ ಒಬ್ಬ ಲಂಪಟ ಯಾರೋ ಒಬ್ಬ ಹೆಣ್ಣು ಮಗಳ ಜೊತೆ ಸರಸವಾಡುತ್ತಿದ್ದ ದೃಶ್ಯಗಳನ್ನು ಇದೇ ಮಾಧ್ಯಮಗಳು ಪ್ರಸಾರ ಮಾಡಿದ್ದವು. ಆಗ ಬರೀ ಶಾಸಕನಾಗಿದ್ದವನನ್ನು ನಂತರ ಕ್ಯಾಬಿನೆಟ್ ಮಂತ್ರಿಯನ್ನಾಗಿ ಮಾಡಿದ್ದು ಇದೇ 'ಶ್ರೀರಾಮ'ನ ಹೆಸರು ಹೇಳುವ ಪಕ್ಷವಾದ ಬಿಜೆಪಿ. ಸಂಘಪರಿವಾರ ಮತ್ತು ಅದರ ರಾಜಕೀಯ ಮುಖವಾಡವಾದ ಬಿಜೆಪಿ ಈ ದೇಶಕ್ಕೆ ಬಹಳ ಮುಖ್ಯವಾಗಿ ನಮ್ಮ ರಾಜ್ಯಕ್ಕೆ ಒಂದು ಅಪಮಾನವೇ ಸರಿ. ಇಂತಹ ಅವಮಾನಕ್ಕೆ ಬೆಂಬಲ ಕೊಡುತ್ತಿರುವ ಈ ರಾಜ್ಯದ ಹಲವು ಮಠಾದೀಶರುಗಳು ಇನ್ನೊಂದು ಅವಮಾನ. ನಂದಿಕೂರು ಶಾಖೋತ್ಪನ್ನ ಸ್ಥಾವರಕ್ಕೆ ವಿರೋಧ ವ್ಯಕ್ತಪಡಿಸಿ ಉಪವಾಸ ಸತ್ಯಾಗ್ರಹ ಮಾಡುತ್ತಾರೆ ಪವಿತ್ರ ಉಡುಪಿ ವಾಸಿ ಜಗತ್ ಗುರುಗಳು! ಜಗತ್ ಗುರುಗಳಾದ ಶ್ರೀ ಶ್ರೀ ಪೇಜಾವರ ಶ್ರೀಗಳು ತನ್ನ ಮೂಗಿನ ಕೆಳಗೆ ಇರುವ ಸೇಂಟ್ ಮ್ಯಾರಿ ಐಲ್ಯಾಂಡ್‌ನಲ್ಲಿ ನಡೆದ ಈ ಘಟನೆಯನ್ನು ಏಕೆ ಪ್ರತಿಭಟಿಸಲಿಲ್ಲ? ಏಕೆ ಉಪವಾಸ ಕೂರಲಿಲ್ಲ? ಇದು ಇವರು ಉಪಾಧ್ಯಾಕ್ಷರಾಗಿರುವ ವಿಶ್ವ ಹಿಂದೂ ಪರಿಷತ್ತಿನ ನೀತಿಯೇ ? ಅಥವಾ ಅದರ ಸಂಸ್ಕೃತಿಯೇ ?

ಪಠ್ಯಪುಸ್ತಕಗಳ ಪರಿಷ್ಕರಣೆ ಹೆಸರಲ್ಲಿ ಶಿಕ್ಷಣದ ಕೇಸರೀಕರಣದ ಹುನ್ನಾರದ ವಿರುದ್ಧ ಎಸ್.ಎಫ್.ಐ. ಪ್ರತಿಭಟನೆ

ಶಾಲಾ ಪಠ್ಯಕ್ರಮದ ಪರಿಷ್ಕರಣೆ ಹೆಸರಲ್ಲಿ ಕರ್ನಾಟಕ ರಾಜ್ಯದ ಬಿಜೆಪಿ ಸರಕಾರ ಐದು ಮತ್ತು ಎಂಟನೆ ತರಗತಿಯ ಶಾಲಾ ಪಠ್ಯಕ್ರಮಗಳಲ್ಲಿ ಕೇಸರಿಕರಣದ ಅಂಶಗಳನ್ನು ಸೇರಿಸುತ್ತಿದೆ. ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆ ಮತ್ತು ಶೈಕ್ಷಣಿಕ ಬೆಳವಣಿಗೆಗೆ ಅನುಕೂಲಕರವಾದ ವಾತಾವರಣವನ್ನು ಸೃಷ್ಟಿಸುವ ಬದಲಾಗಿ ಪಠ್ಯ ಪುಸ್ತಕಗಳ ಪರಿಷ್ಕರಣೆ ಮೂಲಕ ಇಡೀ ಶಿಕ್ಷಣ ಕ್ಷೇತ್ರವನ್ನು ಕೇಸರಿಕರಣ ಮಾಡಲು ಹೊರಟಿರುವ ಸರಕಾರದ ನಿಲುವನ್ನು ಖಂಡಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಸಂಘಟನೆಯ ಕಾರ್ಯಕರ್ತರು ಬೆಂಗಳೂರಿನ ಮೈಸೂರ್ ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ರಾಜ್ಯ ಸರಕಾರ National Council for Education Research and Training(NCERT) ಯ ನಿರ್ದೇಶನದ ನೆಪ ಮಾಡಿಕೊಂಡು ಪುರೋಹಿತ ಶಾಹಿ ವಿಚಾರಗಳನ್ನು ಪಠ್ಯಗಳಲ್ಲಿ ತುರುಕಲು ಮುಂದಾಗಿದೆ, ಸಂಘ ಪರಿವಾರದ ಹಿನ್ನೆಲೆ ಇರುವವರನ್ನು ಪಠ್ಯ ಪುಸ್ತಕ ರಚನಾ ಸಮಿತಿಯಲ್ಲಿ ಸೇರಿಸಲಾಗಿದೆ. ಬ್ರಾಹ್ಮಣ್ಯವನ್ನು ವೈಭವಿಕರಿಸಿ, ಶೂದ್ರರು, ಹಿಂದುಳಿದವರೆಲ್ಲರೂ ಕನಿಷ್ಠರು ಎನ್ನುವದನ್ನು ಮತ್ತು ಅಲ್ಪ ಸಂಖ್ಯಾತರ ವಿರುದ್ಧ ಮೇಲ್ಜಾತಿಯವರನ್ನು ಹಾಗೂ ಬಹು ಸಂಖ್ಯಾತರನ್ನು ಎತ್ತಿ ಕಟ್ಟುವ ಜೀವ ವಿರೋಧಿ ಅಂಶಗಳನ್ನು ಪಠ್ಯಗಳಲ್ಲಿ ತುರುಕಲಾಗುತ್ತಿದೆ. ಈ ಮೂಲಕ ಎಳೆಯ ಮಕ್ಕಳ ಮನಸಿನಲ್ಲಿ ಕೋಮುವಾದಿ-ಜಾತಿವಾದಿ ವಿಷಬೀಜ ಬಿತ್ತಲು ಹವಣಿಸುತ್ತಿದೆ. ಸ್ಥಳೀಯ ಸಂಸ್ಕೃತಿಯ ಹೆಸರಿನಲ್ಲಿ ದಲಿತ, ಶೂದ್ರ, ಬುಡಕಟ್ಟು ಹಾಗೂ ದುಡಿಯುವ ಸಂಸ್ಕೃತಿಗಳನ್ನು ಕಡೆಗಣಿಸಿ ಉಗ್ರ ಹಿಂದುತ್ವದ ಪ್ರತಿಪಾದನೆಗೆ ಯತ್ನಿಸುತ್ತಿದೆ.



ಜಾತಿ-ಧರ್ಮ-ಭಾಷೆ- ಪ್ರದೇಶದ ಸಂಕುಚಿತತೆಯನ್ನು ಮೀರಿ ವಿಶಾಲತೆಯತ್ತ ವಿದ್ಯಾರ್ಥಿಗಳು ತೆರೆದುಕೊಳ್ಳುವಂತೆ ಪಠ್ಯಪುಸ್ತಕಗಳು ರೂಪಗೊಳ್ಳಬೇಕು. ವೈಜ್ಞಾನಿಕ ವೈಚಾರಿಕ- ಪ್ರಗತಿಪರ ಚಿಂತನೆಗಳನ್ನು ಪಠ್ಯಪುಸ್ತಕಗಳಿಂದ ತೆಗೆದು ಹಾಕುವ ಪ್ರಯತ್ನ ನಡೆದಿದೆ. ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಾ ಬಂದಿರುವ ಪ್ರಗತಿಪರರ, ಶಿಕ್ಷಣ ತಜ್ಞರ, ಚಿಂತಕರ, ಮಕ್ಕಳ ತಜ್ಞರ ಹಾಗೂ ಸಾರ್ವಜನಿಕರ ಅಭಿಪ್ರಾಯಗಳನ್ನು ಆಹ್ವಾನಿಸದೆ ಸಂಘಪರಿವಾರದ ಹಿಡನ್ ಅಜೆಂಡಾವನ್ನು ಸೇರಿಸಲು ಹೊರಟಿದೆ. ಸಂಪೂರ್ಣ ಕೇಸರಿಕರಣದಿಂದ ತುಂಬಿರುವ ಪಠ್ಯಪುಸ್ತಕಗಳನ್ನು ರದ್ದು ಪಡಿಸಬೇಕೆಂದು ಎಸ್.ಎಫ್.ಐ. ಒತ್ತಾಯಿಸುತ್ತದೆ. ಈ ಪಠ್ಯಪುಸ್ತಕ ರಚನಾ ಸಮಿತಿಯು ಸಂವಿಧಾನದ ಮೌಲ್ಯಗಳ ಉಳಿವಿಗಾಗಿ ಕಾರ್ಯ ನಿರ್ವಹಿಸುವುದರ ಬದಲಾಗಿ ಸಂಘಪರಿವಾರದ 'ಕೇಶವಕೃಪ'ದ ನಿರ್ದೇಶನದಂತೆ ನಡೆದುಕೊಂಡಿರುವುದು ಸ್ಪಷ್ಟವಾಗಿದೆ.

ಎಲ್ಲಾ ರಂಗದ ರಾಷ್ಟ್ರೀಕರಣದ ಬದಲಾಗಿ ಖಾಸಗೀಕರಣವನ್ನು ಉತ್ತೇಜಿಸುವ ಅಂಶಗಳಿವೆ. ಬಂಡವಾಳ ಶಾಹಿಗಳ, ಸಾಮ್ರಾಜ್ಯಶಾಹಿಗಳಿಗೆ ಪೂರಕವಾದ ಅಂಶಗಳನ್ನು ಹೇರಲಾಗುತ್ತಿದೆ. ಆದ್ದರಿಂದ ಶಿಕ್ಷಣದ ಕೇಸರೀಕರಣವನ್ನು ಸಮರ್ಥಿಸಿಕೊಂಡು ಅವಿವೇಕದ ಹೇಳಿಕೆಗಳನ್ನು ನೀಡುತ್ತಿರುವ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಕೇಸರೀಕರಣದ ಅಂಶಗಳಿರುವ ಪಠ್ಯಪುಸ್ತಕಗಳನ್ನು ತಕ್ಷಣ ರದ್ದುಗೊಳಿಸಲು ಮುಂದಾಗಬೇಕು. ಇಲ್ಲದಿದ್ದಲ್ಲಿ ರಾಜ್ಯವ್ಯಾಪಿ ಪ್ರಬಲ ಹೋರಾಟ ನಡೆಸಬೇಕಾಗುತ್ತದೆಂದು ಎಸ್.ಎಫ್.ಐ. ಎಚ್ಚರಿಸುತ್ತಿದೆ.

ಸಂಪಾದಕೀಯ

ಪುಟ 3 ರಿಂದ

ಸಾಂಸ್ಕೃತಿಕವಾಗಿಯೂ ಅದಃಪತನದ ನೀತಿಗಳನ್ನೇ ವಾಸ್ತವದಲ್ಲಿ ಜಾರಿಗೆ ತರಲು ಯತ್ನಿಸುತ್ತದೆ. ಇಂತಹ ಕೃತ್ಯಗಳು, ಅಂತಹ ಅರಾಜಕತೆ ವಾತಾವರಣ ಸೃಷ್ಟಿಸಿ, ಪ್ರಜಾಪ್ರಭುತ್ವ ವ್ಯವಸ್ಥೆ, ಸಂಸದೀಯ ರಾಜಕಾರಣದ ಬಗ್ಗೆಯೇ ತಿರಸ್ಕಾರ ಮೂಡುವಂತೆ ಮಾಡಿದಾಗಲೇ ಹಿಂದುತ್ವದ ಫ್ಯಾಶಿಸ್ಟ್ ಮಾದರಿಯ ಸರ್ವಾಧಿಕಾರದತ್ತ ಜನರನ್ನು ತಳ್ಳಲು ಸಾಧ್ಯವೆಂದು ಬಗೆದಿದೆ. ಹೀಗಾಗಿ ಅನೈತಿಕತೆ,ಸರ್ವ ಭ್ರಷ್ಟತೆ ಅದರ ಜೀವಾಳವಾಗಿದೆ. ಇಂತಹದುಷ್ಟಶಕ್ತಿಗಳನ್ನು ಎದುರಿಸಲೇ ಬೇಕು. ಇಷ್ಟೆಲ್ಲಾ ಹೊರಬಂದ ಮೇಲೆ ಸಚಿವರಿಂದ ರಾಜೀನಾಮೆ ಪಡೆದಿರುವುದು ಒಂದು ನಾಟಕದ ಆರಂಭದಂತೆ ಕಾಣುತ್ತಿದೆ. ಐದು ರಾಜ್ಯಗಳ ಚುನಾವಣೆಯಲ್ಲಿ ಬೀರಬಹುದಾದ ಪರಿಣಾಮದಿಂದ ಮಾತ್ರ ಹೈಕಮಾಂಡ್ ಹೀಗೆ ಸೂಚಿಸಿದೆ. ಸ್ಪಷ್ಟ ದಾಖಲೆಗಳು ಇರುವಾಗ ಆ ಮೂವರು ಸಚಿವರನ್ನು ಶಾಸಕತ್ವದಿಂದಲೇ ಅನರ್ಹಗೊಳಿಸಿ ಕ್ರಮ ವಹಿಸಬೇಕಾಗಿತ್ತು. ಆದರ ಬದಲಾಗಿ ಕೇವಲ ರಾಜೀನಾಮೆ ಪಡೆದು, ವಿಚಾರಣಾ ಸಮಿತಿ ರಚಿಸಿರುವುದೇ ದುರುದ್ದೇಶವನ್ನು ತೋರಿಸುತ್ತದೆ. ಇದೇ ಹೊತ್ತಿನಲ್ಲಿ ಅವರ ಮೇಲೆ ಕ್ರಮ ಜರುಗಿಸುವ ಪ್ರಶ್ನೆಯೇ ಇಲ್ಲವೆಂದು ಪಕ್ಷಾಧ್ಯಕ್ಷ ಹಾಗೂ ಮುಖ್ಯಮಂತ್ರಿ ಹೇಳುತ್ತಿರುವುದು ಖಂಡನಾರ್ಹವಾಗಿದೆ. ಈ ಹುನ್ನಾರವನ್ನು ಒಕ್ಕೊರಲಿನಿಂದ ವಿರೋಧಿಸಬೇಕು.

ಆದ್ದರಿಂದ ಈ ಸಚಿವರನ್ನು ಶಾಸಕತ್ವದಿಂದಲೇ ಅನರ್ಹಗೊಳಿಸಬೇಕು, ವಿಧಾನಸಭೆಯ ಪ್ರವೇಶವಂತೂ ಕೂಡದು. ಅವರು ಎಸಗಿದ ಹೀನ ಕೃತ್ಯಕ್ಕೆ ರಾಜೀನಾಮೆ ಎಂಬುದು ಪರಿಹಾರವೇ ಅಲ್ಲ. ಆದ್ದರಿಂದ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿ ಬಂಧಿಸಿ ಮುಂದಿನ ಕ್ರಮ ವಹಿಸಬೇಕು.

ಇದರೊಂದಿಗೆ ಬಹಳ ಪ್ರಮುಖವಾಗಿ ಇಡೀ ಬಿಜೆಪಿ ಸರ್ಕಾರವೇ ಆರ್ಥಿಕ, ಸಾಮಾಜಿಕ, ತಾತ್ವಿಕ, ನೈತಿಕ ಭ್ರಷ್ಟತನದಿಂದ ಅಧಿಕಾರದಲ್ಲಿದ್ದು ಅದು ಆಳುವ ಹಕ್ಕನ್ನೇ ಕಳೆದುಕೊಂಡಿದೆ .ಆದ್ದರಿಂದ ಕೂಡಲೇ ರಾಜೀನಾಮೆ ಕೊಟ್ಟು ತೊಲಗಬೇಕು. ಇಲ್ಲವಾದಲ್ಲಿ ಈ ಭಂಡ ಸರ್ಕಾರವನ್ನು ಜನತೆ ತೊಲಗಿಸಬೇಕಾಗುತ್ತದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

2ಜಿ: ಹಗರಣವೂ ಅಲ್ಲ, ಆದಾಯ ನಷ್ಟವೂ ಇಲ್ಲ ಎಂದವರಿಗೆ ಬಲವಾದ ಏಟು

ಹಿಂದಿನ ಸಂಚಿಕೆ ಮುದ್ರಣಕ್ಕೆ ಹೋಗುತ್ತಿದ್ದಂತೆ ಲಕ್ಷ ಕೋಟಿ ರೂ.ಗಳ 2ಜಿ ಹಗರಣ ಕುರಿತಂತೆ ಸುಪ್ರಿಂ ಕೋರ್ಟ್ ತೀರ್ಪು ಬಂತು. ಅದು ಯುಪಿಎ-2 ಸರಕಾರದ ವಿರುದ್ಧ ಒಂದು ಬಲವಾದ ತೀರ್ಪು, ಅದರಲ್ಲೂ 2ಜಿ ನೀಡಿಕೆಯಲ್ಲಿ ಯಾವ ನಷ್ಟವೂ ಆಗಿಲ್ಲ ಎನ್ನುತ್ತಾ ಅವನ್ನು ರದ್ದು ಮಾಡಲು ನಿರಾಕರಿಸುತ್ತಿದ್ದ ಪ್ರಸಕ್ತ ದೂರಸಂಪರ್ಕ ಮಂತ್ರಿಗೆ ನೀಡಿದ ಒಂದು ಬಲವಾದ ಏಟು. ಸ್ವತಃ ಸುಪ್ರಿಂ ಕೋರ್ಟ್ ಜನವರಿ 8, 2010ರಂದು ಮತ್ತು ಆನಂತರ 11 ಖಾಸಗಿ ಕಂಪನಗಳಿಗೆ ನೀಡಿದ 122 ಲೈಸೆನ್ಸ್ ಗಳನ್ನು ರದ್ದುಮಾಡಿದೆ; ಎರಡು ತಿಂಗಳೊಳಗೆ 3ಜಿ ತರಂಗಾಂತರ ಹಂಚಿಕೆಯಲ್ಲಿ ಮಾಡಿದಂತೆ, ಹರಾಜು ಪ್ರಕ್ರಿಯೆಯ ಮೂಲಕ 2ಜಿ ತರಂಗಾಂತರವನ್ನು ಹೊಸದಾಗಿ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ ಕೊಡುವ ಶಿಫಾರಸಿನಂತೆ ಹಂಚಬೇಕು ಎಂದು ಸರ್ವೋಚ್ಚ ನ್ಯಾಯಾಲಯ ಆದೇಶ ನೀಡಿದೆ. ಮಾಜಿ ದೂರಸಂಪರ್ಕ ಮಂತ್ರಿಯ ಮೇಲೆ ನ್ಯಾಯಾಲಯ ಮಾಡಿರುವ ಟಿಪ್ಪಣಿಯನ್ನು ಕಂಡ ಮೇಲೆ ಹಾಲೀ ದೂರಸಂಪರ್ಕ ಮಂತ್ರಿ ರಾಜೀನಾಮೆ ಕೊಡಬೇಕು, ಪ್ರಧಾನ ಮಂತ್ರಿಗಳು ಈಗಲಾದರೂ ಮೌನ ಮುರಿಯಬೇಕು ಎಂದು ಸಿಪಿಐ(ಎಂ) ಆಗ್ರಹಿಸಿತು.

ನಿಜ, ದೂರಸಂಪರ್ಕ ಮಂತ್ರಿಗಳು ರಾಜೀನಾಮೆ ನೀಡಿಲ್ಲ, ಪ್ರಧಾನ ಮಂತ್ರಿಗಳೂ ಬಾಯಿ ತೆರೆಯಲಿಲ್ಲ. ಯುಪಿಎ-2 ಜಾತಕ ತಿಳಿದಿರುವವರಿಗೆ ಅದರಿಂದೇನೂ ಆಶ್ಚರ್ಯವಾಗಿಲ್ಲ. ಸುಪ್ರಿಂ ಕೋರ್ಟಿನ ತೀರ್ಪಿನ ಮರುದಿನ ಸಿಬಿಐ ಕೋರ್ಟ್ ಗೃಹಮಂತ್ರಿಗಳನ್ನು ಈ ಮೊಕದ್ದಮೆಯಲ್ಲಿ ಸಹ-ಆರೋಪಿಯಾಗಿಸಬೇಕೆಂಬ ಅರ್ಜಿಯನ್ನು ವಜಾ ಮಾಡಿದಾಗ 'ಸತ್ಯಕ್ಕೆ ಜಯ ದೊರೆತಿದೆ' ಎಂದ ಹಿರಿಯ ಯುಪಿಎ-2 ಮಂತ್ರಿಗಳು ಸುಪ್ರಿಂ ಕೋರ್ಟಿನ ತೀರ್ಪಿನ ಬಗ್ಗೆ ಚಕಾರವೆತ್ತಿಲ್ಲ. ಆದರೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯೊಬ್ಬರು ಸರಕಾರ ಈ ತೀರ್ಪಿನ ಮರುವಿಮರ್ಶೆಗೆ ಕೇಳಬಹುದು ಎಂದು ಸೂಚನೆ ನೀಡಿದರು. ಕೆಲವು ದೂರಸಂಪರ್ಕ ಕಂಪನಗಳೂ ನ್ಯಾಯಾಲಯದಿಂದ ತೀರ್ಪಿನ ಮರು ವಿಮರ್ಶೆ ಕೇಳಬಹುದು ಎಂದು ಹೇಳಲಾಗುತ್ತಿದೆ. ವಿದೇಶಿ ಕಂಪನಗಳು ತಂತಮ್ಮ ದೇಶಗಳ ಸರಕಾರಗಳ ಮೂಲಕ ರಾಜತಾಂತ್ರಿಕ ಒತ್ತಡಗಳನ್ನು ತರುತ್ತಿವೆ ಎಂದೂ ಹೇಳಲಾಗುತ್ತಿದೆ.

ತಪ್ಪು ಮಾಡಿರುವುದು ಸರಕಾರ, ಅದಕ್ಕೆ ತಮಗೇಕೆ ಶಿಕ್ಷೆ ಎಂಬುದು ಈ ಖಾಸಗೀ ಕಂಪನಗಳ ತರ್ಕ. ಆದರೆ ಈ ಕಂಪನಗಳೇನು ಮುಗ್ಧರಲ್ಲ, ಅದರಲ್ಲೂ ವಿದೇಶಿ ಹೂಡಿಕೆದಾರರು ದುರಾಸೆಯಿಂದಲೋ, ತಮ್ಮ ಪಾಲುದಾರರ ಬಗ್ಗೆ ಅತೀವ ನಂಬಿಕೆಯಿಂದಲೋ ಅಥವ ಈ ದೇಶದಲ್ಲಿ ಏನು ಬೇಕಾದರೂ ಮಾಡಬಹುದು ಎಂಬ 'ವಿಶ್ವಾಸ'ದಿಂದಲೋ, ಅಂತೂ ಕಣ್ಣು ತೆರೆದುಕೊಂಡೇ ಹೊಂಡವನ್ನು ಆರಿಸಿ ಕೊಂಡಿದ್ದರು ಎಂದು ಕೆಲವು ವಿಶ್ಲೇಷಕರು ಹೇಳುತ್ತಾರೆ. ಬಹುಶಃ ಯುಪಿಎ-2 ಸರಕಾರದ ನಿಲುವುಗಳು ಅವರಲ್ಲಿ ಇಂತಹ ಭಂಡತನವನ್ನು ಹುಟ್ಟಿಸಿರಬಹುದು.

ಆದರೆ ಸುಪ್ರಿಂ ಕೋರ್ಟಿನ ತೀರ್ಪು ದೇಶದ ಪ್ರಜಾಪ್ರಭುತ್ವವಾದಿಗಳ ನಿಲುವನ್ನು ಎತ್ತಿ ಹಿಡಿದಿದೆ; ತರಂಗಾಂತರ ಒಂದು ನೈಸರ್ಗಿಕ ಸಂಪನ್ಮೂಲ, ಎಲ್ಲ ನೈಸರ್ಗಿಕ ಸಂಪನ್ಮೂಲಗಳಂತೆ ಅದು ಭಾರತದ ಜನತೆಯ ಸೊತ್ತು, ಸರಕಾರ ಈ ವಿಷಯದಲ್ಲಿ ಜನತೆಯ ಟ್ರಸ್ಟಿಯಂತೆ ವರ್ತಿಸಬೇಕು, ನೈಸರ್ಗಿಕ ಸಂಪನ್ಮೂಲಗಳನ್ನು ದೇಶದ ಹಿತಾಸಕ್ತಿಯಿಂದ ಬಳಸಬೇಕು, ಖಾಸಗಿ ಹಿತದೃಷ್ಟಿಯಿಂದಲ್ಲ, ಇದು ಸರಕಾರ ಗಂಭೀರವಾಗಿ ಪರಿಗಣಿಸಬೇಕಾದ ಕರ್ತವ್ಯ ಎಂದು ಸ್ಪಷ್ಟವಾಗಿ ಹೇಳಿದೆ.



ಕೃಪೆ : ದಿ ಹಿಂದೂ



ವೇದರಾಜ ಎನ್.ಕೆ.

ಜಿಡಿಪಿ ಬೆಳವಣಿಗೆ ದರ ಶೇ.7 ಕೂಡಾ ಇಲ್ಲ

ಕೇಂದ್ರೀಯ ಸಾಂಖ್ಯಿಕ ಕಚೇರಿ(ಸಿಎಸ್‌ಒ) ಭಾರತದ ಆರ್ಥಿಕವನ್ನು ಕುರಿತಂತೆ 2011-12ರ ಮುಂಗಡ ಅಂಕಿ-ಅಂಶಗಳನ್ನು ಬಿಡುಗಡೆ ಮಾಡಿದೆ. ಇವುಗಳ ಪ್ರಕಾರ ಭಾರತದ ನವ್ವಳ ಆಂತರಿಕ ಉತ್ಪನ್ನ(ಜಿಡಿಪಿ)ದ ಬೆಳವಣಿಗೆ ದರ 6.9ಶೇ.ಕ್ಕೆ ಇಳಿದಿದೆ. ಕಳೆದ ವರ್ಷ ಇದು 8.4 ಶೇ.ಇತ್ತು. ಇದು ಕೆಳಗಿಳಿಯುವ ಸಂದೇಹ ಈಗಾಗಲೇ ಇತ್ತು. ಆದರೆ 7ಸ ಶೇ.ಕ್ಕಿಂತ ಹೆಚ್ಚಿರುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಇದರಿಂದಾಗಿ ಯುಪಿಎ-2 ಹಣಕಾಸು ಮಂತ್ರಿಗಳಿಗೆ ನಿರಾಸೆಯಾಗಿದೆಯಂತೆ. ಮುಖ್ಯವಾಗಿ ಕೃಷಿ ಬೆಳವಣಿಗೆ ದರ 7ಶೇ.ದಿಂದ 2.5ಶೇ.ಕ್ಕೆ ಇಳಿದಿದೆ, ಕೈಗಾರಿಕಾ ಉತ್ಪನ್ನಗಳ ಬೆಳವಣಿಗೆ ದರ 7.6ಶೇ.ದಿಂದ 3.9ಶೇ.ಕ್ಕೆ ಇಳಿದಿದೆ, ಕಳೆದ ವರ್ಷ 5 ಶೇ. ಬೆಳವಣಿಗೆ ದಾಖಲಿಸಿದ್ದ ಗಣಿಗಾರಿಕೆಯಲ್ಲಂತೂ ಈ ಬಾರಿ ಬೆಳವಣಿಗೆ ಕಂಡಿಲ್ಲ ಮಾತ್ರವಲ್ಲ, ಅದು ಇಳಿದಿದೆ, -2.2ಶೇ. ದಾಖಲಿಸಿದೆ. ವಾಸ್ತವವಾಗಿ ಜಿಡಿಪಿ ಬೆಳವಣಿಗೆ ದರ ಆರ್ಥಿಕ ಬೆಳವಣಿಗೆಯ ನಿಜವಾದ ಚಿತ್ರಣವನ್ನು ಕೊಡುವುದಿಲ್ಲ, ವಿಶೇಷವಾಗಿ, ಆರ್ಥಿಕ ಧೋರಣೆಗಳು ಸಮಾಜದಲ್ಲಿ ಬೆಳೆಸುತ್ತಿರುವ ಅಸಮಾನತೆಗಳನ್ನು, ಆದಾಯಗಳ ಕಂದರವನ್ನು ಅದು ಮರೆಮಾಚುತ್ತದೆ. ಆದರೂ ಯುಪಿಎ-2 ಸರಕಾರದ ಮುಖಂಡರು ಜಿಡಿಪಿ ಬೆಳವಣಿಗೆಯ ದರ ತಮ್ಮ ಯಶಸ್ಸಿನ ದ್ಯೋತಕ ಎಂಬಂತೆ ಡಂಗುರ ಸಾರುತ್ತಾ ಬರುತ್ತಿದ್ದಾರೆ. ಈಗ ಅದೂ ಅವರಿಗೆ ಕೈಕೊಟ್ಟಿರುವುದು ಸಹಜವಾಗಿ ನಿರಾಸೆ ತಂದಿದೆ. ಆದರೆ ಜನಸಾಮಾನ್ಯರ ಬದುಕಿನ ಮಟ್ಟವನ್ನು ಹೆಚ್ಚಿಸಲಾರದ ಬೆಳವಣಿಗೆ ಬಹಳ ದಿನ ಈ ಜಿಡಿಪಿ ಬೆಳವಣಿಗೆ ದರವನ್ನು ಉಳಿಸಿಕೊಳ್ಳಲಾರದು ಎಂಬುದರ ಅರಿವಿದ್ದವರಿಗೆ ಇದರಿಂದ ಆಶ್ಚರ್ಯವೇನೂ ಆಗಿಲ್ಲ.

ಮತ್ತೊಂದು ಮುಕ್ತ ವ್ಯಾಪಾರ ಒಪ್ಪಂದ ದೇಶದ ಹಿತಾಸಕ್ತಿಗಳಿಗೆ ಮತ್ತೊಂದು ಬೆದರಿಕೆ

ಫೆಬ್ರವರಿ 10ರಂದು ಭಾರತ - ಯುರೋಪಿಯನ್ ಸಂಘದ ಶೃಂಗ ಸಭೆ ನಡೆಯಲಿದ್ದು, ಅದರಲ್ಲಿ ಮುಕ್ತ ವ್ಯಾಪಾರ ಒಪ್ಪಂದ(ಎಫ್‌ಟಿಎ)ದ ರೂಪುರೇಷೆಗಳನ್ನು ಅಂತಿಮಗೊಳಿಸಲಾಗುವುದು ಎನ್ನಲಾಗುತ್ತಿದೆ. ಆದರೆ ಈ ಶೃಂಗ ಸಭೆಗೆ ಪೂರ್ವಭಾವಿ ಸಿದ್ಧತೆಗಳು ನಡೆದಿರುವ ರೀತಿ ಈ ಒಪ್ಪಂದವೂ ಭಾರತ-ಆಸಿಯಾನ್ ಎಫ್‌ಟಿಎ ದಂತೆ ದೇಶೀ ಉತ್ಪಾದಕರ ಹಿತಾಸಕ್ತಿಗಳನ್ನು ಕಡೆಗಣಿಸಿ, ಅವರ ಜೀವನಾಧಾರಗಳಿಗೆ ಧಕ್ಕೆ ತರುತ್ತದೆಯೇ ಎಂಬ ಆತಂಕವನ್ನು ಉಂಟು ಮಾಡಿದೆ.

ಯುರೋಪಿಯನ್ ಸಂಘದೊಂದಿಗೆ ಈ ಎಫ್‌ಟಿಎ ಕೃಷಿ, ಕೈಗಾರಿಕಾ ಸರಕುಗಳು, ಸೇವೆಗಳು, ಬೌದ್ಧಿಕ ಆಸ್ತಿ ಹಕ್ಕುಗಳು, ಹೂಡಿಕೆಗಳು ಮತ್ತು ಸರಕಾರೀ ಖರೀದಿಗಳು ಮುಂತಾದ ವಿವಿಧ ವಲಯಗಳಿಗೆ ವ್ಯಾಪಿಸಿದೆ ಮತ್ತು ಯುರೋಪಿಯನ್ ಸಂಘ ಸುಮಾರು 90% ವ್ಯಾಪಾರದಲ್ಲಿ ಸುಂಕದರಗಳನ್ನು ಇಳಿಸಬೇಕು ಎಂದು ಒತ್ತಾಯಿಸುತ್ತಿದೆ. ನವ-ಉದಾರವಾದವನ್ನು ಆಲಿಂಗಿಸಿಕೊಂಡಿರುವ ಯುಪಿಎ-2 ಸರಕಾರ ನೀಡಬಹುದಾದ ರಿಯಾಯ್ತಿಗಳು ದೇಶದೊಳಗೆ ದೊಡ್ಡ ಸಂಖ್ಯೆಯ ಜನಗಳ ಜೀವನಾಧಾರಗಳನ್ನು ತಟ್ಟಬಹುದು ಎಂಬ ಸಂದೇಹಗಳಿವೆ. ಉದಾಹರಣೆಗೆ, ಅವರು ಹೈನು ಉತ್ಪನ್ನಗಳು, ಸಂಸ್ಕರಿತ ಕೃಷಿ ಉತ್ಪನ್ನಗಳು ಮುಂತಾದ ಮಾರುಕಟ್ಟೆಗಳ ಮೇಲೆ ಕಣ್ಣಿಟ್ಟಿದ್ದಾರೆ, ಅವರ ಸರಕಾರಗಳಿಂದ ಭಾರೀ ಸಬ್ಸಿಡಿ ಪಡೆಯುತ್ತಿರುವ ಈ ಉತ್ಪನ್ನಗಳು ಭಾರತಕ್ಕೆ ಬರಲು ಅವಕಾಶವಾದರೆ, ಇವನ್ನು ಉತ್ಪಾದಿಸುವ ನಮ್ಮ ದೇಶದ ಉತ್ಪಾದಕರ ಜೀವನಾಧಾರಗಳಿಗೆ ಸಂಚಕಾರ ಬರಬಹುದು ಎಂಬ ಆತಂಕ ಸಹಜವಾಗಿಯೇ ಎದ್ದಿದೆ. ಭಾರತದಲ್ಲಿ ಕಾರುಗಳನ್ನು ತಯಾರಿಸಲು ಹಣ ಹೂಡಿಕೆ ಮಾಡಿರುವ ವಿದೇಶಿ ಕಂಪನಗಳವರೂ ಆತಂಕಿತರಾಗಿದ್ದಾರೆ! ಇಲ್ಲಿ ಒಂದು ರೂಪಾಯಿಯನ್ನೂ ಹೂಡಿಕೆ ಮಾಡದೆ, ಜರ್ಮನರು ತಮ್ಮ ಕಾರುಗಳನ್ನು ಇಲ್ಲಿ ಕಡಿಮೆ ಬೆಲೆಗಳಿಗೆ ಮಾರಲು ಅವಕಾಶವಾಗಿ ಇಲ್ಲಿನ ಮೋಟಾರು ತಯಾರಿಕಾ ಉದ್ದಿಮೆಗೆ ಹಾನಿ ಸಂಭವಿಸಬಹುದು ಎಂಬುದು ಅವರ ಆತಂಕವಾದರೆ, ಇದು ಈ ಉದ್ದಿಮೆಯಲ್ಲಿನ ಉದ್ಯೋಗಾವಕಾಶಗಳನ್ನು ತೀವ್ರವಾಗಿ ಕಡಿತ ಮಾಡಬಹುದೆಂಬ ಭೀತಿ ಇನ್ನೊಂದೆಡೆ.

ಯುಪಿಎ-2 ಸರಕಾರ ಸಂಬಂಧಪಟ್ಟ ಎಲ್ಲ ವಲಯಗಳ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸದೆ ಇಂತಹ ಯಾವ ಒಪ್ಪಂದಕ್ಕೆ ಸಹಿ ಹಾಕಲು ಮುಂದಾಗಬಾರದು, ಈ ಮಾತುಕತೆಗಳ ವರದಿಯನ್ನು ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಪ್ರಸ್ತುತ ಪಡಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆಗ್ರಹಿಸಿದೆ.

ಜಗದಗಲ

ಶರತ್‌ಚಂದ್ರ

ಸಿರಿಯಾ ನಿರ್ಣಯಕ್ಕೆ ಚೀನಾ-ರಶ್ಯ ವಿಟೋ

ಸಿರಿಯಾದಲ್ಲಿ ಲಿಬ್ಯಾ-ಶೈಲಿಯ ಕೈಗೊಂಬೆ ಸರ್ಕಾರ ಸ್ಥಾಪಿಸುವ ಅಮೆರಿಕನ್ ಸಾಮ್ರಾಜ್ಯಶಾಹಿ ಪ್ರಾಜೆಕ್ಟಿಗೆ ವಿಘ್ನಗಳು ಬರುತ್ತಿವೆ. ಲಿಬ್ಯಾದ ಸಂದರ್ಭದಲ್ಲಿ ಆದಂತೆ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ನಿರ್ಣಯ ಮಾಡಿಸಿ ಅದನ್ನು ಹಿಗ್ಗಿಸುತ್ತಾ ಮಿಲಿಟರಿ ಮಧ್ಯಪ್ರವೇಶ ಮಾಡುತ್ತಾ ಕೈಗೊಂಬೆ ಸರ್ಕಾರ ಸ್ಥಾಪಿಸುವ ಹುನ್ನಾರಕ್ಕೆ ತೀವ್ರ ಪ್ರತಿರೊಧ ಬಂದಿದೆ. ಸಿರಿಯಾದ ಅಧ್ಯಕ್ಷ ಬಶಾರ್-ಅಲ್-ಅಸದ್ ರಾಜಿನಾಮೆ ಕೊಡಬೇಕು. ಸರ್ಕಾರಿ ಪೋಲಿಸ್ ಪಡೆಗಳು ಯಾವುದೇ ಕಾರ್ಯಾಚರಣೆ ಕೈಗೊಳ್ಳಬಾರದು ಎಂಬರ್ಥದ ಅಮೆರಿಕನ್ ಪ್ರಾಯೋಜಿತ ನಿರ್ಣಯವನ್ನು ರಶ್ಯ, ಚೀನಾ ವಿರೋಧಿಸಿ ತಮ್ಮ ವಿಟೋ ಬಳಸಿ ತಡೆಯುವ ಚಾರಿತ್ರಿಕ ಕ್ರಮ ಕೈಗೊಂಡಿವೆ. ಈ ಕ್ರಮ 1980 ರ ದಶಕದ ಕೊನೆಯಲ್ಲಿ ಜಾಗತಿಕ ರಾಜಕಾರಣದಲ್ಲಿ ಆರಂಭವಾದ ಒಂದು ಯುಗದ ಕೊನೆ ಎಂದು ಕೆಲವು ವೀಕ್ಷಕರ ಅಭಿಪ್ರಾಯ.

ಆಯಕಟ್ಟಿನ ದೇಶಗಳಲ್ಲಿ ಜನತೆಯ ಮೇಲೆ 'ದಾಳಿ ನಡೆಸುತ್ತಿರುವ ...ಧಿಕಾರಿ' ಸರ್ಕಾರ ಬದಲಾವಣೆಗೆ ...ರಿಕನ್-ನಾಟೋ ಕೂಟ ಮಿಲಿಟರಿ ಮಧ್ಯಪ್ರವೇಶ ಮಾಡುವುದು ಈ ಯುಗದ ಮುಖ್ಯ ಲಕ್ಷಣವಾಗಿತ್ತು. ಇಂತಹ ದೇಶಗಳಲ್ಲಿ 'ಜನತಾ ಹೋರಾಟಗಳಿಗೆ' ಅಪಾರ ಹಣ ಮತ್ತು ಮಿಲಿಟರಿ ಸಹಾಯ ಮಾಡಿ ಆಂತರಿಕ ಯುದ್ಧದ ಸನ್ನಿವೇಶ ಸೃಷ್ಟಿಸುವುದೂ ಆದರಲ್ಲಿ ಸೇರಿತ್ತು. ಇಂತಹ ದೇಶಗಳು ತೈಲ ಮುಂತಾದ ಪ್ರಾಕೃತಿಕ ಸಂಪನ್ಮೂಲ ಅಥವಾ ಮಿಲಿಟರಿ ದೃಷ್ಟಿಯಿಂದ ಆಯಕಟ್ಟಿನವು ಎಂಬುದು ಕೇವಲ ಕಾಕತಾಳೀಯವಲ್ಲ. ಯುಗೋಸ್ಲಾವಿಯ, ಇರಾಕ್, ಲಿಬ್ಯಾಗಳಲ್ಲಿ ಮಾಡಿರುವುದು ಮತ್ತು ಇರಾನ್, ಉತ್ತರ ಕೊರಿಯಾ ಮತ್ತು ಸಿರಿಯಾಗಳಲ್ಲಿ ಮಾಡಲು ಪ್ರಯತ್ನಿಸುತ್ತಿರುವುದು ಇದನ್ನೇ. ಮಿಲಿಟರಿ ಮಧ್ಯಪ್ರವೇಶಕ್ಕೆ ಅನುವು ಮಾಡುವ ಅಥವಾ ಕನಿಷ್ಟ ನೆಪ ಆಗಬಹುದಾದ ನಿರ್ಣಯವನ್ನು ವಿಶ್ವಸಂಸ್ಥೆ ಭದ್ರತಾ ಸಮಿತಿಯಿಂದ ಮಾಡಿಸುವುದು ಮತ್ತು ಇತರ



ದೇಶಗಳು ಅಸಹಾಯಕ ನೋಡುಗರಾಗಿ ಉಳಿದು ಬಿಡುವುದು ಇನ್ನೊಂದು ಮುಖ್ಯ ಲಕ್ಷಣವಾಗಿತ್ತು.

ಈ ಯುಗ ಕೊನೆಗೊಳಿಸಲು ಮತ್ತು ಜಗತ್ತನ್ನು ಪುನಃ ಬಹು-ಧ್ರುವೀಯವಾಗಿಸುವುದಕ್ಕೆ ಈಗ ಸಮಯ ಬಂದಿದೆ ಎಂದು ಚೀನಾ ಮತ್ತು ರಶ್ಯ ನಿರ್ಧರಿಸಿದಂತಿದೆ. ಮುಂಬರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಅಂತರ್‍ರಾಷ್ಟ್ರೀಯವಾಗಿ ರಶ್ಯ ಇನ್ನೂ ಒಂದು 'ಪವರ್' ಎಂದು ಬಿಂಬಿಸುವ ರಾಜಕಿಯ ಅಗತ್ಯವೂ ಪುಟಿನ್ ಅವರಿಗೆ ಇದೆ ಎನ್ನಲಾಗಿದೆ. ಅದು ಏನೇ ಇರಲಿ; ಇದೊಂದು ಮಹತ್ವದ ಬೆಳವಣಿಗೆ. ಇದು ಜಾಗತಿಕ ಅದರಲ್ಲೂ ಯುರೋ ಪ್ರದೇಶದಲ್ಲಿ ತೀವ್ರ ಆರ್ಥಿಕ ಬಿಕ್ಕಟ್ಟು ಮತ್ತು ತೀವ್ರ ಜನತಾ ಹೋರಾಟಗಳಿಂದ ಅಮೆರಿಕ-ನಾಟೋ ಕೂಟ ದುರ್ಬಲವಾಗುತ್ತಿರುವುದನ್ನು ತೋರಿಸುತ್ತಿದೆ. ಆದರೆ ಈ ಕಾರಣಕ್ಕೆ ಸಿರಿಯಾದಲ್ಲಿ ತಮ್ಮ ಕೈಗೊಂಬೆ ಸರ್ಕಾರ ಸ್ಥಾಪಿಸುವ ಪ್ರಾಜೆಕ್ಟು ನಿಲ್ಲುತ್ತದೆ ಎಂದು ಹೇಳುವಂತಿಲ್ಲ. ಭದ್ರತಾ ಸಮಿತಿಯ ನಿರ್ಣಯ ಇಲ್ಲದೆ ಸಹ ಮಿಲಿಟರಿ ಮಧ್ಯಪ್ರವೇಶಕ್ಕೆ ಪ್ರಯತ್ನ ಮುಂದುವರೆದಿದೆ ಎನ್ನಲಾಗಿದೆ.

ಇದನ್ನು ಗಮನದಲ್ಲಿಟ್ಟುಕೊಂಡು ರಶ್ಯ ತೀವ್ರ ಅಂತರ್‍ರಾಷ್ಟ್ರೀಯ ಪ್ರಚಾರ ಮತ್ತು ರಾಜತಾಂತ್ರಿಕ ಕ್ರಮಗಳನ್ನು ಕೈಗೊಂಡಿದೆ. ಯುಗೊಸ್ಲಾವಿಯ, ಇರಾಕ್ ಮತ್ತು ಇತ್ತೀಚೆಗೆ ಲಿಬ್ಯಾದ ಅನುಭವದ ನಂತರ ಯಾವುದೇ ನಿರ್ಣಯ ಮಾಡಿದರೂ ಅದನ್ನು ಅಮೆರಿಕ-ನಾಟೋ ಕೂಟ ತನ್ನ ಮೂಗಿನ ನೇರಕ್ಕೆ ತಿರುಗಿಸುತ್ತದೆ ಎಂಬುದು ಸ್ಪಷ್ಟ. ಸರ್ಕಾರದ ಪೋಲಿಸು-ಮಿಲಿಟರಿ ಕ್ರಮಗಳ ಜತೆಗೆ, ವಿರೋಧಿ ಸಶಸ್ತ್ರ ಮತ್ತು ಮಿಲಿಟರಿ ಕ್ರಮಗಳೂ ಕೊನೆಗೊಳ್ಳಬೇಕು ಎಂದ ರಶ್ಯ-ಚೀನಾ ಒತ್ತಾಯಕ್ಕೆ ಅಮೆರಿಕ-ನಾಟೋ ಕೂಟ ತಯಾರಿಲ್ಲ. ಇಂತಹ ಕ್ರಮ ಇಲ್ಲದೆ ಹಿಂಸಾಚಾರ ನಿಲ್ಲುವುದಿಲ್ಲ. ಅಲ್ಲದೆ ಆಂತರಿಕ ಯುದ್ಧದಲ್ಲಿ ತೊಡಗಿರುವ ಎರಡೂ ಪಕ್ಷಗಳ ನಡುವೆ ಮಾತುಕತೆಗೆ ನೈಜ ಪ್ರಯತ್ನ ಮಾಡದೆ ಸಿರಿಯಾ ಸರ್ಕಾರವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದು ಸರಿಯಲ್ಲ. ಸಿರಿಯಾ ಸರ್ಕಾರಕ್ಕೆ ಯಾವುದೇ ಜನಬೆಂಬಲ ಇಲ್ಲ ಎನ್ನುವುದೂ ಇತ್ತು ಹರಡಿರುವ ಸುಳ್ಳು ಪ್ರಚಾರ. ಅಂತರ್‍ರಾಷ್ಟ್ರೀಯ ಮಾಧ್ಯಮಗಳೂ ದಾಖಲಿಸಿರುವ ಭಾರೀ ಸರ್ಕಾರ ಪರ ರ್‍ಯಾಲಿಗಳು ನಡೆದಿವೆ. ಸಿರಿಯಾ ಸರ್ಕಾರ ಘೋಷಿಸಿರುವ ಪ್ರಜಾಪ್ರಭುತ್ವ ಸುದಾರಣೆಗಳಿಗೆ ಸಮಯಾವಕಾಶ ಕೊಡಲು ಇವರು ತಯಾರಿಲ್ಲ. ವಿರೋಧಿ ಗುಂಪುಗಳಿಗೆ ಹಣ-ಮಿಲಿಟರಿ ಮತ್ತು ಸಿಬ್ಬಂದಿ ಬೆಂಬಲವನ್ನು ನೀಡುತ್ತಿರುವ ಅಮೆರಿಕ-ನಾಟೋ ಕೂಟ ತಟಸ್ಥ ಶಕ್ತಿಯೂ ಅಲ್ಲ. ಹಿಂಸಾಚಾರ ನಿಲ್ಲಿಸುವ ಮಾನವೀಯ ಉದ್ದೇಶ ಸಹ ಹೊಂದಿಲ್ಲ. ಸಿರಿಯಾದಲ್ಲಿ ಕೈಗೊಂಬೆ ಸರ್ಕಾರ ಸ್ಥಾಪಿಸುವುದು ಮಾತ್ರ ಅದರ ಗುರಿ ಎಂದು ರಶ್ಯ ಭರದ ಪ್ರಚಾರ ಕೈಗೊಂಡಿವೆ. ಸಿರಿಯಾ ಉಪಾಧ್ಯಕ್ಷ ಮತ್ತು ಎಲ್ಲಾ ವಿರೋಧೀ ಶಕ್ತಿ/ಪಕ್ಷಗಳ ನಡುವೆ ಮಾತುಕತೆ ನಡೆಸಲು ಪ್ರಯತ್ನ ಮಾಡುತ್ತಿದೆ. ಹಿಂಸಾಚಾರ ನಿಲ್ಲಿಸಬೇಕಾದರೆ ವಿರೋಧಿ ಶಕ್ತಿಗಳ ಮೇಲೆ ತಮಗಿರುವ ಪ್ರಭಾವ ಬಳಸಿ ಅವರನ್ನು ಮಾತುಕತೆಗೆ ಬರುವಂತೆ

ಪುಟ 15ಕ್ಕೆ.....

ಸರ್ವಭ್ರಷ್ಟ ಬಿಜೆಪಿ ಸರ್ಕಾರ ತೊಲಗಲಿ - ಸಿಪಿಐ(ಎಂ)

"ಬರಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ಅಶ್ಲೀಲ ನೀಲಿ ಚಿತ್ರವನ್ನು ವೀಕ್ಷಿಸುತ್ತಿದ್ದ ಮೂರು ಸಂಪುಟ ದರ್ಜೆ ಸಚಿವರು" ಎಂಬುದು ಕರ್ನಾಟಕದಲ್ಲಿ ಬಿಜೆಪಿ ಆಳ್ವಿಕೆಗೆ ಒಂದು ಸೂಕ್ತ ಸಂಕೇತವಾಗಿದೆ. ಆರ್ಥಿಕ ಭ್ರಷ್ಟತೆ, ರಾಜಕೀಯ ಭ್ರಷ್ಟತೆ, ಲೈಂಗಿಕ ಭ್ರಷ್ಟತೆ, ಕೋಮುವಾದ ಹಾಗೂ ಅತ್ಯಂತ ನಾಚಿಕೆಗೆಟ್ಟ ಭಂಡತನಗಳಿಂದಾಗಿ ದೇಶದಲ್ಲಿ ಕರ್ನಾಟಕಕ್ಕೆ ಅತ್ಯಂತ ಕೆಟ್ಟ ಹೆಸರು ತಂದ ಸರ್ಕಾರ ರಾಜ್ಯದ ಬಿಜೆಪಿ ಸರ್ಕಾರ ಎಂದು ಸಿಪಿಐ(ಎಂ) ಖಂಡಿಸಿದೆ.

ಪಕ್ಷದಲ್ಲಿ ಒಡಕು, ಅಧಿಕಾರ ದಾಹ, ರೆಸಾರ್ಟ್ ರಾಜಕಾರಣ, ಭೂ ಮಾಫಿಯಾ, ಗಣಿ. ಮಾಫಿಯಾಗಳಿಂದಾಗಿ ರಾಜ್ಯದಲ್ಲಿ ಆಡಳಿತ ನಡೆಸದೆ ಇಡೀ ಸರ್ಕಾರವೇ ಹಲವಾರು ತಿಂಗಳುಗಳ ಕಾಲ ಕೆಲಸಕ್ಕೆ ಗೈರು ಹಾಜರಾಗಿದೆ. ಕೆಲಸ ಮಾಡಿದ ವೇಳೆಯಲ್ಲಿ ಭ್ರಷ್ಟತೆಯೇ ಸರ್ಕಾರದ ಅಜೆಂಡಾ ಆಗಿದೆ. ಜನ ಸಾಮಾನ್ಯರ-ರೈತರ, ಕೃಷಿ ಕೂಲಿಕಾರರ, ಕಾರ್ಮಿಕರ, ಮಹಿಳೆಯರ, ವಿದ್ಯಾರ್ಥಿ ಯುವಜನರ ಸಮಸ್ಯೆಗಳು ವಿವಿಧ ಪ್ರದೇಶಗಳ ಸಮಸ್ಯೆಗಳನ್ನು ಕೇಳುವವರೇ ಇಲ್ಲದಾಗಿ ಉಲ್ಬಣಗೊಂಡಿದೆ. ಆದ್ದರಿಂದ ಬಿಜೆಪಿ ಸರ್ಕಾರವೇ ರಾಜಿನಾಮೆಯಿತ್ತು ತೊಲಗಬೇಕು ಎಂದು ಸಿಪಿಐ(ಎಂ) ಆಗ್ರಹ ಪಡಿಸುತ್ತದೆ.

ವಿಧಾನಸಭೆಯಲ್ಲಿ ಅಶ್ಲೀಲ ಚಿತ್ರ ನೋಡುತ್ತಿದ್ದ ಸಚಿವರನ್ನು ಕೂಡಲೇ ವಿಧಾನ ಸಭೆಯ ಸದಸ್ಯತ್ವದಿಂದ ರದ್ದು ಪಡಿಸಬೇಕು. ಸಮಿತಿ ರಚನೆ, ವರದಿ ಮೊದಲಾದ ನಾಟಕಗಳನ್ನು ಕೈಬಿಟ್ಟು, ವಿಧಾನ ಸಭೆಯಲ್ಲಿಯೇ ಕಟಕಟೆಯಲ್ಲಿ ನಿಲ್ಲಿಸಿ ಸದಸ್ಯತ್ವ ರದ್ದು ಪಡಿಸಬೇಕು ಮತ್ತು ಕೂಡಲೇ ಕ್ರಿಮಿನಲ್ ಮೊಕದ್ದಮೆ, ಸೈಬರ್ ಕ್ರೈಂ ಮೊಕದ್ದಮೆಗಳನ್ನು ಹೂಡಿ ಕಾನೂನಿನ ಪ್ರಕಾರ ತೀಕ್ಷ್ಣ ಕ್ರಮಗಳಿಗೆ ಮುಂದಾಗಬೇಕು ಎಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಹಾಗೆಯೇ ವಿವಿಧ ಭ್ರಷ್ಟತೆ ಹಾಗೂ ದುರಾಡಳಿತದಿಂದ ಜನ ರೋಸಿ ಹೋಗಿರುವುದನ್ನು ಮರೆಮಾಚಲು ಕೋಮು ದ್ವೇಷವನ್ನು ಉದ್ರೇಕಿಸಲು ಬಿಜೆಪಿ ಮತ್ತು ಸಂಘ ಪರಿವಾರ ಪ್ರಯತ್ನಿಸುತ್ತಿದೆ. ಇತ್ತೀಚೆಗೆ ಅಲ್ಲಲ್ಲಿ ಚರ್ಚ್ ಮೇಲಿನ ಧಾಳಿ ಸಿಂಧಗಿ ಪಾಕ್ ಧ್ವಜ ಪ್ರಕರಣ, ಗೋ ಹತ್ಯೆ ಕಾನೂನಿಗೆ ಒತ್ತಾಯ ಮತ್ತು ಜಾರಿಯಾಗದೇ ಜಾರಿ ಇಂತಹ ಪ್ರಕರಣಗಳು ಹೆಚ್ಚುತ್ತಿವೆ. ಈ ಪ್ರಕರಣಗಳ ಸರಮಾಲೆಯಲ್ಲಿ ಪುತ್ತೂರು ತಾಲ್ಲೂಕು ಉಪ್ಪಿನಂಗಡಿಯಲ್ಲಿ ಆರ್‌ಎಸ್‌ಎಸ್‌ನ ನಾಯಕ ಕಲ್ಲಡ್ಕ ಪ್ರಭಾಕರ ಭಟ್ಟರ ಉದ್ರೇಕಕಾರಿ ಭಾಷಣದಲ್ಲಿ ಕಾನೂನನ್ನು ಲೆಕ್ಕಿಸಬೇಡಿ ಹೊಡೆಯಿರಿ ಎಂದು ಹೇಳಿದ ಅವರನ್ನು ಕೂಡಲೇ ಬಂಧಿಸಬೇಕು ಎಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಈ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ಫೆ. 10ನೇ ತಾರೀಕು ಪ್ರತಿಭಟನೆಗಳನ್ನು ನಡೆಸಲು ಸಿಪಿಐ(ಎಂ) ಕರೆ ನೀಡಿದೆ. – 9.02.2012

ಸಿರಿಯಾ ನಿರ್ಣಯಕ್ಕೆ ಭಾರತ ಬೆಂಬಲ – ಸಿಪಿಐ(ಎಂ) ಖಂಡನೆ

ಭಾರತ ಅಮೆರಿಕ ಮತ್ತು ಯುರೋಪಿಯನ್ ದೇಶಗಳು ಭದ್ರತಾ ಸಮಿತಿಯಲ್ಲಿ ತಂದ ಸಿರಿಯಾ ನಿರ್ಣಯವನ್ನು ಬೆಂಬಲಿಸಿದ್ದನ್ನು ಸಿಪಿಐ(ಎಂ) ಪಾಲಿಟ್ ಬ್ಯೂರೋ ತೀವ್ರವಾಗಿ ಖಂಡಿಸಿದೆ. ಇಂತಹುದೇ ಲಿಬ್ಯಾ ನಿರ್ಣಯ ಬಂದಾಗ ಭಾರತ ತಟಸ್ಥವಾಗಿದ್ದನ್ನು ನೆನಪಿಸುತ್ತಾ ಯಾವ ರೀತಿ ಅದನ್ನು ದುರ್ಬಳಕೆ ಮಾಡಲಾಯಿತು ಎಂದು ನೋಡಿದ ನಂತರವೂ ಈ ನಿರ್ಣಯ ಬೆಂಬಲಿಸುವುದಕ್ಕೆ ಯುಪಿಎ ಸರ್ಕಾರದ ಕೊಟ್ಟಿರುವ ಸಮಜಾಯಿಷಿ, ನಾಟೋ ಮತ್ತು ಅದರ ಅರಬ್ ಬೆಂಬಲಿಗರು ಈಗಾಗಲೇ ಆಂತರಿಕ ಯುದ್ಧಕ್ಕೆ ಮಿಲಿಟರಿ ಬೆಂಬಲ ಮತ್ತು ಕುಮ್ಮಕ್ಕು ಕೊಡುತ್ತಿದ್ದಾರೆ ಎಂಬ ಸತ್ಯವನ್ನು ಮರೆಮಾಚುತ್ತಿದೆ. ಸೌದಿ ಅರೇಬಿಯಾದಂತಹ ಸರ್ವಾಧಿಕಾರಿ ಸರ್ಕಾರಗಳಿಗೆ ಬೆಂಬಲ ನೀಡುತ್ತಿರುವ ಪಾಶ್ಚಿಮಾತ್ಯ ಸರ್ಕಾರಗಳು ಸಿರಿಯಾದಲ್ಲಿ ಪ್ರಜಾಪ್ರಭುತ್ವ ಹಕ್ಕುಗಳನ್ನು ಬೆಂಬಲಿಸಲು ಇದನ್ನು ಮಾಡುತ್ತಿವೆ ಎಂಬುದು ಗೋಸುಂಬೆತನ. ಸಿರಿಯಾದಲ್ಲಿ ಮಿಲಿಟರಿ ಮಧ್ಯಪ್ರವೇಶವನ್ನು ಭಾರತ ಸರ್ಕಾರ ಬಲವಾಗಿ ವಿರೋಧಿಸಿ ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಬೇಕು ಎಂದು ಸಿಪಿಐ(ಎಂ) ಪಾಲಿಟ್ ಬ್ಯೂರೋ ಒತ್ತಾಯಿಸಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಿರಿಯಾ ನಿರ್ಣಯಕ್ಕೆ...

ಪುಟ 14ರಿಂದ........

ಮಾಡಬೇಕೆಂದು ಅಮೆರಿಕಕ್ಕೆ ಕರೆ ಕೊಟ್ಟಿದೆ.

ಸಿರಿಯಾದಲ್ಲಿ ಎಲ್ಲವೂ ಚೆನ್ನಾಗಿದೆ ಎಂದು ಇದರ ಅರ್ಥವಲ್ಲ. 'ತಹರೀರ್ ಚೌಕ'ದ ಪ್ರಜಾಪ್ರಭುತ್ವದ ಅಲೆ ಸಿರಿಯಾವನ್ನೂ ತಲುಪಿದ್ದು, ಪ್ರಜಾಪ್ರಭುತ್ವ ಸುಧಾರಣೆಗಳನ್ನು ತರಲು ನೈಜವಾದ ಚಳುವಳಿಯೊಂದು ಹುಟ್ಟಿ ಬೆಳೆದಿದೆ. ಫ್ರೀ ಆಫಿಸರ್ಸ್ ಗ್ರೂಪ್ ಇಂತಹ ಒಂದು ಗುಂಪು. ಆದರೆ ಇತರ ಹೆಚ್ಚಿನ ಗುಂಪುಗಳು ವಿದೇಶೀ ಶಕ್ತಿಗಳ ಕೈಗೊಂಬೆಯಾಗಿ ಇರುವವು. ಮಾತುಕತೆಗೆ ಕಾಯದೆ ಮಿಲಿಟರಿ ಕ್ರಮಗಳ ಮೂಲಕ ಹಿಂಸಾಚಾರ ನಡೆಸುತ್ತಿವೆ. ಇವುಗಳಿಗೆ ಯಾವುದೇ ಜನಬೆಂಬಲ ಇಲ್ಲ. ಭಯೋತ್ಪಾದಕ ಗುಂಪುಗಳಂತೆ ಕಾರ್ಯ ನಿರ್ವಹಿಸುತ್ತಿವೆ. ಇದರಲ್ಲಿ ಮೂಲಭೂತವಾದಿ ಮುಸ್ಲಿಂ ಬ್ರದರ್ ಹುಡ್ ಇದೆ. ಇದಕ್ಕೆ ಸೌದಿ ಅರೇಬಿಯಾ, ಕತಾರ್ ಮತ್ತು ಬಹ್ರೈನ್ ಸರ್ಕಾರಗಳು ಹಣ ಮತ್ತು ಮಿಲಿಟರಿ ಸಹಾಯ ಒದಗಿಸುತ್ತಿವೆ. ಸಿರಿಯನ್ ನ್ಯಾಶನಲ್ ಆರ್ಮಿ ಎಂಬ ಸಂಘಟನೆಯನ್ನು ನ್ಯಾಟೋ ಹುಟ್ಟು ಹಾಕಿದ್ದು ಅದಕ್ಕೆ ತುರ್ಕಿ ಬಾಡಿಗೆ ಸೈನಿಕರು, ಹಣ-ಮಿಲಿಟರಿ ಸಹಾಯ ಒದಗಿಸುತ್ತಿದೆ. ಅವು ಭಾರೀ ಶಸ್ತ್ರಾಸ್ತ್ರ ಬಳಸಿ ಸರ್ಕಾರಿ ಪಡೆಗಳ ಮೇಲೆ ದಾಳಿ ನಡೆಸುತ್ತಿವೆ. ನ್ಯಾಟೋ ಲಿಬ್ಯಾದಲ್ಲಿ ಬಳಸಿದ ತಂತ್ರ ಬಳಸಲು ಮುಂದಾಗಿದೆ. ವಿದೇಶೀ ಮಿಲಿಟರಿ ಬಲದಿಂದ ಹೇರಿಸಿದ 'ಪ್ರಜಾಪ್ರಭುತ್ವ' ಮತ್ತು 'ಉದಾರವಾದ' ಎಷ್ಟು ಹುಸಿಯಾದ್ದು ಎಂಬುದನ್ನು ಈಗಿನ ಯುಗೋಸ್ಲಾವಿಯ, ಇರಾಕ್ ಮತ್ತು ಲಿಬ್ಯಾಗಳೇ ಉದಾಹರಣೆ. ಯಾವುದೇ ಮಾನದಂಡದಿಂದ (ಸ್ವಾತಂತ್ರ್ಯ, ಪ್ರಾತಿನಿಧಿಕ ಪ್ರಜಾಪ್ರಭುತ್ವ, ಮಾನವ ಹಕ್ಕುಗಳು, ಮಹಿಳೆಯರ ಸ್ವಾತಂತ್ರ್ಯ, ಜೀವನ ಮಟ್ಟ, ಸಾಮಾಜಿಕ ನ್ಯಾಯ) ನೋಡಿದರೂ ಈ ದೇಶಗಳು ಅವನತಿ ಕಂಡಿವೆ ಎಂಬ ಬಗ್ಗೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ.

ಲೋಕಾಯುಕ್ತ ನೇಮಕ : ವಿಳಂಬ ಇನ್ಯಾಕೆ?

ಪುಟ 3 ರಿಂದ

ಮಾಡಲಾಗುವುದೆಂದು ಹೇಳಿದ್ದಾರೆ. ಆದರೆ ಹೇಳಿ ಮೂರು ದಿನಗಳೇ ಕಳೆದವು. ಹೆಸರು ರಾಜ್ಯಪಾಲರಿಗೆ ಹೋಗಿಲ್ಲ. ಹೆಸರುಗಳ ಬಗೆಗೇ ಅವರೊಳಗೆ ಹಲವು ಗೊಂದಲ, ಘರ್ಷಣೆಗಳೂ ಇವೆ. ಪ್ರಸಕ್ತವಾಗಿ ನ್ಯಾ. ಬಿ.ಎನ್. ಕೃಷ್ಣ, ನ್ಯಾ. ಸೋದಿ, ನ್ಯಾ. ಸಿರಿಯಾರ್ ಜೋಸೆಫ್‌ರವರ ಹೆಸರುಗಳು ಚಾಲ್ತಿಯಲ್ಲಿವೆ. ಪ್ರಶ್ನೆಯೆಂದರೆ ಬಿಜೆಪಿ ಸರ್ಕಾರ ಇವರಲ್ಲಿ ಯಾರನ್ನು ಆಯ್ಕೆ ಮಾಡಿಕೊಳ್ಳುತ್ತದೆ ಎಂಬುದು?. ಈಗಾಗಲೇ ಉಪಲೋಕಾಯುಕ್ತರ ನೇಮಕ, ಉನ್ನತ ಅಧಿಕಾರಿಗಳ ನೇಮಕ ಹಾಗೂ ಅಲ್ಲಿಂದ ಎತ್ತಂಗಡಿಗಳ ಪ್ರತಿ ಪ್ರಕರಣವೂ ಅತ್ಯಂತ ಸ್ಫೋಟಕ. ವಿವಾದಗಳನ್ನೇ ಸೃಷ್ಟಿಸುತ್ತ ಬಂದಿದೆ. ಅಂದರೆ ಭಾರೀ ಹಗರಣಗಳಿಂದ ಭಾರೀ ಆರೋಪಿಗಳನ್ನು ಖುಲಾಸೆ ಮಾಡುವ ದಿಶೆಯಲ್ಲಿ ಇಡೀ ಲೋಕಾಯುಕ್ತ ಸಂಸ್ಥೆಯನ್ನೇ ದುರ್ಬಲಗೊಳಿಸುತ್ತ, ಪ್ರತಿಯೊಂದರಲ್ಲಿಯೂ ತಾವು ಬಯಸಿದಂತೆ ಆಗಬೇಕೆಂಬ ಪ್ರಬಲ ಇಚ್ಛೆಯಿಂದಲೇ ಕಾರ್ಯವೆಸಗುತ್ತ ಬಂದಿರುವುದನ್ನು ಗಮನಿಸಿದರೆ ಈ 'ಡೆಮ್ಮಿ ಸರ್ಕಾರ'ವಾಗಿರುವ ,ಕಡು ಭ್ರಷ್ಟ ಬಿಜೆಪಿ ಸರ್ಕಾರ ಏನು ಮಾಡಬಹುದು ಎಂಬುದನ್ನು ಊಹಿಸಲು ಕಷ್ಟವೇನಿಲ್ಲ: ಪುನಃ ಸಿ.ಎಂ. ಆಗಲೇಬೇಕೆಂಬ ವರಾತದಲ್ಲಿ ಅಂಡಲೆಯುತ್ತಿರುವ ಅಧಿಕಾರದಾಹಿ ಯಡಿಯೂರಪ್ಪನವರಿಗೆ ಆರ್.ಎಸ್.ಎಸ್. ಹಾಗೂ ಬಿಜೆಪಿ ಹೈಕಮಾಂಡ್ 'ನೀವು ಆರೋಪ ಮುಕ್ತರಾಗಿ ಬಂದ ಮರುದಿನವೇ ಮುಖ್ಯಮಂತ್ರಿ' ಎಂದು ಮೂಗಿಗೆ ಬೆಣ್ಣೆ ಸವರಿರುವಾಗ, ಅದನ್ನೇ ಮೂಸಿಕೊಂಡು ಯಡ್ಡಿ ತಿರುಗುತ್ತಿರುವಾಗ ಈ ಸರ್ಕಾರದ ನಡೆ ಹೇಗೆ ಎಂಬುದು ಯಕ್ಷ ಪ್ರಶ್ನೆಯೇನಲ್ಲ. ಸ್ವಲ್ಪ ಅತ್ತಿತ್ತ ಸದಾನಂದ ಅಲುಗಾಡಿದರೂ ಬೆಂಬಲದ ಬೆಣೆ ತೆಗೆದುಕೊಂಡು ಸರ್ಕಾರವನ್ನೇ ಬೀಳಿಸುವುದಾಗಿ ಬೆದರಿಕೆ ಹಾಕುತ್ತಿರುವಾಗ ಈ ಬಿಜೆಪಿ ಪಕ್ಷ ಮತ್ತು ಸರ್ಕಾರದ ನಡೆಗಳು ವಿಶೇಷ ತಿರುವು ಪಡೆಯುತ್ತವೆ.

ಮುಂದೆ

ಆದ್ದರಿಂದ ಮುಂದೆ ನೇಮಕಗೊಳ್ಳುವ ಲೋಕಾಯುಕ್ತರ ಪ್ರಶ್ನೆಯನ್ನು ಆಡಳಿತ ಪಕ್ಷಕ್ಕೆ ಬಿಟ್ಟು ಬಿಡಲೂ ಆಗುವುದಿಲ್ಲ. ಇಡೀ ವಿರೋಧ ಪಕ್ಷಗಳು ಜಾಗರೂಕತೆಯಿಂದ ಇಲ್ಲಿ ಕಾರ್ಯನಿರ್ವಹಿಸಬೇಕು. ಆದರೆ ಬಾಯಲ್ಲಿ ಇವರು ಏನೇ ಹೇಳಲಿ, ಬಿಜೆಪಿ, ಕಾಂಗ್ರೇಸ್ ಮತ್ತು ಜೆಡಿ(ಎಸ್) ಪಕ್ಷಗಳಿಗೆ ಅವರವೇ ಸ್ವಹಿತದ ಕಾರಣಗಳಿಗಾಗಿ ಪ್ರಬಲ ಲೋಕಾಯುಕ್ತ ಬೇಕಿಲ್ಲ. ಒಟ್ಟು ಸ್ಥಿತಿ ಹೀಗಿರುವಾಗ ಜನರಿಗೆ ಉಳಿದು ಬಿಟ್ಟಿರುವುದಾದರೂ ಏನು? .

ಒಂದು- ಎಂತಹವರ ನೇಮಕಾತಿ ಆಗಲಿದೆ ಎಂದು ನೋಡುವುದು.

ಎರಡು- ಲೋಕಾಯುಕ್ತ ಸಂಸ್ಥೆಯನ್ನು ಮತ್ತು ಸ್ಥಾನವನ್ನು ಬಲಿ ಕೊಡದಂತೆ ಎಚ್ಚರವಹಿಸಿ. ದಕ್ಷ ಪ್ರಾಮಾಣಿಕರ ನೇಮಕಕ್ಕೆ ಸದಾ ಎಚ್ಚರದ ದನಿಗೂಡಿಸುವುದು.

ಅಧಿಕಾಸ್ಥರ... ನೆಕ್ಕಿದ ನಾಯಿಗಳು!

ಹೀಗಾಗಬಹುದು ಎಂದು ಸಾಮಾನ್ಯರೂ ಊಹಿಸಿ ಬಿಡುವಂತಹ ಸಹಜ ಸ್ಥಿತಿಯೇ ನಿರ್ಮಾಣವಾಗಿ ಬಿಟ್ಟಿದೆ! ಭೂ ಡೀನೋಟಿಫಿಕೇಶನ್ ಹಗರಣವೊಂದರಲ್ಲಿ ಸಿಕ್ಕಿಬಿದ್ದಿರುವ ಆರ್. ಅಶೋಕ್ ಗೃಹಸಚಿವ! ಮೊಕದ್ದಮೆ ದಾಖಲಾದರೂ ಸಚಿವ ಸ್ಥಾನ ಬಿಡಲಾರ, ವಿಚಿತ್ರವೆಂದರೆ ಈ ಪೋಲಿಸ್ ಇಲಾಖೆಯ ಸಚಿವನನ್ನು ಅವರ ನಿರ್ದೇಶನದ ಅಡಿ ಕೆಲಸ ಮಾಡುವ ಸಿಬ್ಬಂದಿ ತನಿಖೆ ಮಾಡಬೇಕು! ರಾಜೀನಾಮೆ ಕೊಡಲು ಸುತರಾಂ ಸಿದ್ಧರಿಲ್ಲ. ಹೀಗಾಗಿ "ತನಿಖೆ ಶೀಘ್ರ" ನಡೆದು ತನ್ನ ಮೇಲಿನ ಆರೋಪಗಳಿಂದ ಖುಲಾಸೆಗೊಂಡ! ಅಂದರೆ 'ಬಿ' ರಿಪೋರ್ಟನ್ನು ಪೋಲಿಸರು ನೀಡಿ 'ಸಾಹೇಬರ, ಆಜ್ಞೆ ಪಾಲಿಸಿದರು.

ಇನ್ನು ಭದ್ರಾ ಮೇಲ್ದಂಡೆಯ ಕಾಮಗಾರಿ ಗುತ್ತಿಗೆ ಹಗರಣದಲ್ಲಿ ಮಾಜಿ ಸಿ.ಎಂ. ಯಡಿಯೂರಪ್ಪ, ಭ್ರಷ್ಟಾಚಾರದ ಪ್ರಮುಖ ಆರೋಪಿ. ಅತ್ಯಂತ ಪ್ರಮುಖ ದಾಖಲೆಗಳ ಸಮೇತ 2011 ಜುಲೈನಲ್ಲಿ ಜೆಡಿ(ಎಸ್)ನ ಶಾಸಕ ವೈ.ಎಸ್.ವಿ. ದತ್ತ ದೂರು ದಾಖಲಿಸಿದ್ದಾರೆ. ತನಿಖೆ ನಡೆಸುತ್ತಿದ್ದ ಪೋಲಿಸರು ಈಗ 'ಬಿ' ರಿಪೋರ್ಟ್ ಹಾಕಿ ಅವರನ್ನು ಖುಲಾಸೆ ಮಾಡಿದ್ದಾರೆ! ಹೇಗಿದೆ ಲೋಕಾಯುಕ್ತ ಪೋಲಿಸರ ತನಿಖೆ. ಇಷ್ಟು ಮಾತ್ರವೇ ಅಲ್ಲ, ಅಲ್ಲಿ ಹಿಮಾಚಲ ಪ್ರದೇಶದ ಕಂಪನಿಯಾದ ಜ್ಯೋತಿ ಲಿಮಿಟೆಡ್‌ನಿಂದ ನೀಡಿದ ಗುತ್ತಿಗೆಗಾಗಿ ಪಡೆದದ್ದು ಲಂಚಲ್ಲ ಅದು ಬಂಡವಾಳ ಹೂಡಿಕೆಯೆಂದು ಲೋಕಾಯುಕ್ತ ಪೋಲಿಸರೇ ಯಡಿಯೂರಪ್ಪನವರ ಭ್ರಷ್ಟಾಚಾರವನ್ನು ಪ್ರಬಲವಾಗಿ ಸಮರ್ಥಿಸುತ್ತಿದ್ದಾರೆ.!

ಈ ಪ್ರಕರಣಗಳೇ ಸಾಕಲ್ಲ. ಸರ್ಕಾರದಲ್ಲಿ ಏನು ನಡೆಯುತ್ತಿದೆ? ಯಾಕೆ ನಡೆಯುತ್ತವೆ ಎಂಬುದು ಅರಿಯಲು. ಇಂತಹುದೇ ಒತ್ತಡ , ಹಸ್ತಕ್ಷೇಪ, ಬುಡಮೇಲು ಕ್ರಮಗಳಿಂದ ಪಾರಾಗುವ ಕುತಂತ್ರ ಯಡ್ಡಿ ಮತ್ತು ಕಂಪನಿಯಲ್ಲಿದೆ. ಹೀಗೆ ಈ ಸರ್ಕಾರ ಅಧಿಕಾರದಲ್ಲಿ ಮುಂದುವರಿದರೆ ಭೀಕರ ಅನಾಹುತಗಳು ಕಟ್ಟಿಟ್ಟದ್ದೇ.

ಪಶ್ಚಿಮ ಬಂಗಾಳ- ರೈತರ ಆತ್ಮಹತ್ಯೆ

ಪುಟ 10 ರಿಂದ......

ರೈತರು ಬೆಳೆದ ಬೆಳೆಯನ್ನು ನೇರವಾಗಿ ಖರೀದಿಸಲು ಸರ್ಕಾರ ತಕ್ಷಣ ಮುಂದಾಗಬೇಕು. ರಾಜ್ಯದ ತ್ರಿಸ್ತರ ಪಂಚಾಯತ್ ವ್ಯವಸ್ಥೆಯನ್ನು ಬಳಸುವುದು ಮತ್ತು ಸಹಕಾರಿ ಸಂಸ್ಥೆಗಳು, ಎನ್‌ಜಿಓಗಳನ್ನು ಈ ಕಾರ್ಯದಲ್ಲಿ ಭಾಗಿಯಾಗುವಂತೆ ಮಾಡುವುದು.

ರೈತರಿಗೆ ಅನುಕೂಲ ಮಾಡಿಕೊಡಬೇಕಾದ ಕೇಂದ್ರದ ಕಾರ್ಯಕ್ರಮಗಳಾದ ಅನ್ನಪೂರ್ಣ ಮತ್ತು ಅಂತ್ಯೋದಯ ಯೋಜನೆಯ ಅನುಷ್ಠಾನದಲ್ಲಿ ದಯನೀಯವಾಗಿ ವಿಫಲವಾಗಿದೆ. ಈ ಹಿನ್ನೆಲೆಯಲ್ಲಿ ಈ ಯೋಜನೆಗಳ ಸಮರ್ಪಕ ಜಾರಿಗೆ ಪ್ರಾಮಾಣಿಕ ಪ್ರಯತ್ನ.

ಸಾರ್ವಜನಿಕ ವಿತರಣ ವ್ಯವಸ್ಥೆಯನ್ನು ಸರಿಪಡಿಸುವುದು. ಎಲ್ಲ ಬಡ ಕುಟುಂಬಗಳಿಗೆ ಬಿಪಿಎಲ್ ಕಾರ್ಡ್ ವಿತರಿಸುವುದು. ಸಾಲದಿಂದ ತತ್ತರಿಸಿದ ರೈತ ಕುಟುಂಬಗಳಿಗೂ ಈ ವ್ಯವಸ್ಥೆಯನ್ನು ವಿಸ್ತರಿಸುವುದು. ಬಿಪಿಎಲ್ ಕಾರ್ಡ್‌ದಾರರಿಗೆ ಕನಿಷ್ಟ 14 ಬಗ್ಗೆ ಜೀವನಾವಶ್ಯಕ ಧವಸ ಧಾನ್ಯಗಳನ್ನು ವಿತರಿಸುವುದು.

ಈಗ ದಾಖಲಾಗಿರುವ ರೈತ ಆತ್ಮಹತ್ಯೆ ಪ್ರಕರಣಗಳ ಬಗ್ಗೆ ಕೂಲಂಕಷ ತನಿಖೆ ನಡೆಸಿ, ಸಂತ್ರಸ್ತ ಕುಟುಂಬಗಳಿಗೆ ಆರ್ಥಿಕ ಹಾಗೂ ಮಾನಸಿಕ ಸಾಂತ್ವನ ಹೇಳುವುದು.

ಇದೇ ವೇಳೆ, ರಾಜ್ಯ ಸರ್ಕಾರ ರೈತ ವಿರೋಧಿ ನೀತಿಗಳನ್ನು ಜಾರಿಗೊಳಿಸುತ್ತಿರುವುದಕ್ಕೆ ತೀವ್ರ ಆಕ್ಷೇಪವನ್ನೂ ಈ ಮನವಿ ವ್ಯಕ್ತಪಡಿಸಿತು. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಅನುಷ್ಟಾನ, ಸಬ್ಸಿಡಿ ಮತ್ತು ರಸಗೊಬ್ಬರಗಳ ಪೂರೈಕೆಗೆ ಸರ್ಕಾರ ಗಮನ ನೀಡುವಂತೆ ನಿಯೋಗ ಒತ್ತಾಯಿಸಿತು.

ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಸ್ವಾಮಿನಾಥನ್ ವರದಿಯನ್ನು ಜಾರಿಗೊಳಿಸಬೇಕು ಮತ್ತು ಆತ್ಮಹತ್ಯೆ ಮಾಡಿದ ರೈತ ಕುಟುಂಬಗಳಿಗೆ ಸಮಗ್ರ ಪರಿಹಾರವನ್ನು ಘೋಷಿಸಬೇಕೆಂದು ಎಡರಂಗದ ನಾಯಕರು ಈ ಸಂದರ್ಭದಲ್ಲಿ ಒತ್ತಾಯಿಸಿದ್ದಾರೆ.

ದಿಕ್ಕುಗೇಡಿ ಯುಪಿಎ ಸರಕಾರ!

ಪುಟ 7ರಿಂದ......

ಮತ್ತೆ ಹೇಳುತ್ತಾ ಬಂದಿದ್ದೇವೆ. ಇದರಿಂದ ಮಾತ್ರವೇ ದೇಶದೊಳಗಿನ ಬೇಡಿಕೆಗಳು ಬೆಳವಣಿಗೆ ಹೊಂದಿ ಒಂದು ಆರೋಗ್ಯಕರ ಮತ್ತು ಬಹಳ ಕಾಲ ಉಳಿಯಬಲ್ಲ ಆರ್ಥಿಕ ಬೆಳವಣಿಗೆ ಸಾಧ್ಯವಾಗುತ್ತದೆ, ಇದು ಎಲ್ಲರನ್ನು ಒಳಗೊಳ್ಳುವ ಬೆಳವಣಿಗೆಯೂ ಅಗುತ್ತದೆ.

ಬಂಡವಾಳಶಾಹಿ ಬಿಕ್ಕಟ್ಟಿನ ವಿರುದ್ಧ ವಿಶ್ವಾದ್ಯಂತ ಹೋರಾಟಗಳು ಹೆಚ್ಚುತ್ತಿವೆ ಎಂಬುದು 'ವಾಲ್ ಸ್ಟ್ರೀಟ್ ಆಕ್ರಮಿಸಿಕೊಳ್ಳಿ' ಚಳುವಳಿಯಲ್ಲಿ ಮತ್ತು ಸುಮಾರಾಗಿ ಯುರೋಪಿನ ಎಲ್ಲ ದೇಶಗಳಿಗೂ ವ್ಯಾಪಿಸುತ್ತಿರುವ ಮುಷ್ಕರಗಳು ಮತ್ತು ಪ್ರತಿಭಟನೆಗಳಲ್ಲಿ ಕಾಣಬರುತ್ತಿದೆ. ಆದಾಗ್ಯೂ ಬಂಡವಾಳಶಾಹಿಗೆ ಗೋಡೆಯ ಮೇಲಿನ ಅತಿ ದಪ್ಪಕ್ಷರದ ಬರಹಗಳನ್ನೂ ಉಪೇಕ್ಷಿಸುವ ಒಂದು ಪ್ರವೃತ್ತಿ ಇದೆ. ಬಂಡವಾಳಶಾಹಿ "ಎಂತಹ ದೈತ್ಯ ಪ್ರಮಾಣದ ಉತ್ಪಾದನಾ ಮತ್ತು ವಿನಿಮಯ ಸಾಧನಗಳನ್ನು ಸೃಷ್ಟಿಸಿಕೊಂಡಿದೆಯೆಂದರೆ, ಅದರ ಪರಿಸ್ಥಿತಿ ತನ್ನ ಮಂತ್ರದಂಡದಿಂದ ಅಧೋಲೋಕದಿಂದ ಆವಾಹಿಸಿಕೊಂಡ ಶಕ್ತಿಗಳನ್ನು ತಾನೇ ಹತೋಟಿಯಲ್ಲಿಡಲಾಗದ ಮಾಂತ್ರಿಕನಂತಾಗಿದೆ" ಎಂದು ಮಾರ್ಕ್ಸ್ ಒಂದೊಮ್ಮೆ ಹೇಳಿದ್ದರು. ಈ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ವ್ಯವಸ್ಥಾಗತವಾದದ್ದು. ಅದು ಯಾವುದೇ ಕೆಲವು ವ್ಯಕ್ತಿಗಳ ದುರಾಸೆ ಅಥವ ಹಣದಾಹದಿಂದ ಹುಟ್ಟಿಕೊಂಡದ್ದಲ್ಲ. ಆದ್ದರಿಂದ, ಈ ಅಂಕಣದಲ್ಲಿ ಮತ್ತೆ-ಮತ್ತೆ ಹೇಳಿರುವಂತೆ, ಸಮಾಜವಾದ ಮಾತ್ರವೇ ಮಾನವ ಕುಲದ ಉದ್ಧಾರ ಮತ್ತು ವಿಮೋಚನೆಯನ್ನು ಸಾಧಿಸಲು ಇರುವ ಏಕಮಾತ್ರ ಉತ್ತರ.

ಈ ದೀರ್ಘ ಕಾಲದ ಹೋರಾಟ ಭಾರತದಲ್ಲಿ ಮುಂದುವರೆಯುತ್ತಿರುವಾಗಲೇ, ಸದ್ಯಕ್ಕೆ, ಈ ನವ-ಉದಾರವಾದಿ ಧೋರಣೆಗಳ ದಿಕ್ಕನ್ನು ಬದಲಾಯಿಸಲು ಮತ್ತು ನಮ್ಮ ಬಹು ಆವಶ್ಯಕ ಸಾಮಾಜಿಕ ಮತ್ತು ಆರ್ಥಿಕ ಮೂಲರಚನೆಗಳನ್ನು ಕಟ್ಟಲು ಮತ್ತು ಇದರಿಂದ ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ನಿರ್ಮಿಸಲು ಭಾರೀ ಪ್ರಮಾಣದಲ್ಲಿ ಸಾರ್ವಜನಿಕ ಹೂಡಿಕೆ ಮಾಡುವಂತೆ ಜನತೆ ಒತ್ತಡಗಳನ್ನು ಹಾಕಬೇಕಾಗಿದೆ. ಮುಂಬರುವ ಬಜೆಟ್ ಈ ದಿಕ್ಕನ್ನು ತೋರಿಸುವಂತೆ ಮಾಡಬೇಕಾಗಿದೆ.

JANASHAKTHI KANNADA VARA PATRIKE FEB 19, 2012 Price : Rs. 5/-
RNI No. KARKAN /2006/17926 Posted on every Saturday
Postal Reg. No. RNP/KA/BGS/2078/2010-12 Posted at MBC Bangalore GPO

ಮನಸ್ಸು ಗಾಂಧಿ ಬಜಾರು.....



ಈ ಊರ ಕಟ್ಟಿದವರು ನಾವೆಲ್ಲಿ ಹೋಗಬೇಕು?



ಭಾಯಾ ಐ.ಕೆ.

ನಮ್ಮೆದುರು ಅತೀ ಕ್ಷುಲ್ಲಕ ಎಂದು ತಿಳಿಯಲ್ಪಡುವ ಒಂದು ಹಕ್ಕಿ ಗೂಡು ಕಟ್ಟಿ, ಮೊಟ್ಟೆ ಇಟ್ಟು, ಕಾವುಕೊಟ್ಟು, ಮರಿ ಮಾಡುತ್ತದೆ. ಒಂದು ದಿನ ಆಹಾರ ತರಲು ಹೋದ ತಾಯಿ ಹಕ್ಕಿ ಹಿಂತಿರುಗಿ ಬಂದಾಗ ಗೂಡು ನೆರಕ್ಕುರುಳಿರುತ್ತದೆ. ಅದ ಕಂಡ ತಾಯಿ ಹಕ್ಕಿಯ ಆಕ್ರಂದನ ಮುಗಿಲು ಮುಟ್ಟುತ್ತದೆ. ಅದನ್ನು ಕಂಡ ಸಹೃದಯ ದಾರಿಹೋಕನ ಮನ ಮಿಡಿಯುತ್ತದೆ. ಕರಗಿದ ಆತ ಆ ಗೂಡನ್ನೆತ್ತಿ ಮೇಲಕ್ಕಿಡುತ್ತಾನೆ. ಈ ರೀತಿಯ ಸಂವೇದನೆ ಇಂದು ಮನುಷ್ಯರ ಕಷ್ಟಗಳಿಗೆ ಯಾಕಿಲ್ಲ? ಸಂಜೆ ವ್ಯಾಪಾರ ಮುಗಿಸಿ ರಾತ್ರಿ ಮನೆಗೆ ಹೋದ ಆ ಪುಟ್ಟ ಅಂಗಡಿಗಳ ಒಡೆಯ-ಒಡತಿಯರು ಬೆಳಿಗ್ಗೆ ಬಂದಾಗ ತಮ್ಮ ಅಂಗಡಿಗಳನ್ನು ಕಾಣದೇ ಹೋದಾಗ ಅವರ ಮನಸ್ಥಿತಿಯನ್ನು ಊಹಿಸಲು ಸಾಧ್ಯವೇ? ಆದರೆ ಸತ್ಯ.

ಆ ನಡು ರಾತ್ರಿಯಲ್ಲಿ...

ಜನವರಿ 23 ರ ರಾತ್ರಿ 1ರ ಸಮಯ. ರಸ್ತೆಬದಿಯ ಹೂವು, ಹಣ್ಣು, ತರಕಾರಿ, ವೀಳ್ಯದೆಲೆ, ಗಿಡ(ಹೂಕುಂಡ)ಗಳು ಕ್ರೇನ್‌ಗಳ ಹಾವಳಿಗೆ ತುತ್ತಾದವು. ಇರುಳ ಕಾವಲಿಗೆ ಮಲಗಿದ್ದ ಹುಡುಗರು ಕಂಗೆಟ್ಟರು. ಬೆಳಿಗ್ಗೆ ಬಂದ ಮಾಲೀಕರು ತಮ್ಮ ಆಸ್ತಿ ಬೀದಿ ಪಾಲಾಗಿದ್ದನ್ನು ನೋಡಿ ಕಂಗಾಲಾದರು. ಹಾಕಿದ ಬಂಡವಾಳ ರಸ್ತೆ ಪಾಲು; ಇನ್ನು ನಾಳೆ ಹೇಗೆ? ವಾರದ್ಬಡ್ಡಿ ಸಾಲಿಗರಿಗೆ ಕೊಡ್ಬೇಕು, ಬಾಡ್ಗೆ ಕಟ್ಬೇಕು, ಹೊಟ್ಟೆಗೆ ಹಿಟ್ಟಿನ ಏರ್ಪಾಡಾಗ್ಬೇಕು. ಇವಕ್ಕೆ ದಾರಿ ಕಾಣದೆ/ಪರಿಹಾರ ಸಿಗದೆ ಪರಿತಪಿಸುತ್ತಾ ಕುಳಿತಿರುವವರು 'ಗಾಂಧಿ ಬಜಾರ್'ನ ರಸ್ತೆ ಬದಿ ಅಂಗಡಿಗಳನ್ನು ನಿರ್ಮಿಸಿಕೊಂಡು 3-4 ತಲೆಮಾರಿನಿಂದ ಹೂ-ಹಣ್ಣು-ಎಲೆ-ತರಕಾರಿಗಳನ್ನು ಮಾರಾಟ ಮಾಡಿ ಬದುಕುತ್ತಿದ್ದ ಬಡ ವ್ಯಾಪಾರಸ್ಥ ಕುಟುಂಬಗಳು.

'ನಮ್ಮ ಗಾಂಧೀ ಬಜಾರಿನ
ಬೆಳಗಿಗೆ
ನಿಮ್ಮ
ಹುಂಜ ಗುಡಿ ಗಂಟೆ ಮಸೀದಿಯ ಸ್ತೋತ್ರ
ರಂಗವಲ್ಲಿ ಮಲ್ಲಿಗೆ ಬಳ್ಳಿ ಸುಲಿಯುವ
ಹುಡುಗಿ
ಬಳ್ಳಿ ನಕ್ಷತ್ರ ಎತ್ತಿನ ಕತ್ತಿನನೇಗಿಲ ಬೋಗಿ
ಯ ಎಕ್ಕಡವಿಲ್ಲದ ಗಡಸು ಹೆಜ್ಜೆ.'

ಇದು ನಿಸಾರ್ ಅಹಮದ್‌ರು ಕೊಡುವ ಗಾಂಧೀಬಜಾರಿನ ಬೆಳಗಿನ ಚಿತ್ರಣ. ಈ ಕಳೆ ಇಂದು ಏನಾಗಿದೆ? ಸಾವಿನ ಸೂತಕದ ಛಾಯೆಯನ್ನು ಮೈಮೇಲೆ ಹೊತ್ತು ನಿಂತಂತೆ ಭಾಸವಾಗುತ್ತದೆ. ಇದು ಸರ್ಕಾರ ಯಾವುದೇ ಮುನ್ಸೂಚನೆಯ ಕ್ರಮಗಳಿಲ್ಲದೆ ಏಕಾಏಕಿ ಮಾರುಕಟ್ಟೆಯನ್ನು ಧ್ವಂಸ ಮಾಡಿದ್ದರ ಪರಿಣಾಮ. ಸುಮಾರು 50 ವರ್ಷಗಳಿಂದಲೂ ಗಾಂಧೀಬಜಾರಿನಲ್ಲಿ ಈ ಬಡ ವ್ಯಾಪಾರಸ್ಥರ ಜೀವನ ಸಾಗಿದೆ. ಆವತ್ತಿನಿಂದ ಈವತ್ತಿನವರೆಗೂ ಈ ಜನ ಬೀದಿಬದಿಯ ವ್ಯಾಪಾರವನ್ನು ಮಾಡುತ್ತಿದ್ದಾರೆ. ಹಬ್ಬ-ಹರಿದಿನಗಳಲ್ಲಿ, ಸಾಮಾನ್ಯ ದಿನಗಳಲ್ಲಿ ಇಲ್ಲಿಯ ತರಕಾರಿ, ಹಣ್ಣು-ಹಂಪಲ, ಹೂ, ವೀಳ್ಯದೆಲೆ, ಬಾಳೆಎಲೆ, ಬಾಳೆಸಸಿ, ತಳಿರು ತೋರಣ, ಬಟ್ಟೆಬರೆಗಳ ಕೊಂಡುಕೊಳ್ಳುವಿಕೆ (ವ್ಯಾಪಾರ) ಸರಾಗವಾಗಿ ನಡೆಯಿತ್ತಿತ್ತು. ಜನ ಸಾಮಾನ್ಯರ ಅವಶ್ಯಕತೆಗಳಿಗನುಗುಣವಾಗಿ ಇಲ್ಲಿಯ ಬಾರ್ಗೇನಿಂಗ್ ವ್ಯಾಪಾರ ಸಾಗುತ್ತಿತ್ತು. ಇದು ಸಾಮಾನ್ಯ ಜನಕ್ಕೂ- ಸಣ್ಣ ವ್ಯಾಪಾರಸ್ಥರಿಗೂ ತೀರಾ ಅಗತ್ಯವೂ ಅನಿವಾರ್ಯವೂ ಆಗಿತ್ತು. ಪ್ರತಿಯೊಬ್ಬ ವ್ಯಕ್ತಿಯೂ ದೊಡ್ಡ ದೊಡ್ಡ ಅಂಗಡಿ ಮುಗ್ಗಟ್ಟುಗಳಿಗೋ, ಶಾಪಿಂಗ್ ಮಾಲ್‌ಗಳಿಗೋ ಹೋಗಿ ವ್ಯಾಪಾರ-ವ್ಯವಹಾರ ನಡೆಸಲು ಸಾಧ್ಯವಿಲ್ಲ. ಅಂತವರಿಗೆಲ್ಲ ಈ ಗಾಂಧೀ ಬಜಾರಿನಂತಹ ಬೀದಿ ಬದಿ ಸಸ್ತಾ ಮಾರುಕಟ್ಟೆ ಅತೀ ಅಗತ್ಯ ಮತ್ತು ಅನಿವಾರ್ಯ. ಅಂದಿನಿಂದ ಇಂದಿನವರೆಗೂ ಆ ನಂಟನ್ನು ಜನ ಉಳಿಸಿ ಬೆಳಸಿಕೊಂಡು ಬಂದಿದ್ದಾರೆ.

> ಗಾಂಧೀ ಬಜಾರಿನಂತಹ ಪ್ರದೇಶದಲ್ಲಿನ ಹೂ, ಹಣ್ಣು, ತರಕಾರಿ ಇತ್ಯಾದಿ ಇತ್ಯಾದಿ ಮಾರುವ ಜನರ ಶ್ರಮವಿಲ್ಲದೇ ಬೆಂಗಳೂರು ಈ ಪರಿ ಬೆಳೆದು ಬಿಟ್ಟಿದೆಯೇ ಬೀದಿ ವ್ಯಾಪಾರಿಗಳೇ ಬೇಡ ಎಂಬಷ್ಟು ಬೆಳೆದು ಬಿಟ್ಟಿದೆಯೇ ? ನಮ್ಮನ್ನು ಆಳುವವರ ಆಲೋಚನೆ ಏನು ? ಯಾಕೆ ಬೀದಿ ವ್ಯಾಪಾರಸ್ಥರನ್ನು ಬೀದಿ ಪಾಲಿ ಮಾಡಲಾಗಿದೆ ಇಲ್ಲಿ ?

ಈ ಗಾಂಧೀ ಬಜಾರು ಕೇವಲ ಮಾರುಕಟ್ಟೆ ಮಾತ್ರವಲ್ಲ; ಹಣ್ಣು-ಹಂಪಲಗಳ ಮಾರಾಟ ಕೇಂದ್ರ ಮಾತ್ರವಲ್ಲ. ಬದಲಾಗಿ ಇಲ್ಲಿಯ ಜನರ ಸಂಸ್ಕೃತಿಯ ಜೀವನಾಡಿ. ಈ ಬಜಾರು ಕಲೆ, ಸಾಹಿತ್ಯ, ಸಾಂಸ್ಕೃತಿಕ, ಪರಂಪರೆಗಳೊಂದಿಗೂ ಕೊಂಡಿ ಜೋಡಿಸಿದೆ. ಕಾವ್ಯತ್ವದ ಸ್ಫೂರ್ತಿಯ ಸೆಲೆ ಮತ್ತು ನೆಲೆ ಇಲ್ಲಿಯ ಜನ ಮತ್ತು ಜನಜೀವನವಾಗಿತ್ತು. ಗಾಂಧೀಬಜಾರಿನ ಈ ಬೀದಿಗಳ ಜೊತೆ ಜನರ ಭಾವನಾತ್ಮಕ ಸಂಬಂಧವಿತ್ತು ಮತ್ತು ಕಾವ್ಯ ರಚನೆಗೆ 'ಕನ್ನಡದ ಆಸ್ತಿ'ಯೇ ಆಗಿದ್ದ 'ಮಾಸ್ತಿ', 'ಡಿವಿಜಿ', 'ಬಿಜಿಎಲ್ ಸ್ವಾಮಿ' 'ಲಂಕೇಶ್' ನಡೆದಾಡಿದ ತಾಣ. ಕನ್ನಡದ ಹಲವು ಸಾಹಿತಿಗಳ ಇದರೊಟ್ಟಿಗೆ ಹೊಂದಿದ್ದ ಭಾವನಾತ್ಮಕ ಸಂಬಂಧ. ಸಾಹಿತ್ಯದಲ್ಲಿಯೂ ವ್ಯಕ್ತಗೊಂಡಿದೆ. ಭೂಮಿಗೆ ಕಳೆ ಕಟ್ಟಿದ ಜನ-ಜೀವನವನ್ನು ಮೆಚ್ಚಿದ್ದರು, ಒಪ್ಪಿದ್ದರು, ಪ್ರೀತಿಸಿದ್ದರು. 'ನಿಸಾರ ಅಹಮದ್'ರವಂತೂ 'ಮನಸ್ಸು ಗಾಂಧೀ ಬಜಾರು, ಗಾಂಧೀಬಜಾರಿನ ಬೆಳಗು, ಗಾಂಧೀ ಬಜಾರಿನ ಸಂಜೆ' ಎಂಬ ಕವನಗಳನ್ನೇ ರಚಿಸಿದ್ದರು.

ಏಕಾಏಕಿ ಕಿತ್ತರು

ಜನರ ಜೀವನದಲ್ಲಿ ಹಾಸು ಹೊಕ್ಕಾಗಿರುವ ಈ ಮಾರುಕಟ್ಟೆಯನ್ನು ನಮ್ಮ ಘನ ಸರ್ಕಾರದ ರೂವಾರಿಗಳು(ಅಧಿಕಾರಿಗಳು) ಮಧ್ಯರಾತ್ರಿಯ ವೇಳೆ ಯಾವುದೇ ನೋಟೀಸು ಕೂಡ ನೀಡದೇ ಏಕಾಏಕಿ ಕಿ[illegible]ದ್ದಾರೆ. 6"-4"ರ ಅಳತೆಯಲ್ಲಿ ವ್ಯಾಪಾರಕ್ಕೆ ಅವಕಾಶ ಒದಗಿಸಬಹುದು ಎಂಬ ಹೈಕೋರ್ಟಿನ ಆದೇಶವನ್ನೂ ತಿರಸ್ಕರಿಸಿ ಈ ರೀತಿಯ ಕೆಟ್ಟ ಕೆಲಸ ಸರ್ಕಾರದ ಕಡೆಯಿಂದ ಆಗಿದೆ. ಹಿಂದೊಮ್ಮೆ ಮಡಿವಾಳ ಮಾರುಕಟ್ಟೆಗೂ ಈ ದುಸ್ಥಿತಿ ಒದಗಿತ್ತು. ಸೌಂದರ್ಯೀಕರಣದ ನೆಪದಲ್ಲಿ ಹೀಗೆ ಒಕ್ಕಲೆಬ್ಬಿಸುವ ಕೆಲಸವನ್ನು ಮಾಡಿದ ಅವರಿಗೆ ಇಲ್ಲಿಯ ಭೂಮಿ ಮೇಲೆ ಮಾತ್ರ ಪ್ರೀತಿ; ಇಲ್ಲಿಯ ಜನರ ಮೇಲಲ್ಲ, ಇವರಿಗೆ ಜನರ ಬದುಕಿನ ಬವಣೆಯ ಅರಿವಿಲ್ಲ. ಲಾಭ ಮುಖ್ಯವಾದ್ದರಿಂದ ಇಂತಹ ಜನವಿರೋಧೀ ತಂತ್ರಗಳನ್ನು ಹೆಣೆಯುತ್ತಲೇ ಇದ್ದಾರೆ.

ಈ ಹೀನಾಯ ಕಾರ್ಯವನ್ನು ಕುರಿತು ವಿಚಾರಿಸಲು ಬಿಬಿಎಂಪಿ ಸದಸ್ಯರ ಬಳಿ ವ್ಯಾಪಾರಸ್ಥರೆಲ್ಲ ಸೇರಿ ಹೋದರೆ ಕಾರ್ಪೋರೇಟರ್ ಮಹನೀಯ ನಾಪತ್ತೆ. ಮೊದಲು ಪದೇಪದೇ ಬಂದು ಮುಖ ದರ್ಶನ ನೀಡುತ್ತಿದ್ದ ಅವರು ಈ ಘಟನೆಯ ನಂತರದಲ್ಲಿ ಒಮ್ಮೆಯೂ ಅತ್ತ ಕಡೆ ತಲೆ ಹಾಕಿಲ್ಲ ಎಂಬುದು ಅಲ್ಲಿಯ ವ್ಯಾಪಾರಸ್ಥರ ಅಂಬೋಣ.

ಗರ್ವ

'30 ವರ್ಷಗಳಿಂದ ಮಾಡಲಾಗದ್ದನ್ನು

ಪುಟ 6 ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE
No 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH